ಸಾಹಿತ್ಯ ದಾಸೋಹ – ೨೦೯

ಸಂಚಿಕೆ ೩೩ – ಫೆಬ್ರವರಿ ೨೦೨೩

೦೮.೦೧.೨೦೨೩ರ ದಾಸೋಹದ ಬರಹಗಳ ಸಂಕಲನ





ಶಶಿಧರ ಹಾಲಾಡಿಯವರ ಬರಹಗಳ ಅವಲೋಕನ

ಸಮನ್ವಯ ಸಮಿತಿ * ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸಾಹಿತ್ಯ ದಾಸೋಹ 209ರ ಸಂಚಿಕೆಯನ್ನು ನಿಮ್ಮ ಓದಿಗಾಗಿ ನೀಡುತ್ತಿದ್ದೇವೆ.

ದಿನಾಂಕ 08ನೆಯ ಜನವರಿ 2023ರಂದು 209ನೇ ಸಾಹಿತ್ಯ ದಾಸೋಹವು ಅಂತರಜಾಲ ಮುಖೇನ ಯಶಸ್ವಿಯಾಗಿ ಜರುಗಿದ್ದು, ಅಧ್ಯಕ್ಷತೆಯನ್ನು ಲೇಖಕಿ, ವಿಮರ್ಶಕಿ ಶ್ರೀಮತಿ ಸುಜಾತಾ ರವೀಶ್‌ರವರು ವಹಿಸಿದ್ದರು.

ವೇದಿಕೆಯು ಪ್ರತಿ ತಿಂಗಳೂ ನಡೆಸುತ್ತಿರುವ ಸಾಹಿತ್ಯ ದಾಸೋಹವು ಹೊಸ ಹೊಸ ಬಗೆಯ ಲೇಖನಗಳ ಸೃಷ್ಟಿಗೆ ಕಾರಣವಾಗುತ್ತಿದೆ. ಇದೊಂದು ಸಮಷ್ಟಿ ಕ್ರಿಯೆ. ಪ್ರತಿ ದಾಸೋಹದಲ್ಲೂ ಲೇಖನಗಳನ್ನು ಬರೆಯುತ್ತಾ, ಪರಸ್ಪರ ಕೃತಿಗಳಿಗೆ ಸ್ಪಂದಿಸಿ ಪ್ರೋತ್ಸಾಹಿಸುತ್ತಾ ಬೆರೆಯುವ, ಬೆಳೆಯುವ ಪ್ರಕ್ರಿಯೆ ಜೀವನೋತ್ಸಾಹ ತುಂಬುವುದು.

.

ದಾಸೋಹದಲ್ಲಿ ಪ್ರಸ್ತುತವಾದ ಎಲ್ಲ ಕೃತಿಗಳನ್ನೂ ಕಲೆ ಹಾಕಿ ಸುಂದರ ವಿನ್ಯಾಸದ ಮೆರಗು ನೀಡುವ ಶ್ರೀ ಶೃಂಗೇಶ್ವರ ಶರ್ಮರವರು ಯಾವುದೇ ಮಾಸ ಪತ್ರಿಕೆಗಳಿಗೆ ಕಡಿಮೆಯಿಲ್ಲದಂತೆ ಸಂಚಿಕೆ ಪ್ರಕಟವಾಗಲು ಕಾರಣವಾಗಿದ್ದಾರೆ.

22 ಜನವರಿ 2023ರಂದು ಖ್ಯಾತ ಲೇಖಕ ಶ್ರೀ ಶಶಿಧರ ಹಾಲಾಡಿಯವರ ಕೃತಿಗಳ ಬಗ್ಗೆ ಶ್ರೀಮತಿ ಶ್ರವಣಕುಮಾರಿಯವರು ಅತ್ಯುತ್ತಮ ಉಪನ್ಯಾಸ ನಡೆಸಿಕೊಟ್ಟಿದ್ದಾರೆ. ಆ ಕಾರ್ಯಕ್ರಮದ ವರದಿ ಹಾಗೂ ಉಪನ್ಯಾಸದ ಲಿಖಿತ ರೂಪವೂ ಈ ಸಂಚಿಕೆಯಲ್ಲಿ ಲಭ್ಯವಿದೆ.

ವೇದಿಕೆಯ ಸದಸ್ಯರು ಎಂದಿನಂತೆ ಪ್ರೀತಿ ವಿಶ್ವಾಸದಿಂದ ಈ ಸಂಚಿಕೆಯನ್ನು ಸ್ವಾಗತಿಸುತ್ತೀರಿ ಎಂದು ಭಾವಿಸುತ್ತೇವೆ. ಸದಸ್ಯರು ತಮ್ಮ ಸಾಹಿತ್ಯಾಸಕ್ತ ಬಂಧು ಮಿತ್ರರಿಗೂ ಹೆಮ್ಮೆಯಿಂದ ಈ ಸಂಚಿಕೆಗಳನ್ನು ಕಳುಹಿಸಬಹುದು

ನಿಮ್ಮ ಸಲಹೆ ಅಭಿಪ್ರಾಯಗಳಿಗೆ ಸದಾ ಸ್ವಾಗತ.

ಧನ್ಯವಾದಗಳು.

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ
ನೋಡಿಯೋ ದಾಸೋಹ ವೇದಿಕೆ, ಬೆಂಗಳೂರು

11.02.2023

ದಾಸೋಹದ ಪುಟಗಳಲ್ಲಿ ...

ಮುಖಚಿತ್ರ: ಕರ್ನಾಟಕ ಕರಾವಳಿಯ ಹೆಮ್ಮೆಯ ಕಂಬಳ

ಚಿತ್ರಕೃಪೆ: ಅಂತರ್ಜಾಲ – ಕರ್ನಾಟಕ ಪ್ರವಾಸೋದ್ಯಮ ಇಲಾಖೆ

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ 208

ಕಾರ್ಯಕ್ರಮ ವರದಿ: ರಾಧಿಕಾ ಗುಜ್ಜರ್

2023ರ, ಹೊಸ ಕ್ಯಾಲೆಂಡರ್ ವರ್ಷದ ಮೊದಲ ಸಾಹಿತ್ಯ ದಾಸೋಹವು 08ನೆಯ ಜನವರಿ 2023ರಂದು ಸದಸ್ಯರೆಲ್ಲರೂ ಒಬ್ಬರಿಗೊಬ್ಬರು ಹೊಸ ವರ್ಷದ ಶುಭಾಶಯಗಳ ವಿನಿಮಯ ಮಾಡುವ ಹರ್ಷದ ಕಲರವದೊಂದಿಗೆ ಅಂತರ್ಜಾಲ ಮುಖೇನ ಆರಂಭವಾಯಿತು.

ಪ್ರಸ್ತಾವನೆಯಲ್ಲಿ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಜನವರಿ ಹಾಗೂ ಫೆಬ್ರುವರಿ ತಿಂಗಳಲ್ಲಿ ಜರುಗಲಿರುವ ಎರಡು ಮುಖ್ಯ ಕಾರ್ಯಕ್ರಮಗಳ ಬಗ್ಗೆ ವಿವರ ನೀಡಿದರಲ್ಲದೆ, 31.12.2022ರಂದು ಹಳೆಗನ್ನಡ ಶಾಲೆ (ಕವಿ ರಾಘವಾಂಕನಿಂದ ರಚಿತ ಸತ್ಯ ಹರಿಶ್ಚಂದ್ರ ಗ್ರಂಥದ ವಿಸ್ತೃತ ಓದು ಮುಗಿಸಿ) ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಆಯೋಜಿಸಿದ, ಶ್ರೀಮತಿ ಜಯರಾಮ್ ಅವರ ಗಮಕ ರೂಪಕದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ವೇದಿಕೆಯ ನವೆಂಬರ್ ತಿಂಗಳ ಚಟುವಟಿಕೆಯಾದ ಕೃತಿ ಪರಿಚಯ ಅಭಿಯಾನದಲ್ಲಿ, ಕೃತಿ ಪರಿಚಯ ಮಾಡಿದ ಎಲ್ಲರ ಬರಹಗಳ ಒಟ್ಟಾರೆ ವಿಸ್ತೃತ ಸ್ಪಂದನೆಯನ್ನು ನೀಡಿದ ಶ್ರೀ ಬಿ.ಎಸ್. ಶ್ರೀನಿವಾಸ್, ಶ್ರೀ ಹು.ವಾ. ಶ್ರೀಪ್ರಕಾಶ್ ಹಾಗೂ ಶ್ರೀ ವಿಜಯಕುಮಾರ್ ಸುರತ್ಕಲ್ ಅವರನ್ನು ವಂದಿಸಿದರು. ಶ್ರೀ ಶೃಂಗೇಶ್ವರ ಶರ್ಮರ ದಾಸೋಹ ಮಾಸ ಪತ್ರಿಕೆಯ ನಿರ್ವಹಣೆಯ ಹಿಂದಿನ ಆಸಕ್ತಿ ಹಾಗೂ ಶ್ರಮವನ್ನು ಶ್ಲಾಘಿಸಿದರು.



ಕಾರ್ಯಕ್ರಮದ ಸ್ವಾಗತ ಹಾಗೂ ಅಧ್ಯಕ್ಷರಾದ ಶ್ರೀಮತಿ. ಸುಜಾತ ರವೀಶ್ ಅವರ ಪರಿಚಯವನ್ನು ಶ್ರೀ ಕೆ ಆರ್ ವೆಂಕಟೇಶ್ (ಮನೋಹಂಸ) ಅವರು ನಿರ್ವಹಿಸಿಕೊಟ್ಟರು.

ಶ್ರೀ ಶೃಂಗೇಶ್ವರ ಶರ್ಮರವರು ಹಿಂದಿನ 208ನೆಯ ಸಾಹಿತ್ಯ ದಾಸೋಹದ ಮಾಸಿಕ ಸಂಚಿಕೆಯನ್ನು ಪಿಡಿಎಫ್ ರೂಪದಲ್ಲಿ ಬಿಡುಗಡೆಗೊಳಿಸಿ ಪರಿಚಯಿಸಿದರು.

ತದನಂತರ ದಾಸೋಹದ ಸೂತ್ರಧಾರರಾದ ಶ್ರೀ ಕೆ.ಎನ್. ಮಹಾಬಲ ಅವರ ನಿರ್ದೇಶನದಲ್ಲಿ ಒಟ್ಟು 14 ಲೇಖಕರು ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಿಪಡಿಸಿದರು.

ಪ್ರಸ್ತುತಿಗಳು ಮುಗಿದ ನಂತರ ಕವಯಿತ್ರಿ, ಕಥೆಗಾರ್ತಿ, ವಿಮರ್ಶಕಿ, ಅಂಕಣಗಾರ್ತಿ ಹಾಗೂ ಹತ್ತು ಹಲವು ಸಾಹಿತ್ಯ ಚಟುವಟಿಕೆಗಳಿಗೆ ತೆರೆದುಕೊಂಡಿರುವ ಅಪ್ಪಟ ಕನ್ನಡ ಭಾಷಾ ಪ್ರೇಮಿ ಮತ್ತು ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಸುಜಾತಾ ರವೀಶ್ ಅವರು ಪ್ರಸ್ತುತಿಗಳ ಬಗ್ಗೆ ಸ್ಪಂದಿಸುವ ಮೊದಲು ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಲು ನಮ್ಮಿಂದಾಗಬೇಕಾದ ಪ್ರಯತ್ನಗಳ ಕುರಿತು ಅತ್ಯುತ್ತಮ ಸಲಹೆಗಳನ್ನು ದಾಖಲಿಸಿದರು. ಕನ್ನಡಪರ ಕಾಳಜಿಯನ್ನು ವ್ಯಕ್ತಪಡಿಸಿದ ಅವರ ನುಡಿಗಳು ಮೌಲಿಕವಾಗಿದ್ದವು. ಎಲ್ಲರ ಪ್ರಸ್ತುತಿಗಳ ಬಗ್ಗೆ ವಿವರವಾದ ಹಾಗೂ ಅಷ್ಟೇ ಅಚ್ಚುಕಟ್ಟಾದ ವಿಮರ್ಶೆಯನ್ನೂ ಅವರು ನೀಡಿದರು.

ಕೊನೆಯಲ್ಲಿ ಶ್ರೀ ವೆಂಕಟೇಶ ಕಾಮತ್‌ರವರು ವಂದನಾರ್ಪಣೆ ಮಾಡಿದರು. ಶ್ರೀ ಕೆ ಎನ್ ಮಹಾಬಲ ಅವರ ಒಂದು ಅತ್ಯಂತ ಅರ್ಥಪೂರ್ಣ ಕವನ 'ಸಾವಿನ ಮನೆ'ಯ ವಾಚನದೊಂದಿಗೆ ಸಾಹಿತ್ಯ ದಾಸೋಹ 208 ಮುಕ್ತಾಯವಾಯಿತು.

***

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ


ಶ್ರೀ ಶಶಿಧರ ಹಾಲಾಡಿಯವರ ಬರಹಗಳು – ಒಂದು ಅವಲೋಕನ

ಉಪನ್ಯಾಸ ಮತ್ತು ಸಂವಾದ : ಶ್ರೀಮತಿ ಟಿ.ಎಸ್.ಶ್ರವಣಕುಮಾರಿ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ದಿನಾಂಕ 28ನೆಯ ಜನವರಿ 23ರಂದು ಸಂಜೆ 05.00 ಗಂಟೆಗೆ ಗೂಗಲ್ ಮೀಟ್ ಅಂತರಜಾಲದ ಮುಖೇನ ಕಾರ್ಯಕ್ರಮ ಆರಂಭವಾಯ್ತು.

ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರರವರು ಮಾತನಾಡಿ, ಇಂದಿನ ಕಾರ್ಯಕ್ರಮ ವಿಶಿಷ್ಟವಾಗಿದೆ, .ನಮ್ಮ ವೇದಿಕೆಯ ಸದಸ್ಯರಿಗೆ ಹೆಚ್ಚಿನ ಅವಕಾಶ ನೀಡಿ ಅವರ ಶಕ್ತಿಯನ್ನು ಗುರುತಿಸಿ ಮುನ್ನಲೆಗೆ ತರುವ ಪ್ರಯತ್ನವನ್ನು ನಾವು ಸದಾ ಮಾಡುತ್ತ ಬಂದಿದ್ದೇವೆ. ಶ್ರೀ ಶಶಿಧರ ಹಾಲಾಡಿಯವರು ಈಗ ಹೆಚ್ಚು ಚರ್ಚಿತವಾಗುತ್ತಿರುವ ಕಾದಂಬರಿಕಾರರಾಗಿದ್ದಾರೆ ಎನ್ನುವುದು ಗಮನೀಯವಾದ ಅಂಶ. ಉತ್ತಮ ಬರಹಗಾರರನ್ನು ಬೆಳೆಸುತ್ತಿರುವ ಇವರ ಪ್ರೋತ್ಸಾಹದಿಂದಾಗಿ ವೇದಿಕೆಯ ಹಲವು ಸದಸ್ಯರ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಹಾಲಾಡಿಯವರ ಕೃತಿಗಳ ಬಗ್ಗೆ ಇಂದು ಶ್ರೀಮತಿ ಟಿ.ಎಸ್. ಶ್ರವಣಕುಮಾರಿಯವರು ಮಾತನಾಡುತ್ತಿದ್ದಾರೆ .ಒಬ್ಬರು ಘಟ್ಟದ ಮೇಲಿನ ಹಾಗೂ ಮತ್ತೊಬ್ಬರು ಘಟ್ಟದ ಕೆಳಗಿನ ಗ್ರಾಮೀಣ ಹಿನ್ನೆಲೆಯಿಂದ ಬಂದವರು. ಇಬ್ಬರೂ ಓತಪ್ರೋತವಾಗಿ ಬರೆಯಬಲ್ಲವರು. ಶ್ರವಣಕುಮಾರಿಯವರು ಇಂದಿನ ಕಾರ್ಯಕ್ರಮದಲ್ಲಿ ನಮ್ಮನ್ನು ಹಾಲಾಡಿಯವರ ಪ್ರಪಂಚಕ್ಕೆ ಒಯ್ಯಲಿದ್ದಾರೆ ಎಂದರು.



ಶ್ರೀ ರವಿ ಕುಸುಬಿಯವರು ಎಲ್ಲರನ್ನೂ ಸ್ವಾಗತಿಸಿ, ಶ್ರೀ ಶಶಿಧರ ಹಾಲಾಡಿ ಹಾಗೂ ಶ್ರೀಮತಿ ಶ್ರವಣಕುಮಾರಿ ಯವರನ್ನು ಸಂಕ್ಷಿಪ್ತವಾಗಿ ಪರಿಚಯಿಸಿದರು.

ಶ್ರೀ ಶಶಿಧರ ಹಾಲಾಡಿಯವರು ಉಡುಪಿ ಜಿಲ್ಲೆ ಕುಂದಾಪುರ ತಾಲೂಕು ಹಾಲಾಡಿಯಲ್ಲಿ ಜನಿಸಿದರು ಇವರು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂಎ ಪದವಿಯಲ್ಲಿ ಮೊದಲ ರ್‍ಯಾಂಕ್ ಗಳಿಸಿ ಚಿನ್ನದ ಪದಕ ಪಡೆದಿದ್ದಾರೆ ಸಣ್ಣ ಕಥೆ, ಕಾದಂಬರಿ, ಪ್ರವಾಸ ಕಥನ, ಕವನ, ನುಡಿಚಿತ್ರ, ಅಂಕಣ ಬರಹಗಳನ್ನು ಬರೆದಿರುವ ಇವರು ಮೈಸೂರು ಬ್ಯಾಂಕಿನಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ ಸ್ವಯಂ ನಿವೃತ್ತಿ ಪಡೆದಿದ್ದು, ಪ್ರಸ್ತುತ ಬೆಂಗಳೂರಿನ 'ವಿಶ್ವವಾಣಿ' ದಿನಪತ್ರಿಕೆಯ ಪುರವಣಿ ವಿಭಾಗದಲ್ಲಿ ಮುಖ್ಯ ಉಪ ಸಂಪಾದಕರಾಗಿದ್ದಾರೆ. ಶ್ರೀ ಹಾಲಾಡಿಯವರು ಒಟ್ಟು ಹದಿನಾಲ್ಕು ಕೃತಿಗಳನ್ನು ಪ್ರಕಟಿಸಿದ್ದು, ಅವುಗಳಲ್ಲಿ ಅಬ್ಬೆ, ಕಾಲಕೋಶ ಎಂಬ ಎರಡು ಕಾದಂಬರಿಗಳು,

ನಾ ಸೆರೆ ಹಿಡಿದ ಕನ್ಯಾಸ್ತ್ರೀ (ಪ್ರಬಂಧ ಸಂಕಲನ), ಚಿತ್ತ ಹರಿದತ್ತ (ಅಂಕಣ ಬರಹಗಳು), ದೇವರು ಎಚ್ಚರಗೊಂಡಾಗ (ಪ್ರವಾಸ ಕಥನ), ಮನದ ಹಾಯಿದೋಣಿ (ಅಂಕಣ ಬರಹಗಳು), ಅಮ್ಮಮ್ಮನ ದೀಪಾವಳಿ (ಹಳ್ಳಿಯ ನೆನಪುಗಳು), ಓಲಿ ಕೊಡೆ (ಪರಿಸರ ಪ್ರಬಂಧಗಳು), ಸುಮ ಅರಳುವ ಸಮಯ (ಪ್ರಬಂಧಗಳು), ಟುವ್ವಿ ಹಕ್ಕಿಯ ಗೂಡು (ಅಂಕಣ ಬರಹಗಳು), ಬೆನಗಲ್ ನರಸಿಂಗರಾವ್ (ವ್ಯಕ್ತಿಚಿತ್ರ), ಪ್ರಕೃತಿ ಪ್ರಪಂಚ (ಅಂಕಣ ಬರಹ), ಹಿತ್ತಲಿನಿಂದ ಹಿಮಾಲಯಕ್ಕೆ (ಚಾರಣ ಬರಹ) ಮೊದಲಾದುವು ಇವರ ಪ್ರಮುಖ ಕೃತಿಗಳು.

ಶ್ರೀ ಶಶಿಧರ ಹಾಲಾಡಿಯವರಿಗೆ ಅವ್ವ ಸಾಹಿತ್ಯ ವೇದಿಕೆ ಪ್ರಶಸ್ತಿ (ಚಿತ್ತ ಹರಿದತ್ತ ಕೃತಿಗೆ) ಅಬ್ಬೆ ಕಾದಂಬರಿಗೆ ಬೆರಗು ಸಾಹಿತ್ಯ ಪ್ರಶಸ್ತಿ, ಹಾಮಾನಾ ಕನ್ನಡ ಜಾಗೃತಿ ಪ್ರಶಸ್ತಿ, ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ತಿನ ಕನ್ನಡ ಸೇವಾರತ್ನ ಮತ್ತು ಜ್ಞಾನಗಂಗಾ ವೇದಿಕೆಯ ಕರುನಾಡು ಸೇವಾರತ್ನ ಮುಂತಾದ ಅನೇಕ ಪ್ರಶಸ್ತಿಗಳು ಸಂದಿವೆ.

ಶ್ರೀ ಶಶಿಧರ ಹಾಲಾಡಿಯವರ ಕೃತಿಗಳನ್ನು ಪರಿಚಯಿಸಲಿರುವ ಶ್ರೀಮತಿ ಟಿ.ಎಸ್. ಶ್ರವಣಕುಮಾರಿಯವರು ಉತ್ತಮ ಲೇಖಕಿ. ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದವರು. ಇವರು ನಿವೃತ್ತಿಯ ನಂತರ ಹಲವು ಪ್ರವಾಸ ಕಥನ ಮತ್ತು ಸಣ್ಣ ಕಥೆಗಳ ಸಂಕಲನವನ್ನು ಪ್ರಕಟಿಸಿದ್ದಾರೆ ಎಂದು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ನಂತರ ಸುಮಾರು ಒಂದು ಗಂಟೆಗಳ ಕಾಲ ಶ್ರೀಮತಿ ಶ್ರವಣಕುಮಾರಿಯವರು ಕೇಳುಗರನ್ನು ಹಾಲಾಡಿಯವರ ಪ್ರಪಂಚಕ್ಕೆ ಒಯ್ದರು. ಈ ಕಾರ್ಯಕ್ರಮದಂದೇ ಹಾಲಾಡಿ ಯವರ ಅಬ್ಬೆ ಕಾದಂಬರಿಗೆ ಪ್ರಶಸ್ತಿ ದೊರೆತಿರುವುದು ಹೆಮ್ಮೆ ಮತ್ತು ಸಂತೋಷದ ವಿಚಾರ ಎಂದು ಹೇಳಿ ಮಾತು ಆರಂಭಿಸಿದರು.

ಒಂದು ಗಂಟೆಯಲ್ಲಿ ಎಲ್ಲ ಕೃತಿಗಳ ಬಗ್ಗೆ ಮಾತನಾಡುವುದು ಕಷ್ಟ ಸಾಧ್ಯ. ಇದೊಂದು ಸಂಪೂರ್ಣ ಅವಲೋಕನವಾಗದಿದ್ದರೂ ಕೇಳಿದವರಿಗೆ ಅವರ ಪುಸ್ತಕ ಓದಬೇಕು ಎಂಬ ಕುತೂಹಲ ಮೂಡಿಸಿದರೆ ಅಷ್ಟರಮಟ್ಟಿಗೆ ಇಂದಿನ ಉಪನ್ಯಾಸ ಅರ್ಥಪೂರ್ಣವಾಗುತ್ತದೆ ಎಂದು ಭಾವಿಸುವೆ. ಶಶಿಧರ ಹಾಲಾಡಿ ಅವರ ಎಂಟು ಸಂಕಲನಗಳಲ್ಲಿ ಆರು ಸಂಕಲನ ಮತ್ತು ಎರಡು ಕಾದಂಬರಿಗಳ ಅವಲೋಕನವನ್ನು ಹಾಲಾಡಿಯವರ ಬರವಣಿಗೆಯ ನಡೆ ಗುರುತಿಸಲು ಅನುವಾಗುವಂತೆ ಪ್ರಕಟಗೊಂಡ ಅನುಕ್ರಮದಲ್ಲಿಯೇ ಪರಿಚಯಿಸಿದರು .

ಲೇಖನಗಳ ವಿಷಯ ವೈವಿಧ್ಯತೆ, ಪ್ರಕೃತಿಯ ರುದ್ರ ರಮಣೀಯ ಚಿತ್ರಣ, ಪರಿಸರ ಮತ್ತು ಜಾಗತಿಕ ವಿಚಾರಗಳು, ಕರಾವಳಿಯ ವಿಶಿಷ್ಟ ಸಂಪ್ರದಾಯಗಳು ಹೀಗೆ ಎಲ್ಲ ಪ್ರಬಂಧಗಳ ವಸ್ತು ಮತ್ತು ವಿಶಿಷ್ಟತೆಯ ಬಗ್ಗೆ ಮಾತನಾಡಿದ ಶ್ರವಣಕುಮಾರಿಯವರು ಹಲವು ಸ್ವಾರಸ್ಯಕರ ಸಂಭಾಷಣೆಗಳನ್ನು ಇರುವಂತೆಯೇ ಓದಿ ಹಾಲಾಡಿಯವರ ಸುಂದರ ಪರಿಸರ ಮತ್ತು ವಿಚಾರ ಪ್ರಪಂಚಕ್ಕೆ ಒಯ್ದರು. ಹಾಲಾಡಿಯವರ ಕೃತಿಗಳು ಸಮೃದ್ಧ ಬಾಲ್ಯದ ಚಿತ್ರಣದೊಂದಿಗೆ ಆ ಕಾಲದ ಚರಿತ್ರೆಯ ದಾಖಲೀಕರಣದ ದೃಷ್ಟಿಯಿಂದಲೂ ಮಹತ್ವ ಪಡೆಯುತ್ತವೆ ಎಂದರು.

'ಕಾಲಕೋಶ' ಕಾದಂಬರಿ ಒಂದು ವಲಸೆಯ ಕಥನ. ಸಾಮಾಜಿಕ ರಾಜಕೀಯ ವಿಪ್ಲವಗಳಿಂದ ವಲಸೆ ಹೋಗುವ ಸ್ಥಿತಿ, ಮಾನಸಿಕ ದೈಹಿಕ ನೋವು, ಹಪಾಹಪಿಗಳನ್ನು ಅತಿರಂಜನೆ ಇಲ್ಲದೆ ವಸ್ತುನಿಷ್ಠವಾಗಿ ಓದುಗರಿಗೆ ದಾಟಿಸುವ ನಿರೂಪಣಾ ಶೈಲಿ ಓದುಗರನ್ನು ಆಕರ್ಷಿಸುತ್ತದೆ. ಪ್ರೀತಿ, ವಿಶ್ವಾಸ, ದ್ರೋಹ ಎಲ್ಲವನ್ನೂ ಸಹಜವಾಗಿ ಕೃತಿಯಲ್ಲಿ ಬಿಂಬಿಸಲಾಗಿದೆ. ಮನುಷ್ಯನ ಮನದಾಳದ ಕ್ರೌರ್ಯ, ದೇಶ ವಿಭಜನೆಯ ದಳ್ಳುರಿಯ ಸನ್ನಿವೇಶ ಮತ್ತು ಎಂಬತ್ತಾಲ್ಕನೇ ಇಸವಿಯಲ್ಲಿ ಸಂಭವಿಸಿದ ಗಲಭೆಯ ಹಿನ್ನೆಲೆಯಲ್ಲಿ ಮೂಡಿರುವ ಈ ಕಾದಂಬರಿ ಒಂದು ಮೌಲಿಕವಾದ ಕೃತಿ ಎಂದರು.

ಹಾಲಾಡಿಯವರ ಇತ್ತೀಚಿನ ಕಾದಂಬರಿ 'ಅಬ್ಬೆ'ಯ ಬಗ್ಗೆ ಮಾತನಾಡಿ, ಕಾಲ್ಪನಿಕ ಕಥಾ ಹಂದರದಲ್ಲಿ ಮೂಡಿರುವ ಈ ಕೃತಿ ಯಾರೂ ನೋಡಿಲ್ಲದ ಒಂದು ಪ್ರಕಾರದ ಜೇಡದ ದಂತ ಕಥೆಯಾಗಿದ್ದು, ಕಾಲ್ಪನಿಕ ಅನಿಸದೆ ನೈಜ ಕತೆ ಎನಿಸುವಂತಿದೆ. ಇಲ್ಲಿ ಪರಿಸರದ್ದೇ ಮುಖ್ಯ ಪಾತ್ರ.. ಸೃಷ್ಟಿಯಲ್ಲಿ ಯಾವ ಜೀವಿಗಳೂ ನಗಣ್ಯವಲ್ಲ .ಜೀವ ವೈವಿಧ್ಯ, ಸಸ್ಯ ವೈವಿಧ್ಯ ನಾಶವಾಗಬಾರದು. ಪ್ರಕೃತಿಯ ಒಂದು ಕೊಂಡಿ ಕಳಚಿದರೂ ಅದು ಅಸಮತೋಲನಕ್ಕೆ ಕಾರಣವಾಗುತ್ತದೆ ಎಂಬ ನಿಸರ್ಗದ ಅದ್ಭುತ ಸಂದೇಶ ಕೃತಿಯಲ್ಲಿ ಅಡಕವಾಗಿದೆ ಎಂದರು.

ಶ್ರವಣಕುಮಾರಿಯವರು ಶಶಿಧರ ಹಾಲಾಡಿಯವರ ಇತರ ಎಲ್ಲ ಕೃತಿಗಳ ಮೇಲೆ ಸಮಗ್ರ ನೋಟ ಹರಿಸಿ, ಸಂಕ್ಷಿಪ್ತವಾಗಿ ಅವುಗಳ ಸಾರವನ್ನು ಉಣಬಡಿಸಿದ ಬಗೆ ವೀಕ್ಷಕರ ಅಪಾರ ಮೆಚ್ಚುಗೆ ಗಳಿಸಿತು.

ಶ್ರೀ ಶಶಿಧರ ಹಾಲಾಡಿಯವರು ಮಾತನಾಡಿ, ವೇದಿಕೆಗೆ ಧನ್ಯವಾದ ಅರ್ಪಿಸಿದರು. ಶ್ರವಣಕುಮಾರಿಯವರು ವಿವರವಾಗಿ ಎಲ್ಲ ಕೃತಿಗಳ ಬಗ್ಗೆ ಮಾತನಾಡಿದ ರೀತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ತನ್ನ ಮೊದಲ ಕತೆಯನ್ನು ನಾಲ್ಕನೇ ಕ್ಲಾಸಿನಲ್ಲೇ ಬರೆದಿದ್ದೆ, ಪಿಯುಸಿಯಲ್ಲಿರುವಾಗ ಕೈಬರಹದ ಪತ್ರಿಕೆ ತರುತ್ತಿದ್ದೆ. ಅಂಕಣ ಬರೆಯುವುದು ನನ್ನ ಮಧುರ ಹವ್ಯಾಸ ಎಂದ ಅವರು, ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಕನ್ನಡ ಬಳಗ ತನ್ನ ಮೊದಲ ಕೃತಿಯನ್ನು ಪ್ರಕಟಮಾಡಿದ್ದನ್ನು ಸ್ಮರಿಸಿದರು. ಸಾರ್ವಜನಿಕ ಕ್ಷೇತ್ರದ ಬ್ಯಾಂಕೊಂದು ತನ್ನ ಸಿಬ್ಬಂದಿಗಳಲ್ಲಿರುವ ಸಾಹಿತ್ಯಕ ಪ್ರತಿಭೆಯನ್ನು ಗುರುತಿಸಿ ಪ್ರತಿಯೊಂದು ಕೃತಿಗಳಿಗೂ ಐದು ಸಾವಿರ ರೂ.ಗಳ ಪ್ರೋತ್ಸಾಹಧನ ನೀಡಿ, ಬ್ಯಾಂಕಿನ ಕನ್ನಡ ಬಳಗದ ಮೂಲಕ ಹತ್ತು ಲೇಖಕರ ಕೃತಿಗಳನ್ನು ಒಟ್ಟಿಗೇ ಪ್ರಕಟಿಸಿದ್ದು ದೇಶದ ಬ್ಯಾಂಕಿಂಗ್ ಇತಿಹಾಸದಲ್ಲೇ ಮೊದಲು ಎಂದು ಸ್ಮರಿಸಿದರು. ಶ್ರೀಮತಿ ಶ್ರವಣಕುಮಾರಿಯವರು ಉತ್ತಮ ವಿಚಾರಗಳನ್ನು ನನ್ನ ಬಗ್ಗೆ ಹೇಳಿದ್ದಾರೆ. ಕನ್ನಡದಲ್ಲಿ ಪರಿಸರ ಸಂಬಂಧಿ ಬರಹಗಳಿಗೆ ಶಿವರಾಮ ಕಾರಂತರು, ಪೂರ್ಣಚಂದ್ರ ತೇಜಸ್ವಿ ಹಾಗೂ ಜಿ.ಜಿ.ಎಲ್. ಸ್ವಾಮಿ ಈ ಮೂವರು ಮುಖ್ಯವಾಗಿ ಬುನಾದಿ ಹಾಕಿದ್ದಾರೆ. ಈ ಪರಂಪರೆ ಮುಂದುವರೆಸುವ ಕಿರು ಪ್ರಯತ್ನ ನಾನು ಮಾಡೀದ್ದೇನೆ ಅಷ್ಟೆ. ಇದನ್ನು ಗುರುತಿಸಿರುವುದು ಸಂತಸ ತಂದಿದೆ ಎಂದರು. ಇತ್ತೀಚೆಗೆ 'ಅಬ್ಬೆ' ಕೃತಿಯ ಬಗ್ಗೆ ನಡೆದ ಪುಸ್ತಕ ಮಂಥನ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದನ್ನು ಹೇಳಿ ಎಲ್ಲ ತಾಲ್ಲೂಕುಗಳಲ್ಲಿಯೂ ಆಗಿಂದಾಗ್ಗೆ ಪುಸ್ತಕ ಮಂಥನದಂತಹ ಕಾರ್ಯಕ್ರಮಗಳು ನಡೆದರೆ ಕನ್ನಡ ಕೃತಿಗಳಿಗೆ ಹೆಚ್ಚು ಮಹತ್ವ ದೊರೆಯಬಹುದು ಎಂದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ವೀಕ್ಷಕರ ಹಲವು ಪ್ರಶ್ನೆಗಳಿಗೆ ಶ್ರೀ ಶಶಿಧರ ಹಾಲಾಡಿ ಹಾಗೂ ಶ್ರೀಮತಿ ಶ್ರವಣಕುಮಾಯವರು ಉತ್ತರಿಸಿದರು.

ಕೊನೆಯಲ್ಲಿ ಶ್ರೀ ಎಸ್. ಶ್ರಂಗೇಶ್ವರ ಶರ್ಮರವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸುತ್ತಾ ಶ್ರೀ ಶಶಿಧರ ಹಾಲಾಡಿಯವರ ಮತ್ತು ತಮ್ಮ ಒಡನಾಟದ ಹಲವು ನೆನಪುಗಳನ್ನು ಸ್ಮರಿಸಿದರು. ಮೈಸೂರು ಬ್ಯಾಂಕಿನ ಕನ್ನಡ ವಿಭಾಗದ ಅಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದ ಹಾಲಾಡಿಯವರು ಹಲವು ಬ್ಯಾಂಕಿಂಗ್ ಕಮ್ಮಟಗಳಲ್ಲಿಯೂ ಸಕ್ರಿಯರಾಗಿದ್ದರು ಎಂಬುದನ್ನು ನೆನಪು ಮಾಡಿದರು.

ಶ್ರೀಮತಿ ರಾಧಿಕಾ ಗುಜ್ಜರ್‌ರವರು ಕಾರ್ಯಕ್ರಮದ ಆತಿಥ್ಯವಹಿಸಿದ್ದರು. ಶ್ರೀ ಗುರುರಾಜ ಶಾಸ್ತ್ರಿಯವರು ವೀಡಿಯೋ ಸಂಸ್ಕರಣ ಮಾಡಿದರು.

ಉಪನ್ಯಾಸದ ಪೂರ್ಣ ಪಾಠ ಈ ಸಂಚಿಕೆಯಲ್ಲಿ ಲಭ್ಯವಿದೆ. ಸಾಹಿತ್ಯ ದಾಸೋಹ ಯುಟ್ಯೂಬ್ ನಲ್ಲಿ ಕಾರ್ಯಕ್ರಮದ ವೀಡಿಯೋ ಲಭ್ಯವಿದೆ. ಆಸಕ್ತರು ಗಮನಿಸಬಹುದು.

***

ಸಾಕ್ಷರತೆ

–ಮನೋಹಂಸ

ಓದು ಬರಹ ಕಲಿಯಿರಿಣ್ಣಾ
ನೀವೆಲ್ಲ ಜೀವನವಿಡೀ ನಲಿಯಿರಣ್ಣಾ

ಶಾಲೆಗೆ ಹೋಗಿ ನೀವೆಲ್ಲ
ಶಿಕ್ಷಣವನ್ನು ಪಡೆಯಿರಿ
ಓದು ಬರಹ ಕಲಿತರೆ ನೀವು
ತಲೆಯನ್ನೆತ್ತಿ ನಡೆಯುವಿರಿ

ಸಾಲದ ಪತ್ರಗಳಿಗೆ ನೀವು
ಹೆಬ್ಬೆಟ್ಟನ್ನು ಒತ್ತುತ್ತೀರ
ದಾಖಲೆಯ ಓದಲು ಬಾರದೆ
ಮೋಸ ಹೋದರೂ ಹೋಗುತ್ತೀರ

ಬಸ್ಸಿನ ಸಂಖ್ಯೆ ಓದಲು ಬಾರದೆ
ತಲೆಯ ಕೆಡಿಸಿಕೊಳ್ಳುತ್ತೀರ
ಪಕ್ಕದವರನು ಪದೇ ಪದೇ
ಕೇಳಿ ಬೈಗಳು ತಿನ್ನುತ್ತೀರ

ಬ್ಯಾಂಕಿಗೆ ಹೋಗಿ ಚಲನ್
ಬರೆಯಲಾಗದೆ ಕಣ್ಣು ಬಿಡುತ್ತೀರ
ಅಲ್ಲಿರುವವರನು ಪೂಸಿ ಮಾಡಿ
ಚಲನ್ ಬರೆಯಲು ಕೇಳುತ್ತೀರ

ಹಣದ ಸಂಪಾದನೆಗಿಂತ
ಜ್ಞಾನ ಸಂಪಾದನೆ ಮೇಲು
ಶಿಕ್ಷಣವ ಪಡೆದ ಮೇಲೆ
ಇರದು ಕೀಳರಿಮೆಯ ಗೋಳು

ಸಾಕ್ಷರತೆಯ ಪಡೆದು ನೀವು
ಅಜ್ಞಾನವ ಹೊರಗೆ ದೂಡಿ
ವಿದ್ಯಾವಂತರಾಗಿ ನೀವು
ಸಮಾಜಕ್ಕೆ ಬೆಳಕು ನೀಡಿ

ಓದು ಬರಹ ಕಲಿಯಿರಿಣ್ಣಾ
ನೀವೆಲ್ಲ ಜೀವನವಿಡೀ ನಲಿಯಿರಣ್ಣಾ

***

ಕಂಬಗಳು

– ಪೋರ

ಈ ದೇಶದ ತುಂಬ ಕಂಬಗಳು
ನಾವೇ ಚಂದ ಕೆತ್ತಿದ
ತಲೆ ಎತ್ತಿ ನೋಡಿರೆಂದು ನೆಟ್ಟ
ಕಂಬಗಳು

ನಮ್ಮ ಸುತ್ತ ಕೆಲವರು ಹೀಗೇ
ನೆಲದಲಿ ನಿಂತರೂ
ಮೋಡವ ಮುತ್ತುವ ದುಂಬಿಗಳು
ನುಣ್ಣನೆ ತಣ್ಣನೆ ಕಂಬಗಳು

ಎತ್ತರ, ಇನ್ನೂ ಎತ್ತರ ಬೆಳೆದರೂ
ಎಂದಿಗೂ ಅಪ್ಪದ,
ಅಪ್ಪೀ ತಪ್ಪೀ ತಾಕಿದರೆ ಕಿಡಿ ಕಾರುವ
ಠೊಳ್ಳು ಬಿದಿರು ಬೊಂಬುಗಳು

ಹಸಿರು ಹುಲ್ಲಿನ ಮೇಲೆ
ಸಂಜೆಯ ನೆರಳೂ ಸಹ
ಸಮಾನಾಂತರ ಗೆರೆಗಳು

ಗುಬ್ಬಿಗೆ ಗೂಡು ಕಟ್ಟಲು ದಕ್ಕದ
ತಮ್ಮ ಮುಖಕೇ ಬೆಳಕನು ಹಿಡಿದ
ಬಾಗದೆ ಬೀಗುವ
ಗಾಳಿಗೆ ಬೀಳುವ
ಲಾಂದ್ರಗಳು

ಸುಡುವ ಬಿಸಿಲಿಗೆ
ಸುರಿವ ಮಳೆಗೆ
ಇವು ಅಲ್ಲ ಕೊಡೆಗಳು

ತಬ್ಬುವುದಿಲ್ಲ ಹಸಿರು ಬಳ್ಳಿಗಳು
ಕಂಬಗಳು, ಬರೀ ಕಂಬಗಳು.

***

ಅಲಂಕಾರ

– ಜೀವಿ. ಹೆಗಡೆ

'ಕಾವ್ಯ ಶೋಭಾಯಾ ಕರ್ತಾರೋ ಧರ್ಮಃ ಗುಣಃ ತದತಿಶಯ ಹ್ಯೇತವಸ್ತು ಅಲಂಕಾರಃ'
(ಕಾವ್ಯಕ್ಕೆ ಶೋಭೆ ತರುವದು ಗುಣ, ಶೋಭೆಯನ್ನು ಅತಿಶಯವಾಗಿ ತರುವದು ಅಲಂಕಾರ)

ಕಾವ್ಯವನ್ನು ಕುರಿತು ಲಾಕ್ಷಣಿಕರು ಹೇಳಿದ ಈ ಸೂತ್ರ ಸಾಹಿತ್ಯಾಸಕ್ತರಿಗೆ ತಿಳಿದಿದ್ದೇ ಆಗಿದೆ.

ಕಾವ್ಯವನ್ನು ಒಬ್ಬ ವ್ಯಕ್ತಿ ಅಂತ ತಿಳಿದಲ್ಲಿ ಅವನಿಗೆ ಬಟ್ಟೆ ತೊಡಿಸುವದು ಗುಣ ಅಂತಲೂ, ಆಭರಣ ಮುಂತಾದ ವಿಶೇಷಗಳನ್ನು ತೊಡಿಸಿ ಆಕರ್ಷಣೆ ಹೆಚ್ಚಿಸುವದು ಅಲಂಕಾಲವೆಂತಲೂ ಸ್ಥೂಲವಾಗಿ ಹೇಳಬಹುದು

ಒಬ್ಬ ವ್ಯಕ್ತಿಯನ್ನು 'ಅವನು ಸುಂದರವಾದ ಮುಖವುಳ್ಳವನು' ಅಂತ ಹೇಳಿದರೆ ಅದು ಅವನ ಹೊಗಳಿಕೆ ಹೌದು. ಆದರೆ ಅವನ ಮುಖವನ್ನು ಚಂದಿರನಿಗೆ, ಅದರಲ್ಲೂ ಶರತ್ ಕಾಲದ ಪೂರ್ಣಚಂದ್ರನಿಗೆ ಹೋಲಿಸಿ ಅವನನ್ನು ಹೊಗಳಿದಲ್ಲಿ ಅವನ ಮೇಲಿನ ಆಕರ್ಷಣೆ ಹೆಚ್ಚುವುದು ಸಹಜ. ಅದೇ ಅಲಂಕಾರ.

ಈ ರೀತಿ ಹೋಲಿಸುವ ಕ್ರಿಯೆಯನ್ನು ಬೇರೆ ಬೇರೆ ರೀತಿಯಿಂದ ಮಾಡಬಹುದು. ಹೀಗೆ ಹೋಲಿಸಿ ಹೇಳುವ ಪ್ರಕ್ರಿಯೆಯನ್ನು ಆಧರಿಸಿ ಬೇರೆ ಬೇರೆ ಅಲಂಕಾರಗಳನ್ನು ಗುರುತಿಸಬಹುದು.

ಈಗ ಚಂದ್ರ ಹಾಗೂ ಮುಖಗಳ ಹೋಲಿಕೆಯ ಕ್ರಮವನ್ನು ಆಧರಿಸಿ ಹುಟ್ಟಿಕೊಳ್ಳುವ ಬೇರೆ ಬೇರೆ ಅಲಂಕಾರಗಳ ಕುರಿತು ಚಿಂತಿಸೋಣ.

ಎರಡು ವಸ್ತುಗಳನ್ನು ಹೋಲಿಸುವಾಗ ನಾವು ಸಾಮಾನ್ಯವಾಗಿ ಉಪಮಾಲಂಕಾರವನ್ನು ಬಳಸುತ್ತೇವೆ.

ಉಪಮಾಲಂಕಾರ:

ಹೋಲಿಸುವ ವಸ್ತುವನ್ನು ಉಪಮಾನವೆಂದೂ, ಹೋಲಿಸಲ್ಪಡುವ ವಸ್ತುವನ್ನು ಉಪಮೇಯವೆಂದೂ ಹೇಳುತ್ತಾರೆ. ಭೇದ ಇರುವ ವಸ್ತುಗಳಲ್ಲಿ ಇರುವ ಸಾಮಾನ್ಯ ಗುಣವನ್ನು ಗುರುತಿಸಿ ಹೇಳುವುದೇ ಉಪಮೆ. (ಸಾಧರ್ಮ್ಯಮುಪಮಾ ಭೇದೇ). ಆದರೆ ಉಪಮಾಲಂಕಾರದಲ್ಲಿ 'ಅದರ ಹಾಗೆ ಇದು' ಅಂದರೆ 'ಚಂದ್ರನಂತಹ ಮುಖ' ಅಂತ ಪ್ರತ್ಯಕ್ಷದಲ್ಲಿ ಹೇಳಬೇಕು. (ಸಂಸ್ಕೃತದಲ್ಲಿ 'ಇವ' ಹೇಳುತ್ತಾರೆ. ಹಂಸೀವ ಕೃಷ್ಣ ತೇ ಕೀರ್ತಿ ಸ್ವರ್ಗಂಗಾಮಧಿರೋಹತಿ).

ರೂಪಕ:

ಮುಖಚಂದ್ರ (ಮುಖವೆಂಬ ಚಂದ್ರ) ಎನ್ನುವಲ್ಲಿ ಮುಖ ಹಾಗೂ ಚಂದ್ರ ಬೇರೆಬೇರೆ ವಸ್ತುಗಳಾದರೂ ಹೇಳುವಾಗ ಅಭೇದವಾಗಿಯೇ ಕಾಣುತ್ತವೆ. ಇಲ್ಲಿ ಮುಖ ಬೇರೆಯಲ್ಲ. ಚಂದ್ರ ಬೇರೆಯಲ್ಲ. ಈ ರೀತಿ ಉಪಮಾನ ಹಾಗೂ ಉಪಮೇಯಗಳಲ್ಲಿ ಅಭೇದವಿದ್ದಲ್ಲಿ ಆ ಅಲಂಕಾರವನ್ನು ರೂಪಕಾಲಂಕಾರ ಎನ್ನುತ್ತಾರೆ.

(ಆದರೂ ಸೂಕ್ಷ್ಮವಾಗಿ ಅವಲೋಕಿಸಿದಾಗ ಇಲ್ಲಿ ಭೇದವನ್ನು ಗುರುತಿಸುವವರೂ ಇದ್ದಾರೆ.) ಹೀಗೆ ಮುಖಚಂದ್ರ ಎಂದಾಗ ಮುಖವು ಚಂದ್ರನಂತೆ ಇದೆ ಅಂತಲೇ ಅರ್ಥೈಸುತ್ತಾರೆ.

ಸಸಂದೇಹ:

ಇದು ಮುಖವೋ ಅಥವಾ ಚಂದ್ರನೋ ಎನ್ನುವ ಸಂಶಯ ಹುಟ್ಟಿಕೊಳ್ಳುವದನ್ನು ಸೂಚಿಸುವದೇ ಸಸಂದೇಹ. 'ಮುಖ ಹೌದಾದರೂ ಅದು ಚಂದ್ರನಂತೆ ಕಾಣುತ್ತದೆ' ಎನ್ನುವದೇ ಹೇಳಿಕೆ. ಇದರಲ್ಲಿ ಮುಖ ಹಾಗೂ ಚಂದ್ರನನ್ನು ಸಂದೇಹ ರೂಪದಲ್ಲಿ ಹೇಳಿದರೂ ಚಂದ್ರನ ಸೌಂದರ್ಯವನ್ನು ಮುಖದಲ್ಲಿ ಕಾಣುವುದೇ ನಿಜವಾದ ಹೇಳಿಕೆ.

ಅಪಹ್ನುತಿ:

ಇದು 'ಮುಖವಲ್ಲ ಚಂದ್ರ' ಎನ್ನುವದು ಅಪಹ್ನುತಿ. ಶಾಬ್ದಿಕವಾಗಿ ವಿವರಿಸಿದಲ್ಲಿ ವ್ಯಕ್ತಿಯ ಕುತ್ತಿಗೆಯ ಮೇಲೆ ಚಂದ್ರನಿದ್ದಾನೆ, ಆದುದರಿಂದ ಅವನಿಗೆ ಮುಖವಿಲ್ಲ ಅಂತಾಗುತ್ತದೆ. ಆದರೆ ಕಾವ್ಯಾತ್ಮಕವಾಗಿ ಹೇಳುವಾಗ ವ್ಯಕ್ತಿಗೆ ಇರುವ ಮುಖ ಚಂದ್ರನಂತೆ ಶೋಭಾಯಮಾನವಾಗಿದೆ ಅಂತ ಯಾರಾದರೂ ತಿಳಿಯಬಹುದು. ಇಲ್ಲಿ 'ಇದು ಮುಖವಲ್ಲ ಚಂದ್ರ' ಅಂತ ಹೇಳಿದಾಗ ಚಂದ್ರನಲ್ಲಿರುವ ಸೌಂದರ್ಯವನ್ನು ಮುಖದಲ್ಲಿ ಗುರುತಿಸುವದೇ ಕಾವ್ಯದ ಉದ್ದೇಶ. ಓದಿದವರೆಲ್ಲರಿಗೂ ಇದು ಸುಸ್ಪಷ್ಟವಾಗಿರುತ್ತದೆ.

ಅನನ್ವಯ:

'ಮುಖವು ಮುಖವೇ ಚಂದ್ರ ಚಂದ್ರನೇ' ಎನ್ನುವ ಹೇಳಿಕೆಯಲ್ಲಿಯೂ ಮುಖ ಹಾಗೂ ಚಂದ್ರನ ಕುರಿತಾದ ಹೋಲಿಕೆಯನ್ನೇ ಗುರುತಿಸಬಹುದು. ಇದು ಅನನ್ವಯಾಲಂಕಾರ. ಎರಡನ್ನೂ ಒಂದಕ್ಕೊಂದು ಅನ್ವಯ ಮಾಡಲು ಸಾಧ್ಯವಿಲ್ಲ ಎನ್ನುವ ಸೂಚನೆಯಲ್ಲಿಯೂ ಮುಖವನ್ನು ಚಂದ್ರನ ಜೊತೆ ಹೋಲಿಕೆ ಮಾಡಲು ಸಾಧ್ಯ ಎನ್ನುವ ಸೂಕ್ಷ್ಮವಾದ ಅರ್ಥವನ್ನು ಗುರುತಿಸಬಹುದು.

ಪರ್ಯಾಯೋಕ್ತ:


'ರಾಹು ಹಿಡಿದ ಮುಖ' ಎನ್ನುವಲ್ಲಿ, ಮುಖವನ್ನು ಚಂದ್ರನಿಗೆ ಹೋಲಿಸಿರುವದನ್ನು ಗಮನಿಸಬಹುದು. ಚಂದ್ರನ ಕಳೆ ಎಷ್ಟೇ ಸುಂದರವಾಗಿರಲಿ, ಚಂದ್ರನನ್ನು ರಾಹು ಹಿಡಿಯುವ ಸಂದರ್ಭದಲ್ಲಿ ಚಂದ್ರ ತನ್ನ ಕಳೆಯನ್ನು ಕಳೆದುಕೊಂಡು ನಿಸ್ತೇಜನಾಗುತ್ತಾನೆ ಎನ್ನುವದು ಎಲ್ಲರಿಗೂ ಗೊತ್ತು. ಯಾವುದೋ ಕಾರಣಕ್ಕಾಗಿ ಮುಖವನ್ನು ಬಾಡಿಸಿಕೊಂಡವನನ್ನು 'ನಿನ್ನ ಮುಖಕ್ಕೆ ರಾಹು ಹಿಡಿದಿದೆ' ಎನ್ನುತ್ತಾರೆ. ಅಂದರೆ ಯಾವುದೋ ದುಃಖದಾಯಕ ಕಾರಣಕ್ಕಾಗಿ ಮುಖದಲ್ಲಿ ನೋವನ್ನು ಕಾಣಬಹುದು ಅಂತ ಅರ್ಥ. ಇಲ್ಲಿ ಪರ್ಯಾಯವಾಗಿ ಮುಖ ಹಾಗೂ ಚಂದ್ರನನ್ನು ಹೋಲಿಸಿದ್ದನ್ನು ತಿಳಿಯಬಹುದು.

ಬೇರೆ ಬೇರೆ ವಿಷಯಗಳ ಅಥವಾ ವಸ್ತುಗಳ ಹೋಲಿಕೆಯನ್ನು ವಿಭಿನ್ನವಾಗಿ ಮಾಡುವದರಿಂದ ಅಲಂಕಾರಗಳ ವೈವಿಧ್ಯತೆಗಳನ್ನು ಕಾಣಬಹುದು.

***

ಬಾರದ ಮಿತ್ರನ ಆರದ ನೆನಪುಗಳು

– ಗೌರಿ ಭಟ್ಟ



ಇಂದು ನಾನು ನಿಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತಿರುವುದು ಇಹಲೋಕ ತ್ಯಜಿಸಿದ, ಸದಾ ಕಾಡುತ್ತಿರುವ ಸಹೋದ್ಯೋಗಿ ಮಿತ್ರನ ನೆನಪುಗಳು.

ಹೊಸವರ್ಷವಿರಲಿ, ಹುಟ್ಟು ಹಬ್ಬ, ಬೀಳ್ಕೊಡುಗೆಗಳೇ ಇರಲಿ, ಸಂದರ್ಭೋಚಿತ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ, ಬ್ಯಾಂಕಿನಲ್ಲಿ ಎಸ್‌ಪಿಬಿ ಎಂದೇ ಪರಿಚಿತರಾದ ಬಾಲಕೃಷ್ಣ ಭಟ್ಟರು. ಎಷ್ಟೋ ಸಂದರ್ಭಗಳಲ್ಲಿ ಭಾವೋದ್ವೇಗದಿಂದ ಹಾಡಿ ನಮ್ಮನ್ನೆಲ್ಲಾ ಅಳಿಸುತ್ತಿದ್ದರು.

ಜನಪ್ರಿಯ 'ಕಾಣದ ಕಡಲಿಗೆ ಹಂಬಲಿಸಿದೆ ಮನ' ಹಾಡನ್ನು ದಿವಂಗತ.ಅಶ್ವತ್ಥರ ಧ್ವನಿಯಲ್ಲಿ ಹಾಡುವಾಗ ಎಲ್ಲರೂ ಮಂತ್ರಮುಗ್ಧರಾಗುತ್ತಿದ್ದರು. ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತು' ಹಾಡುವಾಗ ಮೋಡಿ ಮಾಡಿ ಯಾವುದೋ ಲೋಕಕ್ಕೆ ಕರೆದೊಯ್ಯುತ್ತಿದ್ದರು. 'ಹಾಡು, ಸಂತೋಷಕ್ಕೆ' ಹಾಡನ್ನು ಅವರು ಹಾಡಿದರೆ ಎಲ್ಲರೂ ಅವರ ಹಾಡಿಗೆ ಅರಿವಿಲ್ಲದೇ ತಾಳ ಹಾಕಿ ಕುಣಿಯುತ್ತಿದ್ದೆವು.

ಕೆಲವು ಕಾರ್ಯಕ್ರಮಗಳಲ್ಲಿ ಅವರ ಹಾಸ್ಯಭರಿತ ಭಾಷಣ ಕೇಳಿಯೂ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೆವು. ಗೋಕುಲಾಷ್ಟಮಿಯ ದಿನ ಹುಟ್ಟಿದ ಅವರಿಗೆ ಬಾಲಕೃಷ್ಣ ಅಂತ ಹೆಸರು. ಬೆಣ್ಣೆ ತಿಂದ ಕೃಷ್ಣನಂತೆಯೇ ಮೃದುವಾಗಿ, ಹುಲುಸಾಗಿ ಇದ್ದರು. ಬಣ್ಣ ಕೃಷ್ಣನಂತಿರದೇ ಬೆಣ್ಣೆಯಂತೆ. ಭಟ್ಟರೆಂದೇ ಪ್ರಖ್ಯಾತರಾದ ಅವರ ಅಂಗಿಯ ಯಾವುದಾದರೂ ಒಂದು ಭಾಗದಿಂದ ಹಾಕಿದ ಜನಿವಾರ ಇಣುಕುತ್ತಿತ್ತು. 'ಭಟ್ರೆ, ನಿಮ್ಮ ಗುರುತು' ಅಂತ ನಾನು ತಮಾಷೆ ಮಾಡುತ್ತಿದ್ದೆ.

ನಾನು ಬ್ಯಾಂಕಿನಲ್ಲಿ ಬಹಳಷ್ಟು ಕಾಲ ಅವರ ಪಕ್ಕದಲ್ಲಿ ಕುಳಿತು ಕೆಲಸ ಮಾಡಿದುದರಿಂದ ವಿಶೇಷ ಸಲುಗೆ, ಪ್ರೀತಿ, ನನ್ನ ಮೇಲೆ.

ಮಧ್ಯದಲ್ಲಿ ಕ್ಯಾಂಟೀನಿನಲ್ಲಿ ದೋಸೆ ಹಾಕಿಸಿಕೊಂಡು ತಿಂದು ಬರುವುದು, ಮಧ್ಯಾಹ್ನದ ಬಿಸಿಯೂಟ, ಒಮ್ಮೊಮ್ಮೆ ಮದುವೆ, ಮುಂಜಿಗಳಿಗೆ ಹೋಗಿ ಬರುವುದು ಇದನ್ನೆಲ್ಲಾ ಧೈರ್ಯದಿಂದ ಪಾಲಿಸಿಕೊಂಡು ಬರುವುದು ಅವರ ರೂಢಿ. ಗ್ರಾಹಕರಿಗೂ ಅದು ಅಭ್ಯಾಸವಾಗಿ ಹೋಗಿತ್ತು. ಹಾಗೇ ಅದನ್ನೆಲ್ಲಾ ಪಕ್ಕದಲ್ಲಿ ಕುಳಿತುಕೊಂಡು ಸರಿದೂಗಿಸಿಕೊಂಡು ಹೋಗುತ್ತೇನೆ ಎಂಬ ಅಚಲ ವಿಶ್ವಾಸ ಅವರಿಗೆ ನನ್ನ ಮೇಲೆ.

ಅವರೇ ಹೇಳಿದಂತೆ ನಾನು ಅವರಿಗೆ ದೇವರು ಕೊಟ್ಟ ತಂಗಿ. ನಿಮಗೆ ಬೆಣ್ಣೆಯ ಬಣ್ಣ ಕೊಟ್ಟು ತಂಗಿಗೆ ಅವನ ಬಣ್ಣ ಕೊಟ್ಟಿದ್ದಾನೆ ನಿಮ್ಮ ಕೃಷ್ಣ ಅಂತ ತಮಾಷೆ ಮಾಡುತ್ತಿದ್ದೆ.

ನಾನು ಒಂದು ದಿನ ರಜೆಯಲ್ಲಿ ಇದ್ದರೆ ಹಿಂದಿನ ದಿನದ ಸಂಪೂರ್ಣ ವಾರ್ತೆಗಳ ವರದಿ ಆಗಬೇಕು. ಅವರು ಹೆಂಡತಿಯ ಹತ್ತಿರ, ಅಮ್ಮನ ಹತ್ತಿರ ಬೈಸಿಕೊಂಡಿದ್ದು, ಮೆನೇಜರ್ ಹೆಚ್ಚಿನ ಕೆಲಸ ಕೊಟ್ಟು ಇವರು ಮಾಡದೇ ನನಗಾಗಿ ಉಳಿಸಿಟ್ಟಿದ್ದು, ಎಲ್ಲವನ್ನೂ ಚಾಚೂ ತಪ್ಪದೇ ಹೇಳಿದರೆ ಅವರಿಗೆ ಸಮಾಧಾನ.

ಅವರು ಮಾತನಾಡುವ ಶೈಲಿಯೇ ವಿಚಿತ್ರ. ಎಂತಹವರಿಗೂ ನಗು ತರಿಸುತ್ತದೆ. ಒಮ್ಮೆ ಮನೆಗೆ ನೆಂಟರು ಬರುವುದೆಂದು ಇಡೀ ಮನೆಯನ್ನೂ ಸ್ವಚ್ಛ ಮಾಡಿದ್ದರಂತೆ. ಬಹಳ ಖುಷಿಯಿಂದ ಇದ್ದ ಇವರಿಗೆ ಅತಿಥಿಗಳು ಮನೆಗೆ ಪ್ರವೇಶ ಮಾಡುತ್ತಿದ್ದಂತೆ ಅವರ ತಲೆಗೆ ತಾಗಿದ್ದು ಇವರ ಮನೆಯ ಹಳೆಯ ಮಾಸಿದ ಬೈರಾಸಂತೆ (ಅಂದರೆ ಹಳೆಯ ಅಂಗವಸ್ತ್ರ).

ಬೆಳಗ್ಗೆ ಒಮ್ಮೊಮ್ಮೆ ಬ್ಯಾಂಕಿಗೆ ಬರುವುದು ತಡವಾದರೆ ಅವರು ಬ್ಯಾಂಕಿಗೆ ಪ್ರವೇಶಿಸುವ ಅವತಾರ ನೋಡಬೇಕಿತ್ತು. ಮುಖವೆಲ್ಲಾ ಕೆಂಪಾಗಿ, ಬೆವರು ಹರಿಸುತ್ತಾ ಯಾರನ್ನೂ, ಅಂದರೆ ಅವರ ಬರುವಿಕೆಗಾಗಿ ಕಾಯುತ್ತಾ ನಿಂತಿರುವ ಮೆನೇಜರನ್ನೂ ಲೆಕ್ಕಿಸದೇ ಸೀದಾ ಕೌಂಟರ್ ಕಡೆಗೇ ದೃಷ್ಟಿ ಇಟ್ಟು ಬಂದು, ದಡ,ಬಡ ಅಂತ ಕಂಪ್ಯೂಟರ್ ಆನ್ ಮಾಡಿ, ಪ್ಯಾಂಟ್ ಮೇಲಕ್ಕೆ ಎಳೆದುಕೊಂಡು, ಸೊಂಟದ ಭಾಗದ ಅಂಗಿಯನ್ನು ಒಳಗೆ ಹಾಕಿಕೊಂಡು, ಉಸ್ಸಪ್ಪಾ ಅಂತ ಖುರ್ಚಿಯಲ್ಲಿ ದೇಹವನ್ನು ಇಳಿಸಿ ನನ್ನ ಕಡೆಗೆ ನೋಟ ಬೀರಿ ದೊಡ್ಡದಾದ ಉಸಿರು ಬಿಡುತ್ತಾ, 'ಅಬ್ಬಾ ! ಮಾವ, ಅಂದರೆ ಮೆನೇಜರ್ ಹೋದ್ರು.', ಅಂದಾಗ ನನಗೆ ನಗು ಬರುತ್ತಿತ್ತು.

'ಭಟ್ರೆ, ನಿಮ್ಮ ಹೊಟ್ಟೆ ಇನ್ನೂ ಸ್ವಲ್ಪ ದೊಡ್ಡದಾದರೆ ನಿಮಗೆ ಕೀಬೋರ್ಡ್ ಕಾಣುವುದಿಲ್ಲ' ಅಂತ ತಮಾಷೆ ಮಾಡಿದರೆ, 'ಇದನ್ನು ಮಾತ್ರ ಯಾರ ಹತ್ತಿರವೂ ಎನ್‌ಕ್ಯಾಷ್ ಮಾಡಲಾಗಲೀ, ಸಾಲಕ್ಕೆ ಅಡವು ಇಡಲಾಗಲೀ ಆಗದು' ಅಂತ ಹೊಟ್ಟೆ ಸವರಿಕೊಂಡು ನಗುತ್ತಿದ್ದರು.

ಅವರ ಮನೆಯಲ್ಲಿ ಕೃಷ್ಣಾಷ್ಟಮಿ, ಪಂಚಮಿ, ಚೌತಿ, ವೈದಿಕ ಏನೇ ಇರಲಿ ನಾನು ಹೋಗಬೇಕು ಇಲ್ಲವಾದರೆ ಅವರ ಮನೆಯ ತಿಂಡಿ ಪೊಟ್ಟಣ ನನಗೆ ಬರುತ್ತಿತ್ತು. ಆಗ ಅವರು ಸಮಯಸಾಧಕರೆಂದು ನನಗೆ ಅನ್ನಿಸುತ್ತಿತ್ತು. ಈಗ ಅವರು ನನ್ನ ಮೇಲೆ ಇಟ್ಟ ಪ್ರೀತಿಯ ಅರಿವಾಗುತ್ತದೆ.

ಆರಾಮವಾಗಿ ಗುಂಡು ಕಲ್ಲಿನಂತಿದ್ದ ಭಟ್ಟರಿಗೆ ಆಗಾಗ ಹೊಟ್ಟೆ ನೋವು ಬರತೊಡಗಿತು. ನೋವಿಗೆ ಕ್ಯಾಂಟೀನ್ ಊಟ, ಮದುವೆ, ಮುಂಜಿಗಳ ಊಟದ ಕಾರಣ ಹೇಳಿದರು. ನಾನು ಹೊರಗಡೆಯ ಊಟ ಕಡಿಮೆ ಮಾಡಿ, ಶುಂಠಿ ಕಷಾಯ, ಸೊಪ್ಪಿನ ತಂಬುಳಿ ಊಟ ಮಾಡುವ ಸಲಹೆಗಳನ್ನು ಕೊಟ್ಟೆ.

ಆ ನಡುವೆ ಇದ್ದಕ್ಕಿದ್ದಂತೆಯೇ ಅವರ ತಂದೆಯವರೂ ತೀರಿಕೊಂಡರು. ತಂದೆ ಹೋದಮೇಲೆ ಅವರು ಪಟ್ಟ ಕಷ್ಟ ನನಗೆ ಗೊತ್ತು. ತಂದೆ ಬದುಕಿರುವಾಗ ಸಹಜವಾಗಿಯೇ ಆ ತಲೆಮಾರಿನ ತಂದೆ ಮಕ್ಕಳಂತೇ, ಇಬ್ಬರ ನಡುವೆ ಪ್ರೀತಿ ಇದ್ದರೂ ವಿಶೇಷ ಮಾತುಕತೆ ಇರಲಿಲ್ಲ. ಮೌನವಾಗಿ ತೋರಿಸಿದ ಪ್ರೀತಿಯ ಅರ್ಥ ಮಗನಿಗೆ ಅವರು ಹೋದ ನಂತರ ಆಯಿತು. ಭಟ್ಟರಿಗೆ ಊಟ ಸೇರುತ್ತಾ ಇರಲಿಲ್ಲ. ನಿದ್ದೆ ಬರ್ತಾ ಇರಲಿಲ್ಲ, ಮುಖದಲ್ಲಿ ನಗುವಿಲ್ಲ, ಗೆಲುವಿಲ್ಲ. ಯಾವಾಗಲೂ ಅಪ್ಪನದೇ ವಿಚಾರ, ಮಾತು. ನಿದ್ದೆಯಿಲ್ಲದೆ ಸೋತು ಸುಣ್ಣವಾದರು ಅವರು.

ಬಾಲಕೃಷ್ಣ ಭಟ್ಟರೂ, ಅವರ ಹೊಟ್ಟೆಯೂ ಕಳೆದುಹೋದವು. 'ಭಟ್ರೆ, ನೀವು ಹೀಗಿದ್ದರೆ ಯಾರೂ, ನಾನೂ ಸಹ ಇಷ್ಟ ಪಡುವದಿಲ್ಲ. ಹಳೆಯ ಭಟ್ಟರನ್ನು ಹುಡುಕಿಕೊಳ್ಳಿ' ಅಂತ ಅವರಿಗೆ ಹೇಳಿದೆ. ತುಂಬಾ ಪ್ರಯತ್ನಿಸಿದರು, ನಾನೂ ಸಹಾಯ ಮಾಡಿದೆ. ಆದರೆ ಹೊಟ್ಟೆ ನೋವು ಬಿಡದೇ ಕಾಡತೊಡಗಿತು. ಅವರು ಕೃಶವಾಗಲು ಹೊಟ್ಟೆಯಲ್ಲಿ ಅಡಗಿ ಕುಳಿತಿರುವ ಅರ್ಬುದ ರೋಗ ಕಾರಣವಾಯಿತು. ಬಹಳ ತಡವಾಗಿ ನಾಲ್ಕನೇ ಹಂತದಲ್ಲಿ ಇರುವಾಗ ಗೊತ್ತಾಯಿತು. ಹರಡಿಕೊಂಡ ರೋಗ ಗುಣಪಡಿಸಲು ಸಾಧ್ಯವಿಲ್ಲ ಅಂತ ವೈದ್ಯರು ಹೇಳಿದ್ದರು. ಆಗ ಬ್ಯಾಂಕಿಗೆ ಬರುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಪ್ರತಿದಿನ ನನಗೆ ಫೋನ್ ಮಾಡುತ್ತಿದ್ದರು. ಅವರ ರೋಗದ ಬಗ್ಗೆ ವೈದ್ಯರಾಗಲೀ, ಮನೆಯವರಾಗಲೀ ಅವರಿಗೆ ತಿಳಿಸಿರಲಿಲ್ಲ.

ಒಂದು ದಿನ ನನ್ನ ಹತ್ತಿರ ಕೇಳಿದರು, 'ಎಲ್ಲರೂ ನನ್ನಿಂದ ಏನೋ ಮುಚ್ಚಿಡುತ್ತಿದ್ದಾರೆ. ನೀನು ಹೇಳು, ನಾನು ಈ ರೋಗದಿಂದ ಬಚಾವಾಗುತ್ತೇನೆ ಅಲ್ಲವೇ?' ಆಗ ನಾನು 'ದಿನಾಲೂ ವಿಷ್ಣು ಸಹಸ್ರನಾಮ ಹೇಳಿ ಭಟ್ರೆ, ಈ ಬಾಲಕೃಷ್ಣನನ್ನು ಬೆಣ್ಣೆ ಕೃಷ್ಣ ಕಾಪಾಡುತ್ತಾನೆ' ಅಂತ ಹೇಳಿದೆ. ಅವರ ರೋಗದ ವಿಷಯ ತಿಳಿದ ನನಗೆ ತುಂಬಾ ಸಂಕಟವಾಯಿತು. ಔಷಧದ ಪರಿಣಾಮವೋ, ಕೃಷ್ಣನ ದಯೆಯೋ ಭಟ್ಟರಿಗೆ ಹೊಟ್ಟೆ ನೋವು ಕಡಿಮೆ ಆಗಿ ಡ್ಯೂಟಿಗೆ ಬರುವಂತಾದರು. ಸ್ವಲ್ಪ ಅಶಕ್ತತೆ ಇತ್ತು. ಬೇಗ ಸುಸ್ತಾಗುತ್ತಿದ್ದರು.

ಮಾರ್ಚ್ ತಿಂಗಳಲ್ಲಿ ನನ್ನ ಹುಟ್ಟು ಹಬ್ಬ. ಅಶ್ವತ್ಥ್‌ರವರ ಧಾಟಿಯಲ್ಲಿ ನನಗೆ ಇಷ್ಟವಾದ "ಕಾಣದ ಕಡಲಿಗೆ ಹಂಬಲಿಸಿದೆ ಮನ" ಹಾಡನ್ನು ಹಾಡಿ ಎಲ್ಲರನ್ನೂ ಮಂತ್ರಮುಗ್ಧಗೊಳಿಸಿದರು .ಮತ್ತೆ ರೋಗ ಉಲ್ಬಣಿಸಿ ನಿವೃತ್ತಿಯಾದ ಕೆಲವೇ ತಿಂಗಳುಗಳಲ್ಲಿ ಅಡಿಗರ ಹಾಡಿನಂತೇ ಮುರಳಿಯ ಕರೆಗೆ ಮೋಹಗೊಂಡು ದೂರದ ಊರಿಗೆ ಮರಳಿ ಬಾರದೆ ಹೊರಟೇಬಿಟ್ಟರು. ಪೊಡವಿಗೊಡೆಯ ಕುಡುಗೋಲು ಕೃಷ್ಣನ ಪಾದ ಸೇರಿದರು. ಅವರು ಹಾಡಿದ ಹಾಡುಗಳ ಗುಂಗಿನ ರಂಗು ಇನ್ನೂ ರಂಗುರಂಗಾಗಿಯೇ ಇದೆ.

ಖಾಲಿಯಾದ ಪಕ್ಕದ ಸ್ಥಳದಲ್ಲಿ ಯಾರನ್ನಾದರೂ ತುಂಬಬಹುದು, ಖಾಲಿಯಾದ ಮನಸ್ಸನ್ನು ಕಾಲವೇ ತುಂಬಿ ಕೊಡಬೇಕು.

***

ಬದಲಾದ ಮನೆ, ಮನಸುಗಳು!

– ನಾಗರತ್ನ ಚಂದ್ರಶೇಖರ್

'ಅಲ್ಲಿದೆ ನಮ್ಮನೆ ಇಲ್ಲಿ ಬಂದೆ ಸುಮ್ಮನೆ', 'ಎಲ್ಲಿಯೂ ನಿಲ್ಲದಿರು, ಮನೆಯನೆಂದು ಕಟ್ಟದಿರು!' 'ಓ ನನ್ನ ಚೇತನ ಆಗು ನೀ ಅನಿಕೇತನ!', 'ಮೂರ್ಖರು ಮನೆ ಕಟ್ಟುತ್ತಾರೆ, ಬುದ್ಧಿವಂತರು ಅದರಲ್ಲಿ ವಾಸಿಸುತ್ತಾರೆ'

– ಇದೆಲ್ಲಾ ಕೇಳಿ ಕೇಳಿ ಹಳೆತಾಗಿದೆ ಅಲ್ಲವೇ, ಹಾಗಾದರೆ ಹೊಸದೇನು? "ಮನೆಯೊಂದು ನೂರು ಬಾಗಿಲು' ನನ್ನದೇ ಹೊಸ ಪುಸ್ತಕದ ಬಗ್ಗೆ ಹೇಳ್ತೀನಿ ಅನ್ಕೋಬೇಡಿ, ಅದೂ ಹಳೇದಾಗಿದೆ. ಈಗ ಮತ್ತೆ? ಈಗ ನಮ್ಮ ವಿಳಾಸ ಬದಲಾಗಿದೆ! ನಾವು ಅಂದರೆ ನಾನು ಹಾಗೂ ನನ್ನ ಪತಿ, ನಮ್ಮ ಮನೆಯಲ್ಲಿ ತುಂಬಿ ತುಳುಕುತ್ತಿದ್ದ ಸಮಸ್ತ ಹೊಸ, ಹಳೆಯ ಸಾಮಾನು ಸರಂಜಾಮುಗಳ ಸಮೇತ ನಮ್ಮ ಮುಂದಿನ ನಿಲ್ದಾಣಕ್ಕೆ ಬಂದು ಇಳಿದಿದ್ದೇವೆ. ಈಗಾಗಲೇ ಮನೆ ಬದಲಾಯಿಸುವ ಅನುಭವ ಪತಿರಾಯರ ಬ್ಯಾಂಕ್ ಉದ್ಯೋಗದ ನಿಮಿತ್ತ ಹಲವಾರು ಸಾರಿ ಆಗಿದ್ದರಿಂದ ಸಾಮಾನುಗಳನ್ನು ಕಟ್ಟುವುದು, ಬಿಚ್ಚುವುದು ಮತ್ತೆ ಜೋಡಿಸುವುದು ಇವುಗಳಲ್ಲಿ ಪ್ರಾವೀಣ್ಯತೆ ಬಂದಿದೆ ಎಂದು ಹೇಳಬಹುದು. ಆದರೆ ಈಗ ಮೊದಲಿನ ಶಕ್ತಿ ಇಲ್ಲ ಅಷ್ಟೆ. ಕಳೆದ 15 ವರ್ಷಗಳಿಂದ ನಮ್ಮ ಸಂಪತ್ತು ಅಪಾರ ವೃದ್ಧಿಯಾಗಿ, ಹಲವಾರು ಬೀರುಗಳಲ್ಲಿ ತುಂಬಿ ತುಳುಕುತ್ತಿದೆ ಎಂದೇ ಹೇಳಬಹುದು. ನನ್ನ ರಾಶಿ ಸೀರೆಗಳ ನೂರು ಪಟ್ಟು ಪುಸ್ತಕಗಳ ರಾಶಿ ಬೀರುವಿನಲ್ಲಿ ಸಂಗ್ರಹವಾಗಿದೆ. ಅವುಗಳನ್ನೆಲ್ಲ ಜೋಡಿಸುತ್ತಾ, ಜೋಡಿಸುತ್ತಾ ಯಾವುದೋ ಗ್ರಂಥಾಲಯಕ್ಕೋ, ಸೀರೆ ಅಂಗಡಿಗೋ ಬಂದಂತಹ ಗಾಬರಿ ನಮಗಾಯಿತು. ಇನ್ನು ಪಾತ್ರೆ ಪಡಗ, ಹಾಸಿಗೆ, ಹೊದಿಕೆ, ಮಂಚ, ಟೇಬಲ್ಲು, ಸೋಫಾ ಹೀಗೆ ಒಂದೊಂದಾಗಿ ಟ್ರಕ್ಕಿಗೆ ತುಂಬುವುದು. ಅಲ್ಲಿಂದ ಬಾಡಿಗೆ ಮನೆಯಲ್ಲಿ ಇಳಸಿಕೊಳ್ಳುವುದು ಈ ಸರ್ಕಸ್ ಬೆಳಗಿನಿಂದ ಸಂಜೆಯ ತನಕ ಯಥಾವತ್ತಾಗಿಯೇ ನಡೆಯಿತು.

ಕಳೆದ 13 ವರ್ಷಗಳಿಂದ ನಮ್ಮದೇ ಅಂದರೆ ಮಗಳ ಮನೆಯಲ್ಲಿ ಸರ್ವ ಸ್ವತಂತ್ರರಾಗಿ ಇದ್ದವರಿಗೆ ಅನಿವಾರ್ಯ ಕಾರಣಗಳಿಂದ ಮನೆ ಬದಲಾಯಿಸಬೇಕಾಯಿತು. ಈ ಸಾರಿ ಹತ್ತಿರದಲ್ಲೇ ಬಾಡಿಗೆ ಮನೆ ಒಂದು ಸಿಕ್ಕಿದ್ದು ನಮ್ಮ ಅದೃಷ್ಟ ಎನ್ನಬಹುದು. ಪ್ರತಿ ಸಾರಿ ವರ್ಗಾವಣೆಯಾದಾಗ ಊರು, ಕೇರಿ, ಜನ, ಎಲ್ಲರನ್ನೂ ಕಣ್ತುಂಬಿಕೊಂಡು ವಿದಾಯ ಹೇಳಿ ಭಾರವಾದ ಮನಸ್ಸಿನಿಂದ ಹೊಸದೊಂದು ಊರಿಗೆ, ಬೇರೊಂದು ಮನೆಗೆ ವಲಸೆ ಹೋಗುತ್ತಿದ್ದಾಗ ಹತ್ತಾರು ದಿನ ಹಳೆಯ ಗುಂಗಿನಲ್ಲಿ ಮನಸ್ಸು ಭಾರವಾಗಿರುತ್ತಿತ್ತು. ಈ ಸಾರಿಯ ಅನುಭವ ಕೊಂಚ ಭಿನ್ನ ಎನ್ನಬೇಕು. ಅಭ್ಯಾಸ ಬಲದಿಂದ ನಾವು ಹೋಗಬೇಕಾದ ದಾರಿ ಮತ್ತೆ ಹಳೆ ಮನೆಯ ಕಡೆಗೆ ತಿರುಗುತ್ತಿತ್ತು. ಬೇರು ಕಿತ್ತ ಮರದಂತಾಗಿದ್ದ ನಮ್ಮ ಮನಸ್ಥಿತಿಯನ್ನು ಹೊಸ ಬಾಡಿಗೆ ಮನೆಯಲ್ಲಿ ಹೊಸ ಮಣ್ಣು, ಹೊಸ ನೀರು, ಹೊಸದೇ ಪರಿಸರದಲ್ಲಿ ಕಟ್ಟಿಕೊಳ್ಳುವ ಪ್ರಯಾಸ ನಮ್ಮದಾಗಿತ್ತು. ಇದುವರೆಗೂ ನಮ್ಮದೆಂದುಕೊಂಡಿದ್ದ ಮನೆ ಮಾರಾಟವಾದ ನಂತರ ನಾವು ಹೆಚ್ಚು ಸಮಯ ಅಲ್ಲಿ ಇರುವಂತೆಯೂ ಸಾಧ್ಯವಿಲ್ಲದ ಕಾರಣ ಹೊಸ ಮನೆಯಲ್ಲಿ ನಾವು ಬೇಗ ಬಿಡಾರ ಹೂಡಲೇಬೇಕಾದ ಅನಿವಾರ್ಯತೆ. ಈಗ ವಿಳಾಸವಷ್ಟೇ ಅಲ್ಲ, ಎಲ್ಲವೂ ಬದಲಾಗಬೇಕಾಗಿತ್ತು ಹಾಲು ಪೇಪರ್, ಅಂಚೆ, ಕೆಲಸದವಳು ಹೀಗೆ ಬದಲಾವಣೆಯ ಪಟ್ಟಿ ದೊಡ್ಡದಾಗಿ ಇತ್ತು. ಈಗ ಒಂದು ರೀತಿಯಲ್ಲಿ ಮೊದಲ ಮಹಡಿಯಲ್ಲಿ ಪತಿರಾಯರು ಇಡೀ ದಿನ ಕಂಪ್ಯೂಟರ್‌ನಲ್ಲಿ ಮಗ್ನರಾಗಿ ಕುಳಿತಾಗ ಅವರನ್ನು ಕೂಗಿ ಕರೆಯುವ ಸಂಕಷ್ಟ ಈ ಬಾಡಿಗೆ ಮನೆಯಲ್ಲಿ ಇರದೆ, ಇಬ್ಬರಿಗೂ ಮಹಡಿ ಹತ್ತಿ ಇಳಿಯುವ ಸಮಸ್ಯೆ ಇರಲಿಲ್ಲ. ಬೆಳಗ್ಗೆ 6 ಗಂಟೆಗೆ ಬರುತ್ತಿದ್ದ ಸೊಪ್ಪಿನವನು, 12ಕ್ಕೆ ಬರುತ್ತಿದ್ದ ತರಕಾರಿ ತಾತ,ಇವರಿಬ್ಬರನ್ನೂ ಖಂಡಿತ ಮಿಸ್ ಮಾಡುವೆ.

ಹೊಸ ಮನೆಯಲ್ಲಿ ನಮ್ಮ ಸುತ್ತ ಹರಡಿಕೊಂಡ ಸಾಮಾನುಗಳ ರಾಶಿಯನ್ನು ಕಂಡು ತಲೆ ಕೆಟ್ಟಿದ್ದಂತೂ ನಿಜ. ನಿಜವಾಗಿ ನಮಗೆ ಇಷ್ಟೆಲ್ಲ ವಸ್ತುಗಳ ಅಗತ್ಯ ಇದೆಯೇ? ನಾವೇಕೆ ಇಷ್ಟೊಂದು ಸಾಮಾನುಗಳನ್ನು ಎಷ್ಟು ವರ್ಷ ಕಾಪಾಡಿಕೊಂಡಿದ್ದೆವು, ಕೂಡಿಟ್ಟುಕೊಂಡಿದ್ದೆವು. ಇದುವರೆಗೂ ಅಜ್ಞಾತವಾಗಿ ಅಟ್ಟದ ಮೇಲಿದ್ದವು ಕೂಡ ದಯನೀಯವಾಗಿ ನಮ್ಮತ್ತಲೇ ನೋಡುತ್ತಾ ನಮಗೆ ಮುಕ್ತಿ ಕೊಡಿ ಎಂದು ಕೇಳುತ್ತಿರಬೇಕು ಅನಿಸಿತು. ಒಂದೇ ಒಂದು ಪುಟವನ್ನೂ ತಿರುಗಿಸಿ ನೋಡದ ಪುಸ್ತಕಗಳು, ಕೆ.ಜಿ.ಗಟ್ಟಲೆ ಭಾರದ, ಒಮ್ಮೆಯೂ ಬಿಸಿ ತಾಗದ, ಅಂದದ ಚಂದದ ಹಲವಾರು ಪಾತ್ರೆಗಳು, ಹೆಚ್ಚು ಸಮಾರಂಭಗಳನ್ನು ನೋಡದ ಬಣ್ಣ ಬಣ್ಣದ ಅನೇಕ ಸೀರೆಗಳು, ಬ್ಯಾಂಕಿನ ಲಾಕರಿನ ಕಗ್ಗತ್ತಲೆಯಲ್ಲಿ ಉಸಿರು ಕಟ್ಟಿದ ಚಿನ್ನದ, ಬೆಳ್ಳಿಯ ಹಲವಾರು ಆಭರಣಗಳು, ಹೀಗೆ ಈ ಪಟ್ಟಿ ಉದ್ದವಾದೀತು ಬಿಡಿ.

ಒಂದು ಸುಂದರ ಬದುಕನ್ನು ಕಟ್ಟಿಕೊಳ್ಳಲು ನಾವು ಎಷ್ಟೆಲ್ಲಾ ಜೀವಮಾನವಿಡೀ ಹೆಣಗಾಡುತ್ತೇವೆ. ಎಷ್ಟೊಂದು ಕಷ್ಟ ನಷ್ಟಗಳನ್ನು ಎದುರಿಸುತ್ತಾ ಸೋಲು ನೋವು ತ್ಯಾಗ ಸಂಘರ್ಷಗಳ ಮಧ್ಯೆ ಸುಖ ಸಂತೋಷಗಳನ್ನು ಅರಸುತ್ತ ಅಲೆಮಾರಿಗಳಾಗಿ ಜೀವಿಸುತ್ತೇವೆ. ಒಂದು ವಸ್ತುವನ್ನು ಪಡೆದುಕೊಳ್ಳಲು ಹಾಕಬೇಕಾದ ಶ್ರಮ, ಕೆಲವಾರು ವರ್ಷಗಳಾದ ಮೇಲೆ ಅದನ್ನು ನಿರುಪಯುಕ್ತ ಎಂದು ತೀರ್ಮಾನಿಸಲು ಎಸೆಯಲು ಕಷ್ಟವಾಗ ಬಹುದು ಅಲ್ಲವೇ? ಆದರೆ ಬದಲಾವಣೆ ಅಗತ್ಯ, ಅನಿವಾರ್ಯ, ಈ ಜಗತ್ತಿನಲ್ಲಿ. ಯಾವುದು ಶಾಶ್ವತವಲ್ಲ ಎಂದು ಪ್ರವಚನ ಹೇಳುವುದು ಎಷ್ಟು ಸುಲಭ. ಈ ಅನುಬಂಧದ ಕೊಂಡಿಗಳನ್ನು ಕಳಚಿಕೊಳ್ಳುವವರಿಗೆ ಮಾತ್ರ ಅದರ ನೋವು ಅರ್ಥವಾಗಬಹುದು. ಅದು ವಸ್ತುವೇ ಆಗಿರಲಿ, ಮನುಷ್ಯರ ನಡುವಿನ ಸಂಬಂಧವೇ ಆಗಲಿ ಕಾಯಿಸಿ, ಬಿಸಿ ಮಾಡಿ ಎಚ್ಚರಿಕೆಯಿಂದ ಜೋಡಿಸಿದ ಎರಡು ಭಾಗಗಳನ್ನು ನಿರ್ದಯವಾಗಿ ಸುತ್ತಿಗೆಯಿಂದ ಅಥವಾ ಕಲ್ಲಿನಿಂದ ಜಜ್ಜಿ ಬೇರ್ಪಡಿಸಿಬಿಡುತ್ತೇವೆ, ನಮಗೆ ಬೇಡವೇ ಬೇಡ ಎನಿಸಿದಾಗ.

ಕೆಲವು ತಿಂಗಳ ಹಿಂದೆ ನನ್ನ ಮಗಳಿಗೆ ಒಂದು ಹಳೆಯ ಆಭರಣವನ್ನು ಹೊಸ ನಮೂನೆಯಾಗಿ ಪರಿವರ್ತಿಸಬೇಕಾಗಿತ್ತು. ಅದನ್ನು ಚಿನ್ನದ ಅಂಗಡಿಯವನು ನಿಗಿನಿಗಿ ಉರಿಯಲ್ಲಿ ಹಾಕಿ ಕಾಯಿಸಿ ದ್ರವ ರೂಪದಲ್ಲಿ ಪರಿವರ್ತಿಸಿ ಮತ್ತೆ ರೂಪಾಂತರಗೊಳಿಸುವಾಗ ಅದೆಷ್ಟೋ ವರ್ಷಗಳು ನಮ್ಮ ದೇಹವನ್ನು ಅದು ಅಲಂಕರಿಸಿದ್ದ ನೋವು ಇದ್ದಿರಲಿಕ್ಕಿರಲಿಲ್ಲವೇ? ಹೀಗೆ ಹಲವಾರು ನಿರ್ಜೀವ ವೈವಿಧ್ಯಮಯ ಸಾಮಾನುಗಳ ನಡುಗಡ್ಡೆಯ ಮಧ್ಯೆ ನಾವು ಕೈ ಚೆಲ್ಲಿ ಕೂರಲು ಕಾರಣ ನಮ್ಮ ನಂತರ ಈ ಸಾಮಾನುಗಳನ್ನು ಯಾರು ತೆಗೆದುಕೊಳ್ಳುತ್ತಾರೆ, ಯಾರಿಗೆ ಬೇಕಾಗುತ್ತದೆ ಎನ್ನುವ ಪ್ರಶ್ನೆ. ಅಜ್ಜಿ ತಾತನ ಈ ಪುರಾತನ ವಸ್ತು ಸಂಗ್ರಹಾಲಯ ಮೊಮ್ಮಕ್ಕಳ ಪಾಲಿಗೆ ಮೂರು ಕಾಸಿನ ದೂರದ ಬೆಟ್ಟ. ಅಜ್ಜಿ, ತಾತನ, ಫೋಟೋ ಫ್ರೇಮು ನೋಡಲು ಸಿಕ್ಕರೆ ಅದೃಷ್ಟ. ಅರೆ, ಇದು ಯಜಮಾನರ ಹೈಸ್ಕೂಲಿನ ಗ್ರಾಮರ್ ಪುಸ್ತಕ, ಇಲ್ಲಿದೆ ನನ್ನ 50 ವರ್ಷದ ಹಿಂದಿನ ಡಿಗ್ರಿ ಸರ್ಟಿಫಿಕೇಟ್, ಆಹಾ! ಇದು ನಮ್ಮದೇ ಮದುವೆಯ ಫೋಟೋ, ಅಬ್ಬ ಅದೆಷ್ಟು ಬಡಕಲಾಗಿದ್ದೆವು ಆಗ, ಅನಿಸುತ್ತಿದೆ. ಇವೆಲ್ಲ ಈಗ ಮಧುರ ಯಾತನೆಗಳು ಅಷ್ಟೇ. ಆ ರೈಲು ಚೊಂಬು ನಮ್ಮಮ್ಮನ ಕಾಲದ್ದು. ತಾಮ್ರದ ಬಿಂದಿಗೆ ಅತ್ತೆ ಮನೆಯದು. ನೋಡುತ್ತಾ, ನೋಡುತ್ತಾ ಮನಸ್ಸು ವಿಚಲಿತವಾಗುತ್ತದೆ .ಹಳೆಯ ನೆನಪುಗಳ ಹಿನ್ನೋಟದಿಂದ ದುಃಖ ಉಮ್ಮಳಿಸುತ್ತಿದೆ.

ಮಗಳು ಅಮೆರಿಕೆಯಿಂದ ಬಂದಾಗ ಹಳೆ ಸಾಮಾನುಗಳ ವಿಲೇವಾರಿ ಬಗ್ಗೆ ಪದೇಪದೇ ಹೇಳಿ ಹೋಗಿದ್ದಳು. ಮುಂದೊಂದು ದಿನ ನಾವು ಈ ಎಲ್ಲಾ ವ್ಯಾಮೋಹಗಳಿಂದ ದೂರವಾಗಿ ಚಿಕ್ಕ ಮನೆ ಒಂದರಲ್ಲಿ ಇರಬೇಕಾಗಿ

ಬಂದರೆ ಸುಲಭವಾಗುವುದು ನಿಜಾ. ಆದರೆ ಮನೆ ಬದಲಾಯಿಸಿದಷ್ಟು ಸುಲಭವಾಗಿ ಮನಸ್ಸನ್ನು ಕೂಡ ಬದಲಾಯಿಸುತ್ತಾ ಹೋಗಬೇಕು. ಯಾವುದೇ ಮೌಲ್ಯವಿಲ್ಲದ ಸಾಮಾನುಗಳನ್ನು ಹಳೆಯ ಪೇಪರಿನವನಿಗೆ ತೂಕಕ್ಕೆ ಹಾಕಿದರೂ ಕೂಡ ಹೆಚ್ಚು ಹಣ ಬಾರದು. ಆದರೂ ಈ ಸತ್ಯವನ್ನು ಮನಸ್ಸು ಒಮ್ಮೆಗೆ ಒಪ್ಪಿಕೊಳ್ಳದು. ನಮ್ಮ ಸುತ್ತ ಕಟ್ಟಿಕೊಂಡ ಕೋಟೆಯಿಂದ ಹೊರ ಬಂದಾಗ ಮಾತ್ರ ನಮ್ಮ ಮುಂದಿನ ಪಯಣ ಪ್ರಯಾಸವಿಲ್ಲದೆ ನೆಮ್ಮದಿಯಿಂದ ಸಾಗಲು ಸಾಧ್ಯ. ಇದನ್ನು ಸಾಧಿಸಲು ಸರ್ವ ಪ್ರಯತ್ನ ಸಾಗಿದೆ

ಬಿಗ್ ಬಾಸ್ ಮನೆಯಲ್ಲಿ ಪ್ರತಿ ವಾರ ಎಲಿಮಿನೇಟ್ ಆದವರು ಹೋಗುವಾಗ ಅವರ ದುಃಖ ನೋಡಿ ಕೇವಲ ಕೆಲವಾರು ದಿನಗಳು ಒಡನಾಡಿದ, ವಾಸವಿದ್ದ ಮನೆಯನ್ನು ಬಿಟ್ಟು ಹೋಗಲೇ ಅವರಿಗೆ ಎಷ್ಟು ಕಷ್ಟವಾದರೆ ಇನ್ನು ಬದುಕಿನ ಕೊನೆಯ ಪ್ರಯಾಣ ಹತ್ತಿರ ಬಂದಾಗ ನಾವುಗಳೆಲ್ಲ ಕಟ್ಟಿಕೊಂಡ. ಹುಟ್ಟಿಕೊಂಡ ಭವ, ಬಂಧನಗಳಿಂದ ಕಳಚಿ ಹೊರಹೋಗುವುದೆಂತು ಎಂದು ಕ್ಷಣ ಅನಿಸದಿರದು. ಬದಲಾವಣೆ ಜಗದ ನಿಯಮ. ಆದ್ದರಿಂದ ನಾವುಗಳು ಕೂಡ ಪರಿವರ್ತನೆಗಳಿಗೆ ಎದೆಗುಂದದೆ ಮನಸ್ಸು ಗಟ್ಟಿ ಮಾಡಿಕೊಳ್ಳಬೇಕೆಂಬ ಪಾಠವನ್ನು ನಾವು ಕಲಿಯಲೇಬೇಕಿದೆ.

***

ಸಾವಿನ ಮನೆ

– ಮಹಾಬಲ

ಸಾವಿನ ಮನೆಯೆಂದರೆ ಹಲವು ಶೋಧಗಳ ತಾಣ
ಗೊತ್ತಿಲ್ಲದವರಿಂದ ಗೊತ್ತಿಲ್ಲದವರಿಗೆ ಪ್ರಶ್ನೆಗಳ ಬಾಣ.

ಯಾವಾಗ ಸಾವು ಸಂಭವಿಸಿತು ನಕ್ಷತ್ರ ತಿಥಿ ಏನು?
ದಿಕ್ಕು ಸರಿಯೇ ನೋಡಿ ಕಳೇಬರವ ಮಲಗಿಸಲು?

ದಾರಿ ತಪ್ಪಿತೆ ಶಾಸ್ತ್ರಿಗಳೆ? ಬನ್ನಿ ನಾಲ್ಕನೆಯ ಬೀದಿಗೆ
ತೋರಿಸೀತು ನಮ್ಮ ಮನೆ ಅಲ್ಲಿ ಹೊಗೆಯಾಡುವ ಸೌದೆ.
ಕರ್ತೃಗಳು ಯಾರು ಹತ್ತಿರದಲ್ಲೇ ಇರುವರೇನು?
ಇಲ್ಲದಿದ್ದರೆ ಬೇಕಲ್ಲವೆ ಶವ ಇರಿಸಲು ಫ್ರೀಜರು?

ಎಲ್ಲಂತೆ ದಹನ? ಬನ್ನಿ ಒಂದು ಆಟೋ ಹುಡುಕೋಣ
ಅಗಲಿದ ಬಂಧುವನು ನಾವು ಕಳುಹಿಸಿ ಬರೋಣ

ಸ್ಫೋಟದ ಸದ್ದಾಯಿತೇ ಓ! ಅಪ್ಪಣೆ ಕೊಟ್ಟರು ರಾಯರು.
ಮುಂದಿನ ಕಾರ್ಯ ಮುಗಿಸಲಿ, ಪಾಪ ಮನೆಯವರು.

ಮುಗಿಯಿತು ಅಂತ್ಯ ಸಂಸ್ಕಾರ ಮುಗಿದಿಲ್ಲ ಶೋಧ.
ತಿಳಿಯಬೇಕಿದೆ ಇನ್ನೂ ಉಯಿಲಿನ ಗೂಢವಿಚಾರ

***

ಒಲವಿನ ನಂಬಿಕೆ ಹುಸಿಯಾಗಲಿಲ್ಲ

– ಎಲ್. ಗಿರಿಜಾ ರಾಜ್

ಅವಳು ತನ್ನ ಮೊಬೈಲಿನಲ್ಲಿ ಸಮಯ ನೋಡಿಕೊಂಡು ಬೆಚ್ಚಿದಳು. ನಡುರಾತ್ರಿ 12.50. ಹನ್ನೆರಡಕ್ಕೆ ಸರಿಯಾಗಿ ಬಂದೇ ಬರುತ್ತೇನೆ ಎಂದು ನಲ್ಲ ಕೈ ಮೇಲೆ ಕೈ ಇಟ್ಟು ಆಡಿದ್ದ ಮಾತು ಹುಸಿಯಾಯಿತೇ? ದೂರದಲ್ಲಿ ಮಿನುಗುತ್ತಿದ್ದ ಬೀದಿ ದೀಪಗಳು ಅವಳನ್ನು ನೋಡಿ ಕಿಸಕ್ಕನೆ ನಕ್ಕಂತಾಯ್ತು. ಆ ಕತ್ತಲೆಯ ಶೂನ್ಯವನ್ನು ಭೇದಿಸಿ ತನ್ನ ಒಲವಿನ ಗೆಳೆಯ ಬಂದೇ ಬರುತ್ತಾನೆಂಬ ನಂಬಿಕೆ ಕ್ಷೀಣಿಸತೊಡಗಿತು. ಸುತ್ತ ತೋಪಿನ ಹಾಗಿದ್ದ ಆ ದೈತ್ಯಾಕಾರದ ಮರಗಳು ಆ ಪ್ರೇಮೋನ್ಮತ್ತತೆಯಲ್ಲಿ ಓಡಿ ಬಂದಿದ್ದ ಬಾಲೆಯನ್ನು ಹೆದರಿಸಲಾರಂಭಿಸಿದವು.

ಆ ಮೊದಲ ಭೇಟಿ, ಪರಸ್ಪರ ಕಣ್ಣುಗಳು ಕೂಡಿದಾಗ ಮೈಯೊಳಗೆಲ್ಲ ಸಂಚರಿಸಿದ ಮಿಂಚು, ಮುತ್ತಿನ ಮತ್ತಿಗಾಗಿ ಕಾತರಿಸಿ ಅದಮ್ಯ ಆಸೆಯಿಂದ ಹರಿದಿದ್ದ ಜೊಲ್ಲು ರಸ, ಮೊದಲಸಲ ಅವನು ಕೈ ಹಿಡಿದಾಗ ಆ ಬಿಗಿಯಲ್ಲಿದ್ದ ಬಿಸುಪು, ಬೆಚ್ಚನೆಯ ಭರವಸೆ, ಪ್ರೀತಿಯ ಆ ಮೊದಲ ಮಧುರ ಮಜಲುಗಳಾವುವೂ ನೆನಪಿಗೆ ಬರಲಿಲ್ಲ. ಆದರೂ ಸೋಲೊಪ್ಪದ ಅತಿಯಾದ ನಂಬಿಕೆ, ತನಗೆ ಗೊತ್ತಿರುವ ದೈವಗಳಿಗೆಲ್ಲಾ ಸಲ್ಲಿಸಿದ್ದ ಹರಕೆ, ಬಂದೇ ಬರುತ್ತಾನೆ ಎಂಬ ವಿಶ್ವಾಸದ ತಂಗಾಳಿಯನ್ನು, ಅವಿಶ್ವಾಸದ ಬಿರುಗಾಳಿಯ ಮೇಲೆ ಸಿಂಚಿಸುತ್ತಿದ್ದವು.

ಓ! ಪ್ರೀತಿಸಿದಷ್ಟು ಸುಸೂತ್ರವಾಗಿರಲಿಲ್ಲ ಭವಿಷ್ಯ! ಅದರ ಕಿಂಚಿತ್ ಆಲೋಚನೆಯಾದರೂ, ಕಂಡಕಂಡಲ್ಲೆಲ್ಲ ನೋಡಿದವರಲ್ಲೆಲ್ಲ ಪರಸ್ಪರರ ಮೋಹನ ರೂಪಗಳನ್ನೇ ಭ್ರಮಿಸುತ್ತಿದ್ದ ಪ್ರೇಮಿಗಳ ಮನದಲ್ಲಿ ಸುಳಿಯುವುದು ಸಾಧ್ಯವಿತ್ತೇ?

ಪ್ರೀತಿಸುವುದು ಸುಲಭ, ದಕ್ಕಿಸಿಕೊಳ್ಳುವುದು ಎಷ್ಟು ಕಷ್ಟ ಎಂಬ ಅರಿವು ಮೂಡುತ್ತಾ ಹೋದಂತೆ, ನಾನು ಈ ಪ್ರೀತಿಯ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳಬಾರದಿತ್ತು ಎಂದು ಒಂದು ಕ್ಷಣ ವಿರಕ್ತಿಯೆಡೆ ವಾಲಿತು ಮನ. ಆ ನಡುರಾತ್ರಿಯ ಕುಳಿರ್ಗಾಳಿ ಆ ಏರು ಜವ್ವನೆಯ ಮೈ ಸೋಂಕಿ ಇಡೀ ಶರೀರ ನಡುಗಿತು. ಬರಲಾರದೆ ಇರಲೆನ್ನ ಇನಿಯನೆಂಬ ಹೃದಯದ ನಂಬಿಕೆ ಹುಸಿಯಾಗಲಿಲ್ಲ ಎಂದು ಓಡಿ ಹೋಗಲು ಸನ್ನದ್ಧವಾಗಿದ್ದ ಕಾಲುಗಳು, ಈಗೇನು ನಾಟ್ಯ ಮಾಡಲೂ ನಾವು ಸೈ! ಎಂಬಷ್ಟು ಹುರುಪೇರಿದವು. ಆದರೆ ಬರುತ್ತಿದ್ದವರು ಇಬ್ಬರು, ಅವರೋ ಮೈಮೇಲೆ ಜ್ಞಾನವಿಲ್ಲದವರಂತೆ ಓಲಾಡಿಕೊಂಡು ಬರುತ್ತಿದ್ದರು. ಅವಳ ಮನದ ಉತ್ಸಾಹ ಜರ್ರನೆ ಇಳಿಯಿತು. ಅವರು ಕುಡುಕರು!

ತಮ್ಮೆಣಿಕೆಯಂತೆ ನಡೆಯದೆ ಇನ್ನೇನು ನಡೆಯುತ್ತಿದೆಯಲ್ಲ ಎಂದು ಹೆದರಿ ಮರದ ಹಿಂದೆ ಮರೆಯಾದಳು. ಆದರೆ ಏನೂ ಆಗಬಹುದಾದ ಸನ್ನಿವೇಶದಲ್ಲಿ ಅವಳ ಅದೃಷ್ಟಕ್ಕೆ ಅವರು ಕುಡಿದ ಮತ್ತಿನಲ್ಲಿ ಅಮಲೇರಿ ಮಾತಾಡುತ್ತಾ. ಬೀಳುತ್ತಾ. ಏಳುತ್ತಾ, ತಟ್ಟಾಡುತ್ತಾ ಹೊರಟುಹೋದರು. ಈ ಪ್ರೇಮಿಗಳ ಆಗುಹೋಗುಗಳನ್ನು ಕಟ್ಟಿಕೊಂಡು, ಗಂಭೀರವಾಗಿ ದಿಟ್ಟ ಹೆಜ್ಜೆ ಇಡುತ್ತಾ, ಕಾಲದ ಮಾರ್ಗ ಸವೆಸುವ ಕಾಲರಾಯನಿಗೆ ಏನಾಗಬೇಕು, ಯಾರು ಬೀಳಲಿ, ಯಾರು ಏಳಲಿ ಅವನ ನಡಿಗೆ ನಿರಂತರ. ಸಮಯ ಎರಡನ್ನು ಸಮೀಪಿಸುತ್ತಿದೆ. ಅವಳು ಕಂಪಿಸಿದಳು. ತಾನು ಮೋಸ ಹೋದೆನೆ, ಅವನ ನಿಷ್ಕಪಟ ಮುಖದ ಹಿಂದಿದ್ದ ವಂಚನೆಯ ಸುಳಿವೇ ತಿಳಿಯಲಿಲ್ಲವಲ್ಲ.

"ಅಯ್ಯೋ! ನಾನೆಂಥ ಕೆಲಸ ಮಾಡಿದೆ" ಹೆತ್ತವರು ನನ್ನಲ್ಲಿ ಪ್ರಾಣವನ್ನೇ ಇಟ್ಟಿದ್ದಾರೆ. ಅಪ್ಪ ಇವತ್ತು ಊರಿನಲ್ಲಿಲ್ಲ, ಅಮ್ಮ ಒಬ್ಬಳೇ ಬೇರೆ! ಅದಕ್ಕೆ ಅಲ್ಲವೇ ಸುದಿನ ಎಂದು ಈ ದಿನ ಆರಿಸಿಕೊಂಡದ್ದು ಅರ್ಧರಾತ್ರಿಯಲ್ಲಿ! ಆ ಮಮತೆಯ ಹೃದಯಗಳಿಗೆ ಕೊಳ್ಳಿ ಇಟ್ಟು ಬಂದೆನಲ್ಲ! ಯಾವ ಮುಖ ಹೊತ್ತು ಮನೆಗೆ ಹೋಗಲಿ? ಎಂದು ದುಃಖ ತಪ್ತಳಾದಳು. ಆತುರದಲ್ಲಿ ಕೈಗೆ ಸಿಕ್ಕಿದ ಬಟ್ಟೆಗಳನ್ನು ತುರುಕಿಕೊಂಡು ಬೀರುವಿನಿಂದ ಕೈಗೆ ಸಿಕ್ಕಷ್ಟು ಹಣ ದೋಚಿ, ಪ್ರೀತಿಯ ಮುಂದೆ ಯಾರೂ ಬೇಡ ಎಂದು ಹೊರಟುಬಿಟ್ಟಿದ್ದಳು. ಈ ಪ್ರೀತಿಯ ಮರ್ಮವನ್ನು ಕಂಡು ಹಿಡಿದವರಾರು? ದೂರದಿಂದ ಯಾರೋ ಬರುತ್ತಿರುವುದು ಕಂಡಿತು. ಈ ಮನಸೆಂಬುದು ಎಂಥ ಚಂಚಲ ಮಾಯಾರಂಗ! ಕ್ಷಣ ದುಃಖ, ಕ್ಷಣ ಸುಖಕ್ಕೆ ಹೇಗೆ ಸ್ಪಂದಿಸುತ್ತದೆ! ಕ್ಷಣದ ಹಿಂದೆ ವಿರಕ್ತಿ ಆವರಿಸಿದ್ದ ಮನದ ತುಂಬ ಅನುರಕ್ತಿಯ ಜಲತರಂಗ ಅನುರಣಿಸತೊಡಗಿತು. ಕಣ್ಣೀರ ತೆರೆ ಮುಸುಗಿ ಅಸ್ಪಷ್ಟವಾಗಿ ಕಂಡಿತು. ಆದರೂ ಈ ಬಾರಿ ಉದ್ವೇಗ ಏರದಂತೆ ಮನಸ್ಸು ಬಿಗಿ ಹಿಡಿದು ಆಗುವುದಕ್ಕೆಲ್ಲ ತಯಾರಾದಳು, ಆಗಲೇ ಬೇಕಿತ್ತು... ಕಾಲುಗಳು ತಕಪಕ ಕುಣಿಯಲಿಲ್ಲ, ಹುರುಪೇರಲಿಲ್ಲ, ಆಸೆಯ ಹಿಂದೆ ನಿರಾಸೆ ಇದ್ದೇ ಇರುತ್ತದೆ ಎಂಬುದು ಅವಕ್ಕೆ ಅನುಭವದ ಮಾತಾಗಿತ್ತು. ಮತ್ತೊಮ್ಮೆ ಮಗದೊಮ್ಮೆ ನೋಡಿದಳು, ಅವನಲ್ಲ ಅವಳು..

ಹತ್ತಿರ ಹತ್ತಿರ ಬಂದಂತೆ ಆ ಮಮತೆಯ ಮೂರ್ತಿ ಅಳುತ್ತಿದ್ದ ಕೂಸನ್ನು ಎದೆಗೊತ್ತಿ ಸಂತೈಸುವಂತೆ ಪ್ರೀತಿಸಿದವನಿಂದ ನಿರಾಶೆಗೊಳಗಾಗಿ ಅನಾಥೆಯಂತೆ ಅಳುತ್ತಾ ನಿಂತಿದ್ದ ತನ್ನ ಕರುಳ ಬಳ್ಳಿಯನ್ನು ಬರಸೆಳೆದು ಅಪ್ಪಿಕೊಂಡಿತು.

ಅಮ್ಮನ ಮಹಾ ಅಪ್ಪುಗೆಯಲ್ಲಿ ದುಃಖವೆಲ್ಲ ನೀರಾಗಿ ಹರಿಯಿತು. ತನ್ನೊಳಗಿನಿಂದಲೇ ದೇಹಾತ್ಮ ಪಡೆದು ಕೊಂಡು ಮೈತಳೆದ ಮಗಳನ್ನು ಮೈದಡವಿ ಸಂತೈಸತೊಡಗಿತು, ಆ ಕರುಣೆಯ ಕರಗಳು. ಯಾರಿಗೆ ತಿಳಿಯದಿದ್ದರೇನು? ಇತ್ತೀಚೆಗೆ ಮಗಳ ಚರ್ಯೆಯಲ್ಲಿ ಆಗುತ್ತಿದ್ದ ಸೂಕ್ಷ್ಮ ಬದಲಾವಣೆಗಳನ್ನು ತಾಯಿಯ ಕಣ್ಣುಗಳು ಗಮನಿಸದೇ ಇರಲಿಲ್ಲ. ಇಂಥದೊಂದು ರಾತ್ರಿ ಬರಬಹುದೆಂದು ಆಕೆ ಎಚ್ಚರವಾಗಿದ್ದಳು. ಆ ದಿನ ಮಗಳು ಹೋದಾಗ ನಿದ್ದೆ ಮೈಮರೆಸಿದರೂ, ಜಲಭಾದೆ ತೀರಿಸಿಕೊಳ್ಳಲು ಎದ್ದ ತಾಯಿ ಮತ್ತೆ ಮಲಗುವ ಮುನ್ನ ಮಗಳ ಕೋಣೆಗೆ ಇಣುಕಿದ್ದಳು. ಆ ಖಾಲಿ ಹಾಸಿಗೆಯ ಶೂನ್ಯತೆ ಆ ತಾಯಿ ಹೃದಯ ಇರಿದುದಷ್ಟೇ ಅಲ್ಲ! ಆಗಿರಬಹುದಾದ ಎಡವಟ್ಟನ್ನು ಸಂಕೇತಿಸಿತು. ಅಡ್ಡದಾರಿ ಹಿಡಿದ ಕರುವನ್ನು ಹುಡುಕುತ್ತಾ ಅಲೆಯುವ ತಾಯಿ ಹಸುವಿನಂತೆ ನಡುಗುವ ಹೃದಯ ಕೈಯಲ್ಲಿ ಹಿಡಿದು ಹುಡುಕುತ್ತಾ ಓಡಿಬಂದಿದ್ದಳು. "ಮಗಳೇ, ಈ ಹೊತ್ತಿನಲ್ಲಿ ಇಲ್ಲಿ, ಬಹಳ ಹೊತ್ತಿರುವುದು ಅಪಾಯ! ಪ್ರೀತಿಸುವುದು ತಪ್ಪಲ್ಲ, ಆದರೆ ಪ್ರೀತಿಯನ್ನು ಈ ರೀತಿ ದಕ್ಕಿಸಿಕೊಳ್ಳಲು ಹೊರಟಿದ್ದು ತಪ್ಪು! ಒಬ್ಬಳೇ ಮಗಳ ಪ್ರೀತಿಯನ್ನು ಹೊಸಕಿ ಹಾಕುವಷ್ಟು ಕಟುಕರಲ್ಲ ನಾವು, ಮಗು. ಒಬ್ಬಳೇ ಮಗಳು ತೊರೆದುಹೋದರೆ ನಾವು ಬದುಕಿರುತ್ತೇವೆಯೇ?" ಎಂದಳು, ನೊಂದ ತಾಯಿ.

"ಅಮ್ಮ, ನಾನು ಮೋಸಕ್ಕೆ ಒಳಗಾದೆ, ಅವನಿಷ್ಟು ನೀಚನೆಂದು ಗೊತ್ತಾಗಲಿಲ್ಲ" ಎಂದು ಮತ್ತೆ ಬಿಕ್ಕಿದಳು ತಾಯಿ ಮಗಳ ಮೈದಡವಿ, "ಇಲ್ಲ ಮಗಳೇ, ಅಷ್ಟು ಬೇಗ ಇಂಥ ತೀರ್ಮಾನಕ್ಕೆ ಬರಬೇಡ, ಅವನಿಗೆ ಇಲ್ಲಿ ಬರುವುದಕ್ಕೆ ಆಗದಿರುವಂತೆ ಎಂಥ ಸಂದರ್ಭ ಬಂದಿದೆಯೋ, ಅವನ ಪ್ರೀತಿ ಗಟ್ಟಿಯಾಗಿದ್ದರೆ ಬಂದೇ ಬರುತ್ತಾನೆ" ಎಂದಾಗ ಮಗಳು, "ಫೋನ್ ಮಾಡಿದರೂ ನನಗೆ ಪ್ರತಿಕ್ರಿಯೆ ಇಲ್ಲ! ತಪ್ಪಲ್ಲವೇ ಅದು!" ಎಂದಳು. "ಏನು ಬೇಕಾದರೂ ಆಗಿರಬಹುದು, ಸುದ್ದಿ ತಿಳಿಸದಷ್ಟು ಏನೋ ತೊಂದರೆ ಆಗಿರಬಹುದು, ಬಾ ಮನೆಗೆ ಹೋಗೋಣ" ಎಂದು ಮಗಳ ಮನದಲ್ಲಿ ಆಶಯ ಬಳ್ಳಿ ಚಿಗುರಿಸಿ ಮಗಳು ಸಿಕ್ಕ ಮಹಾದಾನಂದದಿಂದ

ಕರೆದೊಯ್ದಳು. ಅವಳು ತಾಯಿಯ ಹಾರೈಕೆ ನಿಜವಾಗುವ ದಿನಕ್ಕಾಗಿ ಆಸೆಯ ಕುಸುಮಗಳನ್ನು ಮುಡಿದು ನಿರೀಕ್ಷಿಸತೊಡಗಿದಳು.

ಅಲ್ಲಿ ಅವನು, ತಂದೆಯ ಮನದಲ್ಲಿ ಕಾರ್ಮೋಡಗಳಂತೆ ದಟ್ಟವಾಗಿ ದಟ್ಟೈಸಿದ್ದ ಜಾತಿ ಭ್ರಾಂತಿಯನ್ನು ಹೋಗಲಾಡಿಸಿ, ಕಾರ್ಮೋಡ ಕರಗಿಸಿ ಸೊಬಗಿನ ಸೋನೆಯಾಗಿಸಲು ಇನ್ನಿಲ್ಲದ ಪ್ರಯತ್ನ ಮಾಡ ಬೇಕಾಯಿತು. ಅವನ ತಾಯಿ, ಮಗನ ಪರವಾಗಿ ಮತ ಚಲಾಯಿಸಿದಾಗ ತಂದೆ ತಲೆಬಾಗಬೇಕಾಯಿತು.

ಒಂದು ಒಳ್ಳೆಯ ದಿನ ತಾಯಿ ತಂದೆಯವರೊಂದಿಗೆ ತನ್ನಿನಿಯ ತನ್ನ ಮನೆಯ ಬಾಗಿಲಿನಲ್ಲಿ ಪ್ರತ್ಯಕ್ಷವಾದಾಗ ಅವಳು ನಿಂತಲ್ಲೇ ನಾಚಿ ಮೊಗ್ಗಾದಳು...

***

ವರ್ಕ್ ಫ್ರಂ ಹೋಮ್

– ಮಾಧುರಿ ಕೃಷ್ಣ

ಆವತ್ತು ಮಗ ಆಫೀಸಿನಿಂದ ಬರುವಾಗಲೇ ನಗುನಗುತ್ತ ಬಂದ. “ಅಮ್ಮ, ನಮ್ಮ ವರ್ಕ್ ಫ್ರಂ ಹೋಮ್ ಮತ್ತೆ ಮೂರು ತಿಂಗಳಿಗೆ ಎಕ್ಸ್ಟೆಂಡ್ ಆಯಿತು. ಬಾಲ್ಟಿಮೋರ್ ಆಫೀಸಿನಿಂದಲೇ ಆರ್ಡರ್ ಬಂತು. ಅಮೇರಿಕಾದಲ್ಲಿ ಕೊರೊನಾ ಜಾಸ್ತಿಯಾಗಿದೆ" ಎಂದು ಸ್ಟೆಪ್ ಹಾಕಿಕೊಂಡು ಕುಣಿಯಲಾರಂಭಿಸಿದ. ಹಾರಿ ಹಾರಿ ಮೆಟ್ಟಿಲಿಳಿದು ಬಂದ ಮೊಮ್ಮಕ್ಕಳೂ ಅಪ್ಪನೊಂದಿಗೆ ಅಂಗಳದಲ್ಲಿ ತಾವೂ ಸ್ಟೆಪ್ಸ್ ಹಾಕತೊಡಗಿದರು.

"ಛೇ, ಏನೋ ಇದು, ವಿಕ್ಕೆಡ್ ಮೈಂಡ್..." ಎಂದೆ, ನಾನೂ ಅವನ ನೃತ್ಯ ನೋಡಿ ನಗುತ್ತ.

“ಬರ್ತೀಯಾ, ನೀನೂ ನಿನ್ನ 50 ವರ್ಷದ ಪುರಾನಾ ಸಹಪಾಠಿಯನ್ನು ನೋಡಬಹುದು” ಎಂದು ಆಶೆ ಹುಟ್ಟಿಸಿದ.

‘ಹೌದಲ್ವೇ, ನಂಗೂ ಇದೊಂದು ಅವಕಾಶವಲ್ವೇ!’ ಅಂತ ಯೋಚಿಸಿತು ನನ್ನ ಮನ. ಮೊತ್ತಮೊದಲ ಬಾರಿ ಆತನನ್ನು ನೋಡಿ ಆಗಲೇ ಎರಡು ತಿಂಗಳಾಗಿತ್ತು. ಫೋನ್ ಮಾಡಿದಾಗೊಮ್ಮೆ, ’ಪುಣ್ಯಾತ್ಮಗಿತ್ತಿ, ನೀನೇನು ಮನೆಯಲ್ಲೇ ಹಾಯಾಗಿದ್ದಿಯಾ, ನಾ ನೋಡು ಆಸ್ಪತ್ರೆಯಲ್ಲಿದ್ದೇನೆ’ ಎಂದು ಹೇಳಿದ್ದ. ಸರಿ, ಆತನನ್ನೊಮ್ಮೆ ನೋಡಿದಂತೂ ಆಯಿತು ಎಂದು ನಾನೂ ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ಹೊರಟೆ. ಕ್ರಿಸ್‌ಮಸ್ ರಜಾ ಬೇರೆ. ದಾರಿಯುದ್ದಕ್ಕೂ ಹಾಡು, ಹರಟೆ ಗಲಾಟೆ! ನಮ್ಮ ಭಾರತದಲ್ಲಿ ಕೊರೊನಾದ ಉಪದ್ರ ಅಷ್ಟೊಂದು ಇರಲಿಲ್ವೇ! ಹಾದಿಯಲ್ಲಿ ಹೋಟೇಲಿನಲ್ಲಿ ರುಚಿಯಾದ ಊಟ ಮುಗಿಸಿ, ಘಾಟಿ ಇಳಿದು ನಮ್ಮ ಕೋಡಿ ಬೀಚ್ ಸೇರಿಕೊಂಡೆವು. ಸ್ನಾನ ಮಾಡಿ ಪ್ರಯಾಣದ ಧೂಳು ಕೊಡವಿಕೊಂಡು ರಾತ್ರಿ ಸೊಗಸಾದ ನಿದ್ದೆಯೂ ಹತ್ತಿತ್ತು.

ಬೆಳಗ್ಗೆ ಎದ್ದು ಉಪಾಹಾರ ಮಾಡುವಾಗಲೇ ಮಗ ಹೇಳಿದ, "ಯಾವಾಗ ಮಿತ್ರನ ಮನೆಗೆ ಹೋಗುತ್ತೀ? ಇಂದೇ ಮುಗಿಸಿಬಿಡು. ನಾಲ್ಕು ಗಂಟೆಗೆ ಬಿಟ್ಟು ಬರುತ್ತೇನೆ. ಅವರಿಗೆ ಫೋನ್ ಮಾಡಿ ಇವತ್ತೇ ಬರುತ್ತೇನೆಂದು ಹೇಳಿಬಿಡು ".

ನಾನು ಫೋನ್ ಮಾಡಲಿಲ್ಲ. ಸಹಪಾಠಿಯನ್ನು ಸರ್‌ಪ್ರೈಸ್ ವಿಸಿಟ್ ಮಾಡಿ ಆಶ್ಚರ್ಯಗೊಳಿಸಬೇಕು ಎಂದುಕೊಂಡೆ. ಆದರೂ ಒಳಗಿಂದೊಳಗೇ ಅಳುಕು, ಅನುಮಾನ ಇದ್ದೇ ಇತ್ತು. ಯಾಕೆಂದ್ರೇ ಅವನು ವ್ಹೀಲ್‌ಛೇರ್‌ಗೆ ಅಂಟಿಕೊಂಡವನು. ಆಗಾಗ್ಗೆ ಮಣಿಪಾಲ ಹಾಸ್ಪಿಟಲ್‌ಗೆ ಭೇಟಿಕೊಡಬೇಕಾಗುತಿತ್ತು. ‘ಏನೇ ಆಗಲಿ, ಇವತ್ತೊಮ್ಮೆ ಪರೀಕ್ಷಿಸಿಯೇ ಬಿಡೋಣ’ ಎಂದು ತುಂಟ ಮನಸ್ಸು ಹೇಳಿತು.

ಇದಾವುದೂ ತಿಳಿಯದ ಮಗ ಕಾರು ನಿಲ್ಲಿಸುತ್ತ, ’ಇನ್ನೆರಡು ಗಂಟೆ ಬಿಟ್ಟು ಬರುತ್ತೇನೆ’ ಎಂದು ನನ್ನನ್ನು ಇಳಿಸಿ ತನ್ನ ಪಾಡಿಗೆ ಹೊರಟುಹೋದ. ಮಿತ್ರನ ಮನೆ, ನಮ್ಮ ಮನೆಯಿಂದ ಐದು ಹತ್ತು ನಿಮಿಷದ ನಡಿಗೆ! ಹಾಗೇನಾದ್ರೂ ಅವನು ಮನೆಯಲ್ಲಿ ಇಲ್ಲಾಂದ್ರೇನು, ನಡೆದು ವಾಪಾಸು ಹೋಗುವುದು, ನಾ ಹುಟ್ಟಿ ಬೆಳೆದ ಊರೇ ಅಲ್ವೇ ಎನ್ನುವ ಧೈರ್ಯ ನನ್ನದು.

ಖಾಲಿ ಗದ್ದೆ ಜಾಗ ಹಾದು, ಗೇಟ್ ತೆಗೆದ ಸದ್ದಿಗೆ "ಯಾರೂ..." ಎಂಬ ಕೂಗಿನೊಂದಿಗೆ ಮುಂಬಾಗಿಲು ತೆರೆಯಿತು. "ಅರೇ, ಆಂಟೀ.. ನೀವು!" ಎಂಬ ಮಾತಿನೊಂದಿಗೆ ಮುಖ ತಿರುಗಿಸಿ ಒಳ ನೋಡುತ್ತ ಗಟ್ಟಿಯಾಗಿಯೇ ಮಿತ್ರನ ಮಗಳು ಕೂಗಿಕೊಂಡಳು. "ಅಪ್ಪಾ..., ನಿಮ್ಮ ಕ್ಲಾಸ್‌ಮೇಟ್ ಬಂದಿದ್ದಾರೆ".

ಮೆಟ್ಟಿಲು ಹತ್ತಿದ ನಾನು ಎದುರಿಗೆ ನೋಡಿದೆ. ಮರದ ಕುರ್ಚಿ ಖಾಲಿಯಿತ್ತು. ಪಕ್ಕದ ದಿವಾನಿನಲ್ಲಿ ಮಲಗಿದ ಹೆಂಗಸು ಗಡಬಡಿಸಿ ಎದ್ದು ಕುಳಿತು, ಬಿಡಿಸಿಕೊಂಡಿದ್ದ ಕೂದಲನ್ನು ಸುತ್ತುವ ಕೆಲಸ ಮಾಡಿದರು. ಒಳಗೆಲ್ಲಿಂದಲೋ ಇನ್ನೊಬ್ಬಾಕೆಯೂ ಬಂದಳು. ಅವಳ ಹಿಂದೇನೇ ಕಣ್ಣುಜ್ಜಿಕೊಳ್ಳುತ್ತ ನನ್ನ ಸಹಪಾಠಿ ಮಿತ್ರನ ಚೂಟಿ ಮೊಮ್ಮಗನೂ ಬಂದ. ಶಾಂತವಾಗಿದ್ದ ಮನೆ ಇದ್ದಕ್ಕಿದ್ದಂತೆ ಗಡಿಬಿಡಿಗೊಂಡಿತು. ಬಾಗಿಲು ತೆಗೆದಾಕೆ ನನ್ನನ್ನು ಒಳಗೆ ಬಿಟ್ಟುಕೊಂಡರೆ, ಇನ್ನೊಬ್ಬಾಕೆ ಬಾಗಿಲು ತೆರೆದಿದ್ದ ಪಕ್ಕದ ಕೋಣೆ ಹೊಕ್ಕಳು.

"ಏನು, ಬರುತ್ತೇನೆಂದು ಫೋನ್ ಮಾಡಬಾರದಿತ್ತಾ? ಸೀದಾ ನುಗ್ಗಿಯೇ ಬಿಡುವುದಾ", ಮಿತ್ರ ಅಲವತ್ತು ಕೊಳ್ಳುವುದು ಸ್ಪಷ್ಟವಾಗಿ ಕೇಳಿಸಿತು. "ಮೆಲ್ಲ ಮಾತಾಡಿ ಅಪ್ಪಾ, ಅವರಿಗೆ ಕೇಳಿಸಿಬಿಟ್ಟೀತು" ಎಂದು ಮಗಳು ಅಪ್ಪನನ್ನು ಸಮಾಧಾನಿಸಲು ಪ್ರಯತ್ನಿಸಿದಳು. "ಕೇಳಿದ್ರೆ ಕೇಳಿಸಲಿ, ನಾ ಹೀಗೆಯೇ ಹೇಗೆ ಹೊರಹೋಗಲಿ!"

ಮಿತ್ರ ಚಡಪಡಿಸುವುದು ಕೇಳಿ, ನಾನು ತಪ್ಪು ಮಾಡಿದೆ ಎಂದೆನಿಸಿತು. ಹೊರಗಿದ್ದ ಆತನ ಮಗಳಿಗೆಂದೆ, "ನಾನು ಕಾಯುತ್ತೇನೆ, ನಿಧಾನವಾಗಿ ಎಬ್ಬಿಸಿ ಕರೆತನ್ನಿ" ಎಂದು ಅಲ್ಲಿದ್ದ ಸಿಂಗಲ್ ಸೀಟರ್ ಮೇಲೆ ಆರಾಮದಿಂದೆಂಬಂತೆ ಕೂರುತ್ತ, ದಿವಾನ್ ಮೇಲೆ ಎದ್ದು ಕೂತಿದ್ದ ಮಿತ್ರನ ಹೆಂಡತಿಗೆ ಕೈ ಜೋಡಿಸಿ, "ನಮಸ್ಕಾರ, ಚೆನ್ನಾಗಿದ್ದೀರಾ" ಎಂದೆ. ಆಕೆ ಒಂದು ಸುಂದರ ನಗೆ ಬೀರಿದರು.

ಐದು ನಿಮಿಷಗಳು ಕಳೆದು ಹತ್ತಾಗುತ್ತಾ ಬಂತು. ಇಬ್ಬರು ಹೆಣ್ಣು ಮಕ್ಕಳೂ ಒಳಗಿದ್ದರು. ಮಿತ್ರನ ಚುರುಕು ಮೊಮ್ಮಗ ಕ್ಷಣಕ್ಕೊಮ್ಮೆ ಮುಖ ತೋರಿಸಿ, ಚೆಂದವಾದ ನಗೆಯೊಂದನ್ನು ಬೀರಿ ಪುನಹ ಒಳಸೇರುತ್ತಿದ್ದ. ಮಿತ್ರನ ಮಡದಿಯೊಂದಿಗೆ ಯೋಗಕ್ಷೇಮದ ಒಂದೆರಡು ಮಾತಾಡುತ್ತ ಸಮಯ ಕಳೆಯಲೆತ್ನಿಸಿದೆ.

ಕೊನೆಗೂ ಎರಡೂ ಬದಿಯಿಂದ ವ್ಹೀಲ್‌ಛೇರ್ ತಳ್ಳಿಕೊಂಡು ಮಿತ್ರನ ಹೆಣ್ಣು ಮಕ್ಕಳಿಬ್ಬರೂ ಹೊರಬಂದರು. ಮೊಮ್ಮಗ ಅಜ್ಜನ ಕೈಗೆ ವಾಚು ಕಟ್ಟುತ್ತಿದ್ದ. ನಾನು ಎದ್ದು ನಿಂತು ಕೈ ಜೋಡಿಸಲೆತ್ನಿಸಿದೆ.

"ಯಾಕೆ ಎದ್ದೆ? ಕೂತ್ಕೋ.. ಕೂತ್ಕೋ.." ಎಂದ ಮಿತ್ರ. ಆತನನ್ನು ನೋಡಿದೆ. 'ಆತನ ಧ್ವನಿಯಲ್ಲೇನಾದ್ರೂ ಸಿಡುಕಿತ್ತೇ? ಪ್ರಾಯಶಃ ಇರಲಿಕ್ಕಿಲ್ಲ. ಆದರೂ ಅವಸರವಾದದ್ದಂತೂ ನಿಜ! ಅದೇ 50 ವರ್ಷದ ಹಿಂದಿನ ಮುಖ, ದಟ್ಟವಾದ ಕ್ರಾಪಿನ ಕೂದಲೆಲ್ಲ ಈಗ ಬಿಳಿ ಬಿಳಿಯಾಗಿತ್ತು. ಬಿಳುಪು ತುಂಬು ತೋಳಿನ ಶರ್ಟು. ಗುಂಡಿಗಳೆಲ್ಲ ಅದಲು ಬದಲಾಗಿದ್ದುವು. ಒಂದು ತೋಳು ಅರ್ಧಕ್ಕೆ ಹೇಗೋ ಮಡಿಸಿಕೊಂಡಿದ್ದರೆ, ಇನ್ನೊಂದು ಕಫ್ ಲಿಂಕ್ ಸಿಕ್ಕದೆ ಜೋತಾಡುತಿತ್ತು. ಪಕ್ಕದಲ್ಲಿದ್ದ ಮಗಳ ಕೈಯಲ್ಲಿ ಬಾಚಣಿಗೆ ಹಾಗೇ ಇತ್ತು. ವಾರದಿಂದ ಬೆಳೆದ ಗಡ್ಡಕ್ಕೆ ಏನೂ ಮಾಡಲಾಗದೆ ಮಕ್ಕಳಿಬ್ಬರೂ ಮುಖ ಬಾಡಿಸಿಕೊಂಡಿದ್ದರು. ಪ್ಯಾಂಟ್ ಬದಲು ಬಣ್ಣದ ಲುಂಗಿ ಕಾಲುಗಳನ್ನು ಮುಚ್ಚಿತ್ತು. ಒಟ್ಟಿನಲ್ಲಿ ಇಸ್ತ್ರಿ ಮುರಿದ ಬಟ್ಟೆಯಂತಿದ್ದ ನನ್ನ ಸಹಪಾಠಿ ಮಿತ್ರ.

ಅಷ್ಟರಲ್ಲೇ ಮಾತೊಂದು ನನ್ನೆಡೆ ತೂರಿ ಬಂತು, "ನಿನ್ನ ಕೈಯಲ್ಲಿ ಮೊಬೈಲು ಇದ್ದು ಏನು ಪ್ರಯೋಜನ? ಯೂಸ್ ಮಾಡೋಕೇ ಬರುವುದಿಲ್ಲವೇ?" ಬೆಚ್ಚಿ ಬಿದ್ದು ಕೈಯಲಿದ್ದ ಮೊಬೈಲನ್ನು ನೋಡಿದೆ. ಆತನ ತೋರು ಬೆರಳು ಇನ್ನೂ ಆಕ್ಷೇಪಿಸುತ್ತಾ ನನ್ನೆಡೆಗೇ ಇತ್ತು.

ಕತ್ತು ಕೆಳಹಾಕಿ, ಕೆಳತುಟಿ ಮುಂದೆ ಮಾಡಿ ಹೇಳಿದೆ, "ಸಾರಿ, ವೆರಿ ಸಾರಿ...!"

"ಸಾರಿಯಂತೆ ಸಾರಿ.., ನನ್ನನ್ನ ಈ ಅವಸ್ಥೆಯಲ್ಲಿ ನೋಡುವಂತಾಯ್ತಲ್ಲ" ಮತ್ತಷ್ಟು ಆಕ್ಷೇಪಿಸುತ್ತಾ ಅಂದ. ರಾಜಧಾನಿ ದೆಹಲಿ, ಮುಂಬೈ ಸೇರಿ ವೃತ್ತಿ ಜೀವನವನ್ನು ಟಾಕುಟೀಕಾಗಿ ಕಳೆದು, ಅವಧಿ ಮುಗಿಸಿಬಂದ ಬ್ಯಾಂಕ್ ಅಧಿಕಾರಿಗೆ ತನ್ನ ನಿಸ್ಸಹಾಯಕತೆಯ ಜತೆಗೆ ಅಸ್ಥವ್ಯಸ್ಥಗೊಂಡ ಉಡುಪಿನ ಬಗ್ಗೆಯೂ ಬ್ರಹ್ಮಾಂಡ ತುಂಬುವಷ್ಟು ಬೇಸರ ಮುಖದಲ್ಲಿ ಕಾಣಿಸುತಿತ್ತು.

ತಲೆಯೆತ್ತಿ ಆತನನ್ನೇ ದಿಟ್ಟಿಸಿದೆ ಮತ್ತು ಹೇಳಿದೆ, "ನಮ್ಮದೆಲ್ಲ ಅಷ್ಟೇ ಕಣೋ, ಸಾಧ್ಯವಿರುವಾಗಲೆಲ್ಲ, ನಮ್ಮ ಕಾಲವನ್ನು ಚೆಂದವಾಗಿ, ಗತ್ತು, ಶಿಸ್ತಿನಿಂದ ಕಳೆದು ಬಂದಿದ್ದೇವೆ. ನಾಲ್ಕಲ್ಲ, ನಾನ್ನೂರು ಜನ ಹೊಗಳುವಂತೆ ಬಾಳಿ ಬದುಕಿದ್ದೇವೆ. 50 ವರ್ಷ ಕಳೆದ ಮೇಲೂ ಆ ಇಪ್ಪತ್ತರಲ್ಲಿದ್ದಂತೆ ಈಗಲೂ ಇರಬೇಕೆಂದರೆ ಹೇಗೆ? ಇಗೋ, ನನ್ನನ್ನು ಸರಿಯಾಗಿ ನೋಡು. ನಾನು ನಿನ್ನ ಅದೇ ಕಾಲದ ಸಹಪಾಠಿಯಲ್ಲವೇ, ನೀನಾದರೋ ನನ್ನ ಕಣ್ಣುಗಳಿಗಂತೂ ಅದೇ ಮಿಸ್ಟರ್ ಪರಫೆಕ್ಟ್", ಅಷ್ಟು ಹೇಳಿ ನಗಲು ಪ್ರಯತ್ನಿಸಿದೆ. ಆದರೆ ಆತ ಏನೂ ಮಾತಾಡದೆ ಸುಮ್ಮನೆ ಕುಳಿತೇ ಇದ್ದ.

"ಇದೋ, ಇವನ ಮುಖ ನೋಡು..." ಎನ್ನುತ್ತ ಅವನ ಮೊಮ್ಮಗನನ್ನು ಸೆಳೆದುಕೊಂಡು ಮಿತ್ರನ ಮುಂದೆ ಕೊಂಡು ಹೋಗಿ ನಿಲ್ಲಿಸಿ, "ಸರಿಯಾಗಿ ನೋಡು, ಇದು ಯಾರು? ನೀನೇ ಅಲ್ಲವೇ, ನಿನ್ನದೇ ಬಿಂಬವಲ್ಲವೇ..." ಘಟ್ಟಿಸಿ ನಿಂತು ಕೇಳಿದೆ. ನನ್ನ ಸಹಪಾಠಿ ಮಿತ್ರ ಈಗ ಕಣ್ಣರಳಿಸಿ ನೋಡಿದ.

ತನ್ನ ಮೊಮ್ಮಗನನ್ನು ಕಣ್ಣರಳಿಸಿ ನೋಡುತ್ತಲೇ ಇದ್ದ..., ನೋಡುತ್ತಲೇ ಇದ್ದ!

***

ಸ್ಪರ್ಧೆಗೊಂದು ಬರೆಹ

– ಜಿ.ವಿ.ನಿರ್ಮಲ

ಅಂದು ಭಾನುವಾರ. ಬೆಳಗ್ಗೆ ಪೇಪರಿನವ ಎಸೆದ ಪೇಪರ್‌ಗಳು ಬಿದ್ದಲ್ಲೇ ಬಿದ್ದಿವೆ. ವಿಶ್ವನಾಥನಿಗೆ ಅದರ ಮೇಲೆ ಗಮನವೇ ಇಲ್ಲ. ಅತ್ತಿಂದಿತ್ತ, ಇತ್ತಿಂದತ್ತ ಠಳಾಯಿಸ್ತಾನೇ ಇದ್ದ. ಇದನ್ನು ಒಂದೆರಡು ನಿಮಿಷಗಳು ನೋಡಿದ ಅವನ ಹೆಂಡತಿ ನೀರಜಾ, 'ಏನ್ರೀ, ಬೋನಲ್ಲಿ ಕೂಡಿಹಾಕಿದ ಕರಡಿ ತರ ಅತ್ಲಾಂಗಿಂದಿತ್ಲಾಗಿ, ಇತ್ಲಾಗಿಂದತ್ಲಾಗಿ ಗುಡಗಾಡ್ತಿದೀರಾ?'

'ಹುಂ. ನಾನೊಂದು ಸಮಸ್ಯೇಲಿ ಸಿಕ್ಹಾಕ್ಕೊಂಡಿದೀನಿ. ನನ್ನ ಮಾತಾಡಿಸ್ಬೇಡ. ಸ್ವಲ್ಪ ಸುಮ್ನಿರು'

'ಅಲ್ರೀ, ನಿಮ್ಮ ಅರ್ಧಾಂಗಿ ಅಂದ್ಮೇಲೆ ನಿಮ್ಮ ಕಷ್ಟಸುಖ ತಿಳ್ಕೋಬೇಡ್ವಾ? ನಾನಲ್ದೆ ನಿಮ್ಮ ಸಮಸ್ಯೇನ ಯಾರು ಪರಿಹರಿಸ್ತಾರೆ?'

'ಸರಿ ಹಾಗಾದ್ರೆ ಕೇಳು. ಒಂದು ಹಾಸ್ಯ ಬರೆಹ ಬರೆದು, ಒಂದು ಪತ್ರಿಕೆಯ ಸ್ಪರ್ಧೆಗೆ ಕಳಿಸ್ಬೇಕು ಅಂತ ನಿರ್ಧಾರ ಮಾಡ್ಬಿಟ್ಟಿದೀನಿ. ಈಗ ಏನು ಬರೀಲಿ? ಯಾವ ವಿಷ್ಯದ ಮೇಲೆ ಬರೀಲಿ ಅಂತ ಯೋಚಿಸ್ತಾ ಇದೀನಿ' ಅಂದ ವಿಶ್ವ.

'ಏನು, ನೀವಾ? ಹಾಸ್ಯಬರಹಾನಾ? ವಿಷ್ಯ ಹುಡುಕ್ತಾ ಇದೀರಾ? ನೀವು ಯಾವಾಗ ಬರಹಗಾರರಾದ್ರಿ? ಎಷ್ಟು ಬರಿದಿದ್ದಿರಿ? ಲೀವ್ ಲೆಟರ್ ಬಿಟ್ಟು ಎರಡಕ್ಷರ ಬರೆದಿದ್ದು ನಂಗಂತೂ ಗೊತ್ತಿಲ್ಲ. ಈಗೇನು ಹೊಸ ಹುಚ್ಚು? ಅಥ್ವಾ ಇದೇನಾದ್ರೂ ಕೋವಿಡ್ ರೋಗದ ಪರಿಣಾಮನಾ? ಅದೂ ಅಲ್ದೆ ಕೋವಿಡ್ ಬಂದು ಜನಕ್ಕೆ ನಗೋದೇ ಮರ್ತು ಹೋಗಿದೆ. ಈಗ ನೀವು ನಗೆಬರೆಹ ಬರೀಬೇಕಾ?'

'ನೋಡು, ನೋಡು ನೀನು ಹೀಗೆ ನನ್ನ ಹಗುರವಾಗಿ ನೋಡ್ಬೇಡ. ಇಂತಹ ಸಮಯದಲ್ಲಿ ನಗು ಬರಿಸೋದೇ ಬಹಳ ಮುಖ್ಯ, ಅತ್ಯಾವಶ್ಯಕ ಅಂತಾನೂ ಹೇಳಬಹುದು. ಎಷ್ಟೋ ಜನ ಇಳಿವಯಸ್ಸಿನಲ್ಲಿ ಏನೇನೋ ಸಾಧಿಸ್ತಾರೆ. ಬೆಟ್ಟ ಹತ್ತಿ, ಮೈಲಿಗಟ್ಲೆ ಓಡಿ ಅನೇಕಾನೇಕ ಸಾಹಸಗಳ್ನ ಮಾಡ್ತಾರೆ. ನನಗೆ ಒಂದು ಹಾಸ್ಯ ಬರೆಹ ಬರೆಯಕ್ಕಾಗಲ್ವಾ? ಮಾತಿಗ್ಮುಂಚೆ ಅರ್ಧಾಂಗಿ, ಅರ್ಧಾಂಗಿ ಅಂತ ಕೊಚ್ಕೋತಿಯಲ್ಲ, ಸ್ವಲ್ಪನಾದ್ರೂ ಉತ್ಸಾಹ ತುಂಬಿ, ಉತ್ತೇಜನ ಕೊಡೋದು ಬೇಡ್ವಾ? ಅದು ಬಿಟ್ಟು ಕಾಲೆಳೀತೀಯಲ್ಲಾ? ಇಂತಹ ಹೊತ್ನಲ್ಲಿ ಜನದ ಮುಖದಲ್ಲಿ ನಗು ತರಿಸೋದೇ ನನ್ನ ಉದ್ದೇಶ. ಅಲ್ಲ, ಅಲ್ಲ. ಪತ್ರಿಕೆಯವರ ಸದುದ್ದೇಶ. ಸ್ಪರ್ಧೆಯ ಉದ್ದೇಶ.'

'ಸ್ಸಾರಿ, ಸ್ಸಾರಿ ಹೋಗ್ಲಿ ಬಿಡಿ, ಇಂಥ ಉದಾತ್ತ ಉದ್ದೇಶಕ್ಕೆ ನಾನ್ಯಾಕೆ ಅಡ್ಡಿ ಬರ್ಲಿ. ಈಗ ನಾನು ನಿಮ್ಗೆ ಒಂದು ವಿಷ್ಯ ಕೊಡ್ಲಾ?'

'ಆಂ, ಏನಂದೀ? ನೀನು ನಂಗೆ ವಿಷ್ಯ ಕೊಡ್ತೀಯಾ? ಇದಪ್ಪ ವರಸೆ. ಸರಿ ಹೇಳು. ವಿಷ್ಯ ಏನು?'

‘ನೋಡಿ, ಹಾಸ್ಯ ಬರೆಹಗಳಲ್ಲಿ ಒಂದು ಪೆದ್ದ ಪಾತ್ರ ಇದ್ರೆ ಹಾಸ್ಯ ತುಂಬೋದು ಸುಲಭ. ಇಬ್ರು ಸ್ನೇಹಿತ್ರಲ್ಲಿ ಒಬ್ಬನ್ನ ಪೆದ್ದು ಮಾಡಿ, ಇಲ್ಲ ಗಂಡ–ಹೆಂಡತಿ ಪೈಕಿ ಒಬ್ಬರನ್ನ ಪೆದ್ದು ಮಾಡಿ, ಆಗ ಸಲೀಸಾಗಿ ಹಾಸ್ಯ ಬರೀಬಹ್ದು.’

‘ಅರೆ, ನಿಂಗೆ ಹೇಗೆ ಗೊತ್ತು? ನೀನೂ ನನ್ನ ಹಾಗೆ ಒಂದು ಲೀವ್ ಲೆಟರ್ ಕೂಡ ಬರ್ದಿರಲ್ವಲ್ಲಾ?’

‘ಹೆಂಗಸ್ರು ಬುದ್ಧಿವಂತ್ರೂ ಕಣ್ರೀ. ಅವರಿಗೆ ಇಮಾಜಿನೇಷನ್ ಜಾಸ್ತಿ. ಕನಸು ಕಾಣ್ತಾರೆ. ಮಾತಾಡ್ತಾರೆ. ಟಿವಿ ಸೀರಿಯಲ್ ಗಮನವಿಟ್ಟು ನೋಡ್ತಾರೆ. ಗಂಗಾವತಿ ಪ್ರಾಣೇಶ್ ತಮ್ಮ ನಗೆ ಭಾಷಣದಲ್ಲಿ ಹೇಳಿದ್ದು ಕೇಳಿಲ್ವಾ? ಹೆಂಗಸ್ರು ಮಾತಾಡಿ, ಮಾತಾಡಿ ಎಲ್ಲಾ ವಿಷ್ಯ ತಿಳ್ಕೋಳ್ತಾರೆ. ಜೋಕ್‌ಗಳನ್ನ ಬೇಗ ಅರ್ಥ ಮಾಡ್ಕೋತಾರೆ. ಅವರನ್ನ ನಗಿಸೋದೂ ಸುಲಭ. ಗಂಡಸ್ರು ಯಾವ್ದೋ ವಿಷ್ಯ ತಲೇಲಿಟ್ಕೊಂಡು ನಗಕ್ಕೂ ವದ್ಯಾಡ್ತಾರೆ ಅಂತ’

‘ಒಳ್ಳೇ ಕತೆಯಾಯ್ತು ನಿಂದು. ನಂಗೆ ವಿಷ್ಯ ಹೇಳೋದು ಬಿಟ್ಟು ನಗೆ ಭಾಷಣಕ್ಕೆ ಹೊರಟ್ಹೋದ್ಯಲ್ಲಾ?’

‘ಅಯ್ಯೋ, ಅಷ್ಟೂ ಗೊತಾಗ್ಲಿಲ್ವಾ? ಗಂಡ–ಹೆಂಡತಿ ಪಾತ್ರಗಳಿರುವ ಬರೆಹ ಬರೆದ್ರೆ ಹೆಂಡತಿ ಜಾಣೆ, ಗಂಡ ಪೆದ್ದ ಅಂತ ಮಾಡಿ. ಒಂದ್‌ವೇಳೆ, ನಮ್ಮನೆ ವಿಷ್ಯಾನೇ ಬರೆದ್ರೂ ಪುಟ್ಟ ಬರಹ ಯಾಕೆ, ದೊಡ್ಡ ಪ್ರಬಂಧ ಬರೀಬಹ್ದು’

‘ಅಬ್ಬಾ, ಹೆಣ್ಣೇ! ನಂಗೇ ಚಳ್ಳೇಹಣ್ಣು ತಿನ್ನಿಸ್ತೀಯಲ್ಲಾ? ಎಷ್ಟು ಅನಾಯಾಸವಾಗಿ ನನ್ನನ್ನ ಪೆದ್ದನನ್ನಾಗಿ ಮಾಡ್ಬಿಟ್ಟೆ’

‘ಅಲ್ಲಾ ರೀ. ಈ ಎಳೆ ಹಿಡ್ಕೊಂಡು ಬರೀತಾ ಹೋಗಿ, ನಿಮ್ಮ ಬುದ್ಧಿವಂತಿಕೆ ತೋರ್ಸಿ. ನಾನೇನು ಬೇಡಾ ಅಂದ್ನಾ? ಇಲ್ಲಾಂದ್ರೆ ಪೆದ್ದ ಅಂತ ಒಪ್ಕೊಳ್ಳಿ.’

‘ಅಂತೂ ಜಟ್ಟಿ ಬಿದ್ರೂ ಪಟ್ಟು ಅಂತ, ನಿನ್ನ ಪಟ್ಟು ಬಲು ಗಟ್ಟಿ. ನಾನು ನಿನ್ನ ನಯಗಾರಿಕೆಗೆ ಇವತ್ತು ಬಿದ್ನಾ? ನಲವತ್ತು ವರ್ಷಗಳ ಹಿಂದೆಯೇ ಬಿದ್ಬಿಟ್ನಲ್ಲಾ?’

‘ನೋಡಿ ಏನೋ ಸಹಾಯ ಕೇಳಿದ್ರಲ್ಲಾ ಅಂತ ಒಂದು ‘ಕ್ಲೂ’ ಕೊಟ್ಟೆ. ಅಷ್ಟಕ್ಕೆ ನಾನೇನೂ ನಿಮ್ಮನ್ನ ಫೂಲ್ ಅಂದ್ನಾ?’

‘ನೋಡು ನೋಡು. ನೀನು ನನ್ನನ್ನು ಶುರುನಲ್ಲೇ ಪೆದ್ದಪಾತ್ರಕ್ಕೆ ಒಪ್ಸಿ ನನ್ನ ತಲೇಲಿ ಅಷ್ಟಿಷ್ಟು ವಿಷ್ಯ ಇದ್ದಿದ್ದೂ ಮರ್ತೇಹೋಯ್ತು.’

‘ಒಳ್ಳೇ ತಮಾಷೆ ಆಯ್ತಲ್ಲಾ? ನೀವು ಪೆದ್ದನ ಪಾತ್ರ ಮಾಡಿ ಅಂತ ಖಂಡಿತ ಹೇಳಿಲ್ಲ ನಾನು. ನೀವು ನನ್ನ ಗಂಡ ಅಲ್ವಾ? ಹಾಗೆ ಹೇಳೋಕ್ಕಾಗತ್ತಾ? ಗಂಡ–ಹೆಂಡತಿ ಪೈಕಿ ಒಬ್ರು ಪೆದ್ದರಾದ್ರೆ, ಅಲ್ಲ, ಅಲ್ಲ ಒಬ್ರನ್ನ.. ಪೆದ್ದು ಅಂತ ಮಾಡಿದ್ರೆ, ಕತೆ ಬೆಳ್ಸಕ್ಕೆ ಸುಲಭ ಅಂದೆ ಅಷ್ಟೆ. ಅದಕ್ಕುಂದೆ ನೀವುಂಟು, ನಿಮ್ಮ ಇಮಾಜಿನೇಷನ್ ಉಂಟು.’

‘ಅಬ್ಬಾ, ಹೇಗಾದ್ರೂ ನನ್ನನ್ನ ಗಂಡ ಅಂತ ಈಗಲಾದ್ರೂ ಒಪ್ಕೊಂಡ್ಯಲ್ಲಾ ಮಾರಾಯ್ತಿ. ಹಾಗೆ ನೀನು ಒಪ್ಕೋತಿದ್ದಾಗೆ ನಂಗೊಂದು ‘ಬ್ರೇನ್‌ವೇವ್’ ದಢಾರ್ ಅಂತ ಅಪ್ಪಳಿಸ್ತು. ನಮ್ಮನ್ನ ಮರೆತು ಬೇರೆ ಯಾವ್ದೋ ದಂಪತಿಗಳು ಅಂತ ಯೋಚಿಸ್ತೀನಿ. ಆಗ ನಂಗೂ ಖುಷಿ ಆಗತ್ತೆ.’

‘ಅಬ್ಬಾ, ಬದುಕಿದೆ. ಹಾಗೆ ಬನ್ನಿ ದಾರಿಗೆ. ಪ್ರೈಜ್ ಬಂದ್ರೆ ಮಾತ್ರ ನನ್ನ ಮರೀಬೇಡಿ. ಆಯ್ತಾ?’

‘ಹಾಗಾದ್ರೆ ಈಗ ನೀನೇನು ಮಾಡ್ತಿ?’

‘ಅಯ್ಯೋ, ನಂಗೆ ಬೇಕಾದಷ್ಟು ಕೆಲ್ಸ ಇದೆ. ಈ ಕೋವಿಡ್ ಗಲಾಟೆ ಶುರುವಾದ್ಮೇಲೆ ತರಕಾರಿ ತೊಳೆದೂ, ತೊಳೆದೂ ಕೈ ಬಿದ್ಹೋಗಿದೆ. ಪಾತ್ರೆಗಳಂತೂ ಸಿಂಕ್‌ನಲ್ಲೇ ಅಕ್ಷಯ ಆಗತ್ತೆ. ಕೆಲಸದವ್ಳು ಎಂದಿಗೆ ಪ್ರತ್ಯಕ್ಷ್ಯ ಆಗ್ತಾಳೋ? ಅಡುಗೆ ಮಾಡೋದಿದ್ದೇ ಇದೆ.’

‘ಹಾಗಾದ್ರೆ, ಎಲ್ಲದಕ್ಕಿಂತ ಮುಂಚೆ ಒನ್ ಬೈ ಟೂ ಕಾಫಿ ಮಾಡ್ಕೊಂಡ್ ಬಾ. ಇಬ್ರೂ ಒಟ್ಟಿಗೆ ಕಾಫಿ ಕುಡ್ಯೋಣ. ಕುಡಿದ್ಮೇಲೆ ಸ್ಫೂರ್ತಿ ಬಂದು ನಾನು ಚೆನ್ನಾಗಿ ಬರೀತೀನಿ. ನೀನು ನಿಧಾನವಾಗಿ ಅಡುಗೆ ಮಾಡು.’

‘ಆಂ...., ಒಳ್ಳೆ ಜಾಣತನ ಕಣ್ರೀ ಇದು. ಗುರೂಗೆ ತಿರುಮಂತ್ರ ಅನ್ನೋ ಹಾಗೆ. ಅರ್ಧ ಲೋಟ ಕಾಫಿಗೆ ಇಷ್ಟೆಲ್ಲಾ ನಾಟಕಾನಾ? ಈಗ ನಾನೇ ದೊಡ್ಡ ಫ಼ೂಲ್ ಆದ್ನಲ್ಲಾ!!!’

***

ಜೋಡಿಸುವ ಕಲೆ

–ಶೀಲಾ ಭಂಡಾರ್ಕರ್

ಇವತ್ತು ಬೆಳಗ್ಗೆ ಜಯಶ್ರೀ ದೇಶಪಾಂಡೆ ಅಕ್ಕನವರ ಅಚ್ಚು ಮೆಚ್ಚಿನ ಒಂದು ಕಪ್ ಒಡೆದುಹೋಯಿತು. ಅವರು ಅದರ ಒಡೆದ ಚೂರುಗಳನ್ನು ಅಲ್ಲಲ್ಲೇ ಇರಿಸಿ ಅದಕ್ಕೊಂದು ದಾರ ಕಟ್ಟಿ. ತನ್ನ ಪ್ರೀತಿಯ, ಹಲವು ವರ್ಷಗಳ ಒಡನಾಡಿಯಾಗಿದ್ದ ಆ ಕಪ್‌ನ ಜತೆಗಿನ ಭಾವನಾತ್ಮಕ ಸಂಬಂಧಗಳನ್ನು ಹೆಣೆದು ಒಂದು ಕವಿತೆಯನ್ನೇ ಬರೆದಿದ್ದರು.

ಜಯಶ್ರೀ ಅಕ್ಕನ ಕವಿತೆಗೆ ಪ್ರತಿಕ್ರಿಯಿಸಿದ ಅವರಂತವರೇ ಸಹೃದಯಿ ಹೆಣ್ಣೊಬ್ಬರ ಪ್ರತಿಕ್ರಿಯೆಯಿಂದ ಮೊದಲ ಬಾರಿ ಒಂದು ವಿಷಯ ತಿಳಿಯಿತು. ಅದರ ಮೂಲವನ್ನು ಹುಡುಕಲು ಹೊರಟಾಗ ಕೆಲವೊಂದು ಸುಂದರ ಅಂಶಗಳು ತಿಳಿದುಬಂದವು. ಹಾಗೆಯೇ ನನ್ನ ಮನಸ್ಸಿನಲ್ಲೂ ಕೆಲವೊಂದು ಭಾವನೆಗಳು ಆ ಕ್ಷಣಕ್ಕೆ ನನ್ನನ್ನು ಮತ್ತಷ್ಟು ಯೋಚಿಸುವಂತೆ ಮಾಡಿದವು.

ಹದಿನೈದನೇ ಶತಮಾನದಲ್ಲಿ ಜಪಾನ್ ದೇಶದಲ್ಲಿ ಅಧಿಕಾರದಲ್ಲಿದ್ದಂತಹ ಆಶಿಕಾಗಾ ರಾಜವಂಶದ ಎಂಟನೆಯ ದೊರೆ ಆಶಿಕಾಗಾ ಯೊಶಿಮಾಸಾ ಒಂದು ದಿನ ಟೀ ಕುಡಿಯುವಾಗ ಕೈ ತಪ್ಪಿ ಬಿದ್ದು ಅವನ ಮೆಚ್ಚಿನ ಕಪ್ ಒಡೆದು ಹೋದಾಗ ಅವನಿಗೂ ಜಯಶ್ರೀ ಅಕ್ಕನ ಹಾಗೆ ಅತೀವ ದುಃಖವಾಗುತ್ತದೆ. ಒಡೆದ ಚೂರುಗಳನ್ನು ಒಟ್ಟುಗೂಡಿಸಿ ಕಪ್‌ನ್ನು ಮೊದಲಿನಂತೆ ಮಾಡಿ ತಂದುಕೊಡಲು ಆಳುಗಳಿಗೆ ಹೇಳಿ ಚೀನಾ ದೇಶಕ್ಕೆ ಕಳುಹಿಸಿಕೊಡುತ್ತಾನೆ. ಅಲ್ಲಿ ಅವರು ಯಾವುದೋ ಅಂಟನ್ನು ಉಪಯೋಗಿಸಿ ಕಪ್‌ಗೆ ಮತ್ತೆ ಮೊದಲಿನ ಆಕಾರ ಕೊಟ್ಟು ಕಳುಹಿಸುತ್ತಾರೆ. ಆದರೆ ರಾಜನಿಗೆ ಆ ಕೆಲಸದಲ್ಲಿ ಸ್ವಲ್ಪವೂ ಸಮಾಧಾನವಾಗುವುದಿಲ್ಲ. ಆದರೆ ಹೀಗೆ ಮಾಡಬಹುದು ಎಂಬ ಯೋಚನೆ ಬಂದು ಜಪಾನ್ ದೇಶದ ಕಪ್ ತಯಾರಿಸುವ ನುರಿತ ಕೆಲಸಗಾರರನ್ನು ಕರೆಯಿಸಿ ಜೋಡಿಸಿದ ಗುರುತುಗಳನ್ನು ನಾಜೂಕಾಗಿ, ಕಲಾತ್ಮಕವಾಗಿ ಕಾಣಿಸುವ ಹಾಗೆ ಏನಾದರೂ ಕುಸುರಿ ಕೆಲಸವನ್ನು ಮಾಡಲು ಸಾಧ್ಯವೇ ಎಂದು ಪ್ರಯತ್ನಿಸಿ ಎಂದು ಆಜ್ಞೆ ಹೊರಡಿಸುತ್ತಾನೆ.

ಬಹಳ ಪ್ರಯತ್ನಪಟ್ಟ ನಂತರ ಒಂದು ಮರದ ಅಂಟನ್ನು ತೆಗೆದು ಅದಕ್ಕೆ ಚಿನ್ನದ ಪುಡಿಯನ್ನು ಬೆರೆಸಿ ಅದರಿಂದ ಮತ್ತೆ ಆ ಚೂರುಗಳನ್ನು ನಾಜೂಕಾಗಿ ಜೋಡಿಸಿ ಅದಕ್ಕೊಂದು ಸುಂದರ ರೂಪವನ್ನು ಕೊಡುತ್ತಾರೆ. ಅವರ ಕಲಾತ್ಮಕತೆ ಆ ರಾಜನಿಗೆ ಬಹಳ ಮೆಚ್ಚುಗೆಯಾಗುತ್ತದೆ.

ಇದರ ನಂತರ ಜಪಾನಿಯರು ಇದೇ ರೀತಿ ಚಿನ್ನ, ಬೆಳ್ಳಿ, ಹಾಗೂ ಪ್ಲಾಟಿನಂ ಪುಡಿಗಳನ್ನು ಉಪಯೋಗಿಸಿ ಒಡೆದ ವಸ್ತುಗಳನ್ನು ಕಲಾತ್ಮಕವಾಗಿ ಜೋಡಿಸಿ ಅದರ ಜತೆಗಿನ ಭಾವನೆಗಳನ್ನು ಹಾಗೆಯೇ ಕಾಪಾಡುವ ಕಲೆಯನ್ನು ಪ್ರಸಿದ್ಧಿಗೊಳಿಸಿದರು.

ಆ ಕಲೆಗೆ ಕಿಂತ್ಸುಗಿ (Kintsugi) ಎಂದು ಹೆಸರು. ಕಿನ್ (kin) ಎಂದರೆ ಚಿನ್ನ. ತ್ಸುಗಿ (tsugi) ಎಂದರೆ ರಿಪೇರಿ. ಚಿನ್ನವನ್ನು ಉಪಯೋಗಿಸಿ ಮಣ್ಣಿನ, ಪಿಂಗಾಣಿಯ ವಸ್ತುಗಳನ್ನು ಜೋಡಿಸುವ ಕಲೆಗೆ ಕಿಂತ್ಸುಗಿ ಎನ್ನುತ್ತಾರೆ.

ಹದಿನೇಳನೇ ಶತಮಾನದಿಂದೀಚೆಗೆ ಹೆಚ್ಚಾಗಿ ಪ್ರಚಲಿತವಾದ ಕಿಂತ್ಸುಗಿ ಕಲೆ, ಜಪಾನಿಯರ ತಾತ್ವಿಕ ಸಿದ್ಧಾಂತ ಗಳನ್ನು ಅಳವಡಿಸಿಕೊಂಡು ಚಾಲ್ತಿಗೆ ಬಂದಿದೆ ಎಂಬುದು ಅವರ ನಂಬಿಕೆ.

ಅವರ ವಾಬಿ–ಸಾಬಿ (Wabi-Sabi) ತತ್ವದ ಸಿದ್ಧಾಂತ ಅಪರಿಪೂರ್ಣ, ಅಪೂರ್ಣ, ಅಶಾಶ್ವತವಾದಂತಹ ವಸ್ತುಗಳಲ್ಲೂ ಸೌಂದರ್ಯವನ್ನು ಹುಡುಕುವ ಗುಣದಿಂದಾಗಿಯೇ ಕಿಂತ್ಸುಗಿ ಕಲೆಯ ಉದ್ಭವವಾಯಿತು. ಈ ರೀತಿಯ ರಿಪೇರಿಯನ್ನು ಮಾಡುವುದರೊಳಗೆ mottanai ಎಂಬ ಭಾವನೆ ಅಡಗಿದೆ. ಹಾಗೆಂದರೆ ಯಾವುದಾದರೂ ಸಜೀವ, ನಿರ್ಜೀವ ವಸ್ತುಗಳನ್ನು ಕಳೆದುಕೊಳ್ಳುವ ಸಂದರ್ಭದ ನೋವು ಅಥವಾ ವಿಷಾದದ ಭಾವ. ಆ ಭಾವವೇ ಒಡೆದ ವಸ್ತುಗಳನ್ನು ಜೋಡಿಸಿ ಅದನ್ನು ತ್ಯಜಿಸದೆ ಮತ್ತೆ ತಮ್ಮೊಂದಿಗೆ ಇರಿಸಿಕೊಳ್ಳುವಂತಹದ್ದು.

ಇನ್ನೊಂದು ಮುಷಿನ್ ಎಂಬ ತತ್ವ. ಅದೇ ಬದಲಾವಣೆಯನ್ನು ಸ್ವೀಕರಿಸುವ ಗುಣ. ಒಂದು ಸಾಂಪ್ರದಾಯಿಕ ಕಲೆಯ ಹಿಂದೆ ಈ ಎಲ್ಲಾ ತಾತ್ವಿಕ ಸಿದ್ಧಾಂತಗಳು ಅಡಗಿವೆ ಮತ್ತು ಇಂದಿಗೂ ಆ ಕಲೆ ಜೀವಂತವಾಗಿದೆ.

ಈ ಕಿಂತ್ಸುಗಿ ಕಲೆಯ ಬಗ್ಗೆ ಜಯಶ್ರೀ ಅಕ್ಕನ ಒಡೆದ ಕಪ್‌ನ ವಿಷಾದದ ಕವಿತೆಗೆ ಅವರ ಗೆಳತಿ ತಮ್ಮ ಪ್ರತಿಕ್ರಿಯೆಯಲ್ಲಿ ತಿಳಿಸಿದಾಗ, ಅಕ್ಕ ಹೇಳಿದ ಒಂದು ಮಾತು ಹೃದಯಕ್ಕೆ ತಟ್ಟಿತು.

"ಕಿಂತ್ಸುಗಿ ಬಗ್ಗೆ ಮೊದಲ ಬಾರಿ ಕೇಳಿದೆ. ಬದುಕಿನಲ್ಲಿ ಇನ್ನೂ ಏನೇನೋ ಸೂಕ್ಷ್ಮಗಳು ಒಡೆದು ಬರಿದಾಗಿ ಬಿಡುತ್ತವೆ. ಅವನ್ನೆಲ್ಲ ಹೀಗೆ ಜೋಡಿಸಿದರೆ ಅನಿಸಿತು."

ಅವರ ಈ ಮಾತು ನನ್ನನ್ನು ಇವತ್ತಿಡೀ ಅದರ ಬಗ್ಗೆಯೇ ಯೋಚಿಸುವಂತೆ ಮಾಡಿತು. ಕಿಂತ್ಸುಗಿ ಕಲೆಯ ಹಿಂದೆ ಬಿದ್ದು ಅದನ್ನು ತಿಳಿದುಕೊಂಡಾಗ ಆ ಕಲೆಯು ಅನೇಕ ಸಂದೇಶಗಳನ್ನು ನೀಡಿದಂತೆ ಭಾಸವಾಯಿತು.

ಯಾವುದನ್ನೂ ಒಡೆಯಲು ಬಿಡಬಾರದು, ಒಡೆದರೆ ಒಡೆಯಿತೆಂದು ಭಾವನೆಗಳೇ ಇಲ್ಲದೆ ಗುಡಿಸಿ ಬಿಸಾಕಬಾರದು. ಏನಾದರೂ ಒಡೆದರೆ ಅದಿನ್ನು ಉಪಯೋಗವೇ ಇಲ್ಲ ಎಂದುಕೊಳ್ಳಬಾರದು. ಹಾಗೆ ಒಡೆದವು ಮತ್ತೆ ಅತ್ಯಮೂಲ್ಯವಾಗಲೂಬಹುದು. ಒಡೆದವುಗಳನ್ನು ಮತ್ತೆ ಜೋಡಿಸುವ ಪ್ರಯತ್ನ ಮಾಡಬೇಕು. ಹಾಗೆ ಜೋಡಿಸಿದಾಗ ಇನ್ನೂ ಸುಂದರವಾದವು ನಮಗೆ ದಕ್ಕಬಹುದು.

ಕೆಲವೊಮ್ಮೆ ಪರಿಸ್ಥಿತಿಯು ನಾವಂದುಕೊಂಡಂತೆ ಇರದಿದ್ದರೆ, ಬಂದ ಹಾಗೆ ಸ್ವೀಕರಿಸಿ ಅದರೊಳಗಿನ ಸಂಗತಿಗಳನ್ನು ಗುಣಾತ್ಮಕವಾಗಿ ಪರಿವರ್ತಿಸಿಕೊಂಡು ಜೀವನವನ್ನು ಸುಂದರವಾಗಿಸುವ ಕಲೆಯನ್ನು ನಾವು ಕಲಿಯಬೇಕಾಗಿದೆ.

ನಾವು–ನೀವು ಒಂದಷ್ಟು ಮಂದಿ ಸಜೀವ–ನಿರ್ಜೀವ ವಸ್ತುಗಳ ಜತೆಗೂ ಎಂತಹ ಸಾಂಗತ್ಯವನ್ನು ಇರಿಸಿ ಕೊಂಡಿದ್ದೇವೆ. ಪ್ರತಿಯೊಂದು ವಸ್ತು, ಪ್ರತಿಯೊಬ್ಬ ವ್ಯಕ್ತಿಯೂ ಅಮೂಲ್ಯ, ವಿಶಿಷ್ಟ, ವಿಶೇಷ.

***

ಮಧುರ

– ರಾಧಿಕಾ ವಿ ಗುಜ್ಜರ್

ಒಂದು ನಿವಾಂತ ಸಂಜೆಯ ಸಮಯ ಅತ್ಯಂತ ಭಾವುಕನಾಗಿ, ಅಷ್ಟೇ ದೃಢವಾಗಿ ಆತ ಆಕೆಗೆ ಕೇಳಿದ, "ನಿನಗೆ ಏನಾದರೂ ಬೇಕಿತ್ತಾ ಮಧುರ?"

ಇಂತಹ ಒಂದು ಅನಿರೀಕ್ಷಿತ ಪ್ರಶ್ನೆಯಿಂದ ಮಧುರಾಳ ಎದೆಯ ಮುಳ್ಳು ಕೊಂಚ ಅಳುಕಿತು. 51 ವರ್ಷಗಳ ದಾಂಪತ್ಯದಲ್ಲಿ ಎಂದೂ ಒಂದು ಲೋಟ ನೀರು ಸಹ ತಂದುಕೊಡದ ಇವರು ಇವತ್ತು ಹೀಗೊಂದು ಪ್ರಶ್ನೆ ಕೇಳಿದ್ದು ನಿಜವಾ !! ಎನಿಸಿತು ಆಕೆಗೆ.

ಕಾರಣ ಇಷ್ಟೇ, ಆತನಿಗೆ ದೀರ್ಘಕಾಲದ ಭ್ರಮೆಯೊಂದು ಇಂದು ಕಳೆದಿದೆ. ನನ್ನ ಜೀವನದ ನೌಕೆ ಅತ್ಯಂತ ಸಹಜವಾಗಿ ಎಲ್ಲ ಏಳು-ಬೀಳುಗಳನ್ನು ಮೀರಿ ಮುಂದುವರೆದಿದೆ ಎಂದರೆ ಅದಕ್ಕೆ ನಾನೊಬ್ಬನೇ ಅಲ್ಲ, ಈಕೆಯೂ ಸಹನಾವಿಕಳಾಗಿರುವುದು ಕಾರಣವೆಂದು. ಏಕೋ.., ಏನೂ ಹೇಳದೆ ಮಧುರ ಮೌನವಾಗಿ ಅಡಿಗೆ ಮನೆಯ ಕಡೆಗೆ ಹೊರಟುಹೋದಳು.

ಇತ್ತ, ಮೂರು ಪದಗಳ ಪ್ರಶ್ನೆಯಿಂದಾಗಿ ಮಧುರಳ ಮನಸ್ಸಿನ ಕಡತದ ಹಿಮ್ಮುಖ ದಾಖಲೆಗಳು ತೆರೆದು ಕೊಂಡಿದ್ದವು. ನಿಜ, ಬಹಳಷ್ಟು ಸಣ್ಣ ಪುಟ್ಟ ಬೇಕುಗಳಿದ್ದವು. ಆದರೆ ಅವು ಅಂದಂದಿಗೆ, ಆಯಾ ಕಾಲಕ್ಕೆ ಬೇಕಿದ್ದವುಗಳು. ಈಗ ಈ ವಯಸ್ಸಿನಲ್ಲಿ ಏನು ಬೇಕಿದೆ?!! ಕನ್ನಡಕವನ್ನು ಸುಕ್ಕುಗಟ್ಟಿದ ಕಿವಿಯ ಮೇಲೆ ಸಿಕ್ಕಿಸುತ್ತಾ ಅಡುಗೆಗೆ ತೊಡಗಿದಳು. ಮೌನವಾಗಿ ತನ್ನ ದಾಂಪತ್ಯದ ವರ್ಷಗಳ ಪಾಕವಿಧಾನ ಮೆಲುಕು ಹಾಕತೊಡಗಿದಳು.

ಕೇವಲ ತಿಂಗಳಲ್ಲಿ ಮಾತುಕತೆಗಳು ಮುಗಿದು ಮದುವೆಯಾಗಿತ್ತು. ನಾನು ಇನ್ನೂ 18 ವರ್ಷದವಳು ಆಗ. ಬಂದಾಗ ಈ ಮನೆಯಲ್ಲಿ ಹಕ್ಕಿನಿಂದ ನನ್ನವರು ಎಂದು ಆಸರೆಗಿದ್ದವರು ಕೇವಲ ನೀವು ಮಾತ್ರ. ಆದರೆ ನಿಮಗೋ, ನನ್ನೊಡನೆ ಮಾತನಾಡಲು ಬಿಡುವೇ ಇರಲಿಲ್ಲ ಅಥವಾ ನನ್ನೊಂದಿಗೆ ಕೊಂಚ ಸಮಯ ಕಳೆಯಬೇಕೆಂಬುವಷ್ಟು ಸವಡು ಸಹ ಇರಲಿಲ್ಲ. ಸದಾ ನಿಮ್ಮ ಮಿತ್ರರು, ಬಳಗದವರು, ಅಣ್ಣ, ತಮ್ಮ, ತಂಗಿ, ಮತ್ತಾರೋ ನೆರೆ-ಹೊರೆ ಇರುತ್ತಿದ್ದರು. ಇವರೆಲ್ಲರ ನಂತರ ನಿಮಗೊಬ್ಬ ಪತ್ನಿ ಇದ್ದಾಳೆ, ಆಕೆಗೆ ನಿಮ್ಮ ಭಾವಸ್ಪಂದನೆಗಳು ಬೇಕು, ಆಕೆಗೆ ನಿಮ್ಮ ಕಡೆಯಿಂದ ಮಾನಸಿಕ ಭದ್ರತೆಯ ಬೆಚ್ಚನೆಯ ಹೊದಿಕೆ ಬೇಕು ಎಂದು ಯೋಚಿಸಲಿಲ್ಲ. ಸದಾ ತುಂಬಿದ ಮನೆಯ ಕೆಲಸ. ಬರುವವರ, ಹೋಗುವವರ ಊಟ-ಉಪಚಾರ. ಅದರಲ್ಲೂ ಉಳಿದುಕೊಳ್ಳುವರದ್ದು ಮತ್ತೂ ಕೆಲವು ಅನುಕೂಲಗಳ ಗಮನಿಸುವಿಕೆ. ಎಲ್ಲವನ್ನು ನಿಭಾಯಿಸುವ ಅನಿವಾರ್ಯತೆ. ಸಣ್ಣ ಸಣ್ಣ ಆಸೆಗಳನ್ನು ಮುಂದೂಡುತ್ತಿದ್ದೆ. ಆರೋಗ್ಯದ ತೊಂದರೆ ಇದ್ದರೂ, ಬೇಸರ ಎನಿಸಿದರೂ ತ್ರಾಣ-ಸ್ಥೈರಣೆ ಒಂದುಗೂಡಿಸುತ್ತಿದ್ದೆ. ಅಂತಹ ಮನಸ್ಥಿತಿಯಲ್ಲಿ ನನಗೆ ನಿಮ್ಮ ಉಪಚರಿಸುವ ನೇವರಿಗೆ ಬೇಕಿದ್ದವು. ಚೇತರಿಕೆಗೆ ಎರಡು ಸಾಂತ್ವನದ ನುಡಿಗಳು ಬೇಕಿದ್ದವು. ಎಳೆಯ ಕೈಗಳಿಂದ ಆದ ತಪ್ಪುಗಳಿಗೆ ಹಿರಿಯರು ದೂಷಿಸಿದಾಗ, ಕಲಿಯುತ್ತಾಳೆ, ಕಲಿಸಿ ಎಂದು ತಾವು ವಹಿಸಿಕೊಳ್ಳುವ ಪಕ್ಷ ಬೇಕಿತ್ತು.

ನಮಗೆ ಹುಟ್ಟಿದ್ದು ಇಬ್ಬರು ಮಕ್ಕಳು. ಎಲ್ಲರಂತೆ ನಾನೇನು 4, 5, 6 ಎಂದು ಸಾಲಾಗಿ ಹಡೆಯಲಿಲ್ಲ. ಆಗಲಾದರೂ ಹತ್ತಿರ ಇದ್ದು ಆ ಒಂಬತ್ತು ತಿಂಗಳುಗಳಲ್ಲಿ ಒಮ್ಮೆಯಾದರೂ ಬಯಕೆ ಕೇಳಬಹುದಿತ್ತು.

ಈಗಂತೂ ಆ ಬಯಕೆಗಳಲ್ಲಿ ಒಂದಕ್ಕೆ 49 ವರ್ಷ, ಮತ್ತೊಂದಕ್ಕೆ 46 ವರ್ಷ. ಬಯಕೆಯೀಗ "ತೀರದ ಬಯಕೆ" ಎಂಬ ಭೂತಕಾಲದ ಸೀಮಂತದ ಹಸಿರು ಸೀರೆಯ ಮಡಿಕೆಯಲ್ಲಿ ಅವಿತು ಕಳೆದು ಹೋಗಿದೆ.

ಅಂದಿನ ದಿನಗಳಲ್ಲಿ ಮೆಟ್ರಿಕ್ ಕಲಿತಿದ್ದ ನನ್ನಲ್ಲಿ ನಮ್ಮ ಮಕ್ಕಳು, ಅಕ್ಕ-ಪಕ್ಕದ ಮನೆಯ ಮಕ್ಕಳು, ಹೆಂಗಸರು ಎಲ್ಲರೂ ಓದು ಕಲಿಯುತ್ತಿದ್ದರು. ಬಿಡುವಿನಲ್ಲಿ ಪಾಠ ಹೇಳಿಸಿಕೊಳ್ಳುತ್ತಿದ್ದರು. ಅದೊಂದು ನೆಚ್ಚಿನ ಕಾಯಕ ಈಗಲೂ ಮುಂದುವರೆದಿದೆ. ಅಷ್ಟೊಂದು ಪುಸ್ತಕಗಳನ್ನು ತಂದು ಓದುವ ನೀವು, ಒಂದು ದಿನವೂ ನಿನ್ನಿಷ್ಟದ ಪುಸ್ತಕ ಯಾವುದು ಎಂದು ಕೇಳಲಿಲ್ಲ. ವಿದ್ಯಾವಂತಳೆಂದು ಆದರಿಸುವುದೇ ಇಲ್ಲ.

ಮುಟ್ಟು ನಿಲ್ಲುವ ಕಾಲದಲ್ಲಿ ನಿಶ್ಶಕ್ತಿ ಹಾಗೂ ಖಿನ್ನತೆಯೊಂದಿಗೆ ಸುಮಾರು ಎರಡು, ಎರಡೂವರೆ ವರ್ಷ ಬಡಿದಾಡಿದೆ. ಮಕ್ಕಳಿಬ್ಬರೂ ತಮ್ಮ ತಮ್ಮ ಸಂಸಾರ, ಮಕ್ಕಳ ಜವಾಬ್ದಾರಿಗಳಿಂದಾಗಿ ಎಷ್ಟಾಗುತ್ತದೋ ಅಷ್ಟು ನನ್ನನ್ನು ಮಾತನಾಡಿಸಿ ವಿಶ್ರಾಂತಿ ತೆಗೆದುಕೊಳ್ಳಲು ಸಲಹೆ ನೀಡಿ ಉಪಚರಿಸುತ್ತಿದ್ದರು. ತಮಗೆ ಬಹುಶಃ ನನ್ನ ದೈಹಿಕ ಬದಲಾವಣೆಗಳ ಪರಿವೆಯೇ ಇಲ್ಲವೇನೋ.

ನಿಮಗೆ 60 ವರ್ಷ ತುಂಬಿದಾಗ ಷಷ್ಠಿಪೂರ್ತಿಗೆಂದು ನನ್ನ ಪಾಲಿಗೆ ಹಸಿರು ಸೀರೆ ಬಂದಿತ್ತು. ಅದು ನನ್ನ ಆರನೆಯ ರೇಷಿಮೆಯ ಹಸಿರು ಸೀರೆ!! ಅಂದು ನನಗೆ ನನ್ನಿಷ್ಟದ ಕೆನೆ ಬಣ್ಣದ ಕಂಚಿ ಸೀರೆ ತರಿಸಿ ಉಡುವ ಕನಸಿತ್ತು. ಹೋಗ್ಲಿ ಬಿಡಿ.

ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕ ಏರಿಳಿತಗಳ ದಾಟುವ ಸಶಕ್ತ ನಾವಿಕಳಾಗಿ ಸಂಸಾರನೌಕೆಯ ಹುಟ್ಟು ಹಾಕುವಿಕೆಯನ್ನು ಕರಗತ ಮಾಡಿಕೊಂಡಾಗಿದೆ. ಈಗ ಯಾವ ಆಧಾರದ ಅಪೇಕ್ಷೆಯೂ ಇಲ್ಲ.

"ಏನಾದರೂ ಬೇಕಿತ್ತಾ?" – ಈ ಪ್ರಶ್ನೆಯನ್ನು ಈಗ ಇವರಿಗೆ ನಾನು ಕೇಳಬೇಕು.

ಇವರದ್ದು 37 ವರ್ಷಗಳ ಸೇವಾವಧಿ. ನಂತರ ಸೇವಾನಿವೃತ್ತಿ ಎಂಬ ಬಿಡುವಿನ ಆಚರಣೆ. ಹವ್ಯಾಸಗಳ, ಪ್ರವಾಸಗಳ ಕೈಗೊಳ್ಳುವಿಕೆ ಮುಗಿಸಿ ಈಗ ವಿಶ್ರಾಂತಿಯಾಗಿದ್ದಾರೆ. ಇತ್ತೀಚೆಗೆ ಎರಡು ವರ್ಷಗಳಲ್ಲಿ ಇವರ ಓರಗೆಯವರಾದ ಒಬ್ಬ ಸ್ನೇಹಿತ, ದೊಡ್ಡಮ್ಮನ ಮಗಳು ಹಾಗೂ ಸಣ್ಣ ಮಾವ ತೀರಿಕೊಂಡಿದ್ದಾರೆ. ಬಹಳ ಒಂಟಿಯಾಗಿದ್ದಾರೆ. ಸಮಯ ಇನ್ನೂ 7.30. ಊಟ ಹೇಗೂ 8.00-8.15ಕ್ಕೆ ಅಲ್ಲವೇ ಎಂದು ಇವರನ್ನು ಮಾತನಾಡಿಸಲು ಹಜಾರಕ್ಕೆ ಬಂದೆ.

"ರೀ.,. ಮುಂಜಾವಿನ ನಡಿಗೆ, ಊಟ ಹಾಗೂ ಓದು, ಇವಿಷ್ಟು ನೀವು ನನ್ನ ಜೊತೆಯಲ್ಲೇ ಮಾಡಬೇಕು. ಆಗುತ್ತಾ ?" ಎಂದೆ.

ಕನ್ನಡಕದೊಳಗಿನ ಇವರ ಅತಿ ತೀಕ್ಷ್ಣಕಣ್ಣುಗಳು ಕಿರಿದಾದವು. ಕೊಂಚವೇ ನಗು ಅರಳಿತು. "ಹುಚ್ಚಿ... ಹುಚ್ಚಿ... ಅದರಲ್ಲೂ ನಿನ್ನತನ ಇಲ್ವಲ್ಲೇ. ಅದೆಲ್ಲ ನಿನ್ನಿಂದ ನನಗೆ ಬೇಕಿರುವುದು. ನನ್ನ ಬೇಕುಗಳನ್ನು ನಿನ್ನವೆಂದು ಹೇಳಿ ಈಗಲೂ ಹೆಂಡತಿಯಾಗಿಯೇ ಉಳಿದುಬಿಡಬೇಡ. ಮನಸ್ಸು ಬಿಚ್ಚಿ ನಿರಾಳವಾಗಿ ಕೇವಲ ನಿನ್ನ ಬಯಕೆ, ನಿನ್ನದೇ ಆದ ಬೇಕುಗಳನ್ನು ಕೇಳು. ಸ್ನೇಹಿತೆಯಾಗು" ಎಂದರು.

***

ಕಥಾ ಪ್ರಪಂಚ

ಕತೆ: ಜೂಹೂರ್ ಬಕ್ಷ

– ವಿಠ್ಠಲ್ ಇಜೇರಿ

ಕನ್ನಡ ಸಾಹಿತ್ಯ ಪರಿಷತ್ತು ಕುವೆಂಪು ಜನ್ಮ ಶತಮಾನೋತ್ಸವ ಮಾಲಿಕೆ ಅಡಿಂಯಲ್ಲಿ (2004) ಹಲವಾರು ಪುಸ್ತಕಗಳನ್ನು ಪ್ರಕಟಿಸಿತು. ಅದರಲ್ಲೊಂದು ಪ್ರಕಟಣೆ ಪ್ರೊ.ಎಸ್.ಬಿ.ರಂಗನಾಥ್ ಅವರ ಅನುವಾದಿತ ಕಥಾ ಸಂಕಲನ 'ಜುಹುರ್ ಬಕ್ಷ'. ಈ ಹೆಸರಿನ ಭೀಷ್ಮ ಸಹಾನಿಯವರ ಮತೀಯ ಸಂಘರ್ಷದ ಕತೆ ಈ ಸಂಕಲನದಲ್ಲಿದೆ. ಅವರಲ್ಲದೆ ಹರೀಂದ್ರ ಸಿಂಗ್, ನರ್ಗಿಸ್ ದಲಾಲ್, ಮೂಲ್ಕರಾಜ್ ಆನಂದ್, ಆರ್.ಕೆ.ಲಕ್ಷ್ಮಣ, ಎಮ್.ಟಿ. ವಾಸುದೇವನ್, ಎಂ.ಕರುಣಾನಿಧಿ, ಸಾಧತ್ ಹಸನ್ ಮೊದಲಾದವರ ಅನುವಾದಿತ ಕಥೆಗಳು ಈ ಸಂಗ್ರಹದಲ್ಲಿವೆ.

ಶ್ರೀ ರಂಗನಾಥ ಅವರು ಇತರ ಭಾಷೆಯ ಉತ್ತಮ ಕತೆಗಳನ್ನು ಅನುವಾದ ಮಾಡಿ ತಮ್ಮ ಇನ್ನೊಂದು ಸಂಕಲನ, 'ರಣ ಹದ್ದುಗಳ ಮಧ್ಯೆ' ಪ್ರಕಟಿಸಿದ್ದಾರೆ. ಅದರಲ್ಲಿ ಶಿವಶಂಕರ ಪಿಳ್ಳೆ, ರಸ್ಕಿನ್ ಬಾಂಡ್, ಖುಶ್ವವಂತ್ ಸಿಂಗ್, ಮುಂತಾದವರ ಕತೆಗಳಿವೆ. ಇದಲ್ಲದೆ ಅವರ ಇತರ ಅನುವಾದಿತ ಕೃತಿಗಳು ಭಗವಾನ್ ಎಸ್. ಗಿದ್ವಾನಿಯವರ ಟೀಪು ಸುಲ್ತಾನನ ಖಡ್ಗ, ಸುನೀಲ ಗಂಗೋಪಾಧ್ಯರ ಪ್ರತಿಧ್ವನಿ. ಸತ್ಯಜಿತ ರೇ ಅವರು ಇದನ್ನು ತೆರೆಗೆ ತಂದಿದ್ದರು. ಇವಲ್ಲದೆ ಮೃಣಾಲ ಸೇನ್ ಅವರಿಂದ ಸಿನಿಮಾ ಆದ ಬನಫೂಲ್ ಅವರ ಕೃತಿ ಭುವನ್ ಸೋಮ್ ಇತ್ಯಾದಿ.

ಈಗ ಈ ಸಂಕಲನದಲ್ಲಿಯ 'ಕಸದ ತೊಟ್ಟಿ ಮಾತಾಡಿತು' ಎಂಬ ಕತೆಯ ಸಂಕ್ಷಿಪ್ತ ರೂಪವನ್ನು ಇಲ್ಲಿ ನೋಡೋಣ. ಇದು ತಮಿಳುನಾಡಿನ ಮುಖ್ಯ ಮಂತ್ರಿಗಳಾಗಿದ್ದ, ಡಿಎಮ್ ಕೆ. ಪಕ್ಷದ ಹಿರಿಯ ನಾಯಕರಾಗಿದ್ದ ಎಂ.ಕರುಣಾನಿಧಿಯವರ ಕತೆ. ಕರುಣಾನಿಧಿ ತಮಿಳು ಚಿತ್ರಗಳಿಗೆ ಚಿತ್ರಕತೆ ರಚಿಸಿ ಹೆಸರು ಮಾಡಿದ್ದರು. ಅವರ ಪಕ್ಷ ನಿರೀಶ್ವರವಾದಿಗಳು. ಅವರ ನಿಲುವು ದೇವರನ್ನು ಅವಹೇಳನ ಮಾಡುವುದು., ಅದು ಬಹುಶಃ ಈ ಕತೆಯಲ್ಲಿ ಕಂಡು ಬರುತ್ತಿದೆ. ಕಸದ ತೊಟ್ಟಿಯು ತನ್ನ ಅನುಭವ ಹೇಳಿದಂತೆ ಕತೆ ಮುಂದುವರೆಯುವುದು.

ತೊಟ್ಟಿ ಹೇಳುತ್ತದೆ. ನಾನೊಂದು ಮೂಲೆಯಲ್ಲಿ ತಪಸ್ವಿಯಂತೆ ಕಾದಿರುವೆ. ನಿನ್ನೆ ಅದಾರೋ ಒಂದು ನುಸಿ ತಗುಲಿದ ಹಳೆಯ ಗ್ರಂಥವನ್ನು ನನ್ನೆಡೆಗೆ ಎಸೆದರು. ಅದರಲ್ಲಿ ವಿಶ್ವಾಮಿತ್ರನ ತಪಸ್ಸು ಭಂಗಗೊಳಿಸಲು ಮೇನಕೆ ಅಲಂಕಾರ ಸಹಿತ ಭೂಮಿಗೆ ಬಂದಿದ್ದ ಸಮಾಚಾರ ಇತ್ತು. ವಿಶ್ವಾಮಿತ್ರರು ಆಕೆಯ ಸೌಂದರ್ಯಕ್ಕೆ ಮಾರು ಹೋಗಿ ಆಕೆಯೊಡನೆ ಪ್ರೇಮ ಸಲ್ಲಾಪದಲ್ಲಿ ತೊಡಗಿದ ಬಗ್ಗೆ ಕುತೂಹಲದಿಂದ ಓದುತ್ತಿದ್ದೆ. ಆ ವೇಳೆಗೆ ನನ್ನ ಹೊಟ್ಟೆ ಬರಿದು ಮಾಡಲು ಬಂದ ಜಾಡಮಾಲಿ ಕಸದೊಂದಿಗೆ ಆ ಪುರಾಣವನ್ನೂ ಎತ್ತಿಕೊಂಡು ಹೋದ. ಒಳ್ಳೇ ರಸಸ್ವಾದ ಮಾಡುವಾಗ ರಸಾಭಾಸವಾಯಿತು. ಮತ್ತೊಮ್ಮೆ ಇನ್ನೊಂದು ಗ್ರಂಥ ನನ್ನ ಒಡಲು ಸೇರಿಕೊಂಡಿತ್ತು. ಅದರಲ್ಲಿ ಗೌತಮ ಮುನಿ ಆಶ್ರಮದಲ್ಲಿ ಇಲ್ಲದ ವೇಳೆ ಇಂದ್ರ ಅವರ ವೇಷದಲ್ಲಿ ಬಂದು ಅಹಲ್ಯೆಯೊಡನೆ ಅನುಚಿತವಾಗಿ ವರ್ತಿಸಿದ್ದು ದಾಖಲಾಗಿತ್ತು. ಒಮ್ಮೆ ಒಬ್ಬ ಭಕ್ತ ಹತ್ತಿರದ ದೇವಸ್ಥಾನದ ಪ್ರಸಾದವನ್ನು ಸೇವಿಸಿ ಕಾಗದವನ್ನು ನನ್ನಲ್ಲಿ ಎಸೆದು ಹೋದ. ಅದರಲ್ಲಿ ವೈಷ್ಣವ ಭಕ್ತೆ ಅಂಡಾಲಳ ಕತೆ ಇತ್ತು.

ಅಂಡಾಲಳ ಕತೆಯೂ ಅಂಥ ಪತಿವ್ರತೆಯ ಕತೆ ಅಲ್ಲ. ಅಲ್ಲಿಯೂ ದೇವರು ಸುಂದರ ಯುವಕನಾಗಿ ಅಂಡಾಲಳ ಬಳಿ ಬಂದ ವಿಷಯವಿತ್ತು. ಹತ್ತಿರದ ದೇವಸ್ಥಾನದ ಧ್ವನಿವರ್ಧಕದಲ್ಲಿ ದಿನಾಲೂ ಗುರುಗಳೊಬ್ಬರ ಪ್ರವಚನ ಕೇಳುತ್ತೇನೆ. ಅವರು ಸದಾ ದೇವರ ಗುಣಗಳ ವರ್ಣನೆ ಮಾಡುತ್ತಾರೆಯೇ ಹೊರತು ದೇವರ ಮೇಲಿನ ಕೃತ್ಯಗಳ ಬಗ್ಗೆ ಮಾತಾಡಿದ್ದೇ ಇಲ್ಲ. ನನಗೆ ಮೇಲಿನಂತಹ ವಿಷಯಗಳಿದ್ದ ಪುಸ್ತಕಗಳು, ಹಾಳೆಗಳು ಸಿಗುವುದು ಕಡಿಮೆ. ಹೆಚ್ಚಾಗಿ ಹಣ್ಣಿನ ಸಿಪ್ಪೆ, ಬೀಜ, ಎಂಜಲು ಆಹಾರ, ಕೆಲವು ಸಲವಂತೂ ಸತ್ತ ಇಲಿ, ಹೆಗ್ಗಣಗಳನ್ನೂ ಎಸೆದು ಹೋಗುತ್ತಾರೆ. ಆಗ ಉಸಿರು ಬಿಗಿಹಿಡಿದು ನಗರಸಭೆಯ ಕಸ ಎತ್ತುವ ವಾಹನ ಬಂದು ಆ ಕೊಳೆ ಎತ್ತುವುದಕ್ಕೆ ಕಾದಿರುತ್ತೇನೆ. ನನ್ನ ದುರಾಧೃಷ್ಠ ಅಂದೇ ಅದು ತಡವಾಗಿ ಬರುತ್ತದೆ.

ಇದೇ ಬೀದಿಯ ಮೂಲೆ ಮನೆಯವನು ತಡ ರಾತ್ರಿ ಬಂದು ಕುಡಿದು ಖಾಲಿ ಬಾಟಲು ಹಾಕಿ ಹೋಗುತ್ತಾನೆ. ಒಮ್ಮೆ ಒಬ್ಬ ಸಭ್ಯನಂಥವನು ಒಂದು ಕಾಗದ ಚೂರು ಚೂರು ಮಾಡಿ ನನ್ನಲ್ಲಿ ಎಸೆದು ಹೋದ. ಕಷ್ಟ ಪಟ್ಟು ಹೊಂದಿಸಿ ಓದಿದೆ. ಒಬ್ಬ ಹೆಂಗಸಿಗೆ ಕೆಲಸ ಕೊಡಿಸುವುದಾಗಿ ಆ ಆಸಾಮಿ ದುಡ್ಡು ಪಡೆದಿದ್ದ. ಅದರಲ್ಲಿ ಕೆಲಸ ಕೊಡಿಸದಿದ್ದರೆ ನನ್ನ ಹಣ ವಾಪಸು ಮಾಡಿ ಎಂದು ಆಕೆ ಬರೆದು ಕೊಟ್ಟಿದ್ದಳು. ಆ ಆಸಾಮಿ ಆ ಪತ್ರವನ್ನು ಹರಿದು ಕಸದ ಬುಟ್ಟಿಗೆ ಎಂದು ನನ್ನಲ್ಲಿ ಎಸೆದಿದ್ದ. ಆಗಾಗ ಭಿಕ್ಷುಕರು ಬಂದು ನನ್ನ ಹೊಟ್ಟೆಯಲ್ಲಿ ತಡಕಾಡಿ ಮುಜುಗರ ಉಂಟುಮಾಡುತ್ತಾರೆ. ಅದೇನು ಹುಡುಕುತ್ತಾರೋ ಅವರಿಗೇ ಗೊತ್ತು. ಹೀಗೆ ಕಸದ ತೊಟ್ಟಿ ಇನ್ನು ಹಲವು ಉದಾಹರಣೆಗಳೊಂದಿಗೆ ತನ್ನ ಕತೆ ಉಸಿರಿಸಿತು.

***

2022 ಕಳೆದದ್ದು ಕೂಡಿದ್ದು...

– ವೆಂಕಟ್ ಕಾಮತ್, ಉಡುಪಿ

ದಿನಗಳು ಉರುಳುತ್ತಿದ್ದವು, ಉರುಳುತ್ತಿವೆ, ಉರುಳುತ್ತಲೇ ಇರುತ್ತವೆ, ಹಾಗೆಯೇ ನೋಡುನೋಡುತ್ತಿದ್ದಂತೆಯೇ 2022 ಕಳೆದೇ ಹೋಯಿತು.

ಈ ವರುಷಗಳೊಡನೆ ನಾವೆಲ್ಲಾ ಹಲವೊಂದನ್ನು ಕಳೆದುಕೊಳ್ಳುತ್ತೇವೆ, ಇನ್ನು ಕೆಲವನ್ನು ಕೂಡಿಕೊಳ್ಳುತ್ತೇವೆ. ನನ್ನ ಮಟ್ಟಿಗೆ ಹೇಳುವುದಾದರೆ ಹೆಚ್ಚಿನವರಲ್ಲಿ ಆರೋಗ್ಯ, ಶಾಂತಿ ಕಡಿಮೆ ಆಗುತ್ತಾ ಆಗುತ್ತಾ, ಸಂಪತ್ತು ಹಾಗೂ ನೋವುಗಳು ಕೂಡಿಕೊಳ್ಳುತ್ತವೆ .

ಪ್ರತೀ ವರುಷ ಹಲವು ಆಪ್ತ ಹಿರಿಯರು ನಮ್ಮನ್ನು ಅಗಲುತ್ತಾರೆ. ಹಾಗೆಯೇ ಕೆಲವು ಪುಟ್ಟ ಪುಟ್ಟ ಮಕ್ಕಳು ಜಗತ್ತಿಗೆ ಬಂದು ನಮ್ಮ ಬದುಕು, ನಾವು ಬದುಕಿದ್ದು ಸಾರ್ಥಕವಾಯಿತು ಅನಿಸುತ್ತಾರೆ.

ನಾನು ಹೇಳಹೊರಟಿರುವುದು ನಮ್ಮನ್ನು ಅಗಲಿದ ಹಿರಿಯರನ್ನು ಕಳೆದುಕೊಂಡೆವು ಅನ್ನುವುದರೊಡನೆ, ಕೂಡಿಕೊಂಡಿರುವುದು ಹೊಸದಾಗಿ ಹುಟ್ಟುತ್ತಿರುವ ಮಕ್ಕಳು ಮಾತ್ರವಲ್ಲ, ಎಲ್ಲೆಲ್ಲಿಯೋ ಹುಟ್ಟಿ ಬೆಳೆದು ಸಮಾನಾಂತರ ರೇಖೆಗಳಂತೆ ನಮ್ಮೊಂದಿಗೆ ಇದ್ದ, ಹೊಸದಾಗಿ ಪರಿಚಯವಾದ ಹೊಸ ಗೆಳೆಯರು, ವ್ಯಕ್ತಿಗಳು.

ನಾನು 2022ರಲ್ಲಿ ಬಹಳ ಜನರನ್ನು ಕಳೆದುಕೊಂಡೆ, ಹಾಗೆಯೇ ಬಹಳ ಜನ ಹೊಸ ಗೆಳೆಯರನ್ನೂ, ಪ್ರಸಿದ್ಧರಾಗಿರುವ ವ್ಯಕ್ತಿಗಳನ್ನೂ, ಮೊದಲಬಾರಿಗೆ ಭೇಟಿಯಾಗಿದ್ದರೂ, ಅವರಲ್ಲಿ ಕಳೆದುಕೊಂಡ ಇಬ್ಬರ ಹಾಗು ಕೂಡಿಕೊಂಡ ಇಬ್ಬರ ಬಗ್ಗೆ ಸಂಕ್ಷಿಪ್ತವಾಗಿ ನಿಮಗೆಲ್ಲಾ ತಿಳಿಸಬಯಸುತ್ತೇನೆ.

ಮೊದಲಿಗೆ ನನ್ನನ್ನಗಲಿದ 7-8 ಜನ ಹಿರಿಯರಲ್ಲಿ ನನ್ನ ಮೇಲೆ ಬಹಳವೇ ಪ್ರಭಾವ ಬೀರಿದವರೆಂದರೆ ನಾಮವೊಂದೇ ಇರುವ ಇಬ್ಬರು ವಾಮನರು. ನನ್ನ ತಂದೆಯವರ ದೊಡ್ಡಪ್ಪನವರ ಮಗ ವಾಮನ ಕಾಮತ ಒಂದೆಡೆಯಾದರೆ, ನನ್ನ ತಾಯಿಯ ಒಡಹುಟ್ಟಿದ ಹಿರಿ ಅಣ್ಣ ವಾಮನ ಶೆಣೈ ಇನ್ನೊಬ್ಬರು.

ನನ್ನ ಸೋದರಮಾವ ವಾಮನ ಶೆಣೈ ನನ್ನ ತಾಯಿಗಿಂತ 2 ವರುಷ ಹಿರಿಯ. ಇವರು ನಮ್ಮ ಮಾತೃಭಾಷೆ ಕೊಂಕಣಿಗೆ ರಾಷ್ಟ್ರಮಾನ್ಯತೆ ಸಿಗುವುದಕ್ಕಾಗಿ ಶ್ರಮಿಸಿದ ಭಾಷಾತಜ್ಞ. ಇವರು ರಾಜ್ಯ ಸರ್ಕಾರದ ಪ್ರಶಸ್ತಿಯಿಂದ ಗೌರವಿಸಲ್ಪಟ್ಟವರು. ವಿಶ್ವ ಕೊಂಕಣಿ ಕೇಂದ್ರವನ್ನು ಮಂಗಳೂರಿನಲ್ಲಿ ಸ್ಥಾಪಿಸಿದ್ದು ಇವರ ಶ್ರಮದ ಫಲ. ಬರುವ ಫೆಬ್ರವರಿ 8ರಂದು ವಿಶ್ವ ಕೊಂಕಣಿ ಕೇಂದ್ರದ ಆವರಣದಲ್ಲಿ ಇವರ ಪೂರ್ಣ ಗಾತ್ರದ ಮೂರ್ತಿಯನ್ನು ಅನಾವರಣ ಮಾಡಲು ಯೋಜಿಸಲಾಗಿದೆ. ಗೋವಾ ರಾಜ್ಯದ ಮುಖ್ಯಮಂತ್ರಿ ಹಾಗೂ ಇತರ ರಾಜ್ಯಗಳ, ದೇಶದ ಗಣ್ಯರು ಈ ಕಾರ್ಯಕ್ರಮಕ್ಕೆ ಬರುವವರಿದ್ದಾರೆ. ಇವರನ್ನು ಕೊಂಕಣಿ ಸರದಾರ ಬಸ್ತಿ ವಾಮನ ಶೆಣೈ ಎಂದೇ ಉಲ್ಲೇಖಿಸುತ್ತಾರೆ.

ನನ್ನನ್ನಗಲಿದ ಎರಡನೇ ವ್ಯಕ್ತಿ ನನ್ನ ದೊಡ್ಡಪ್ಪ ವಾಮನ ಕಾಮತ. ನನ್ನ ತಂದೆಯವರಿಗಿಂತ 1 ವರುಷ 8 ತಿಂಗಳ ಹಿರಿಯರಾದ ಇವರು ನನ್ನ ಮುತ್ತಾತನಿಂದ ಪ್ರಾರಂಭವಾಗುವ, ನಮ್ಮ ತಂದೆಯ ಕುಟುಂಬದ ಹಿರಿಯ– ನನ್ನ ಅತೀ ಗೌರವ ಪ್ರೀತಿಗೆ ಪಾತ್ರರಾದ ವ್ಯಕ್ತಿ. ಕಳೆದ ವರುಷ 2021ರಲ್ಲಿ ಇವರ 98 ವರುಷದ ಹುಟ್ಟು ಹಬ್ಬದಲ್ಲಿ ಪಾಲ್ಗೊಂಡ ನಾನು ಈ ವರುಷ ಫೆಬ್ರವರಿಯಲ್ಲಿ ಆಚರಿಸಿದ 99ನೇ ಹುಟ್ಟುಹಬ್ಬಕ್ಕೆ ಕಾರಣಾಂತರದಿಂದ ಹೋಗಲಿಲ್ಲ. ಆಗಾಗ್ಗೆ ಅವರಿಗೆ ನೀವು ನೂರು ವರುಷ ಬಾಳಲೇಬೇಕು, ಪ್ರಯಾಣದಲ್ಲಿ ಇಲ್ಲಿಯವರೆಗೂ ಬಂದಿರುವಿರಿ, ಸೆಂಚುರಿ ಬಾರಿಸಲೇಬೇಕು ಎಂದಾಗೆಲ್ಲಾ ಅವರು ಸಂತಸದಿಂದಲೇ ಸ್ಪಂದಿಸುತಿದ್ದರು. ಅವರು ಅನಾರೋಗ್ಯ ಎಂದದ್ದೇ ಇತ್ತೀಚಿಗೆ. ನನ್ನ ರಿಟೈರ್‌ಮೆಂಟ್ ದಿನ ಕರೆಮಾಡಿ ಮಾತನಾಡಿದ್ದಲ್ಲದೆ ಮಗ ಹಾಗೂ ಮೊಮ್ಮಗನನ್ನು ಸಮಾರಂಭಕ್ಕೆ ಕಳಿಸಿದ್ದರು. ನಾನು ಅವರ ಮನೆಗೆ ಹೋಗಿ ಆಶೀರ್ವಾದ ಪಡೆದಿದ್ದೆ.

ಮಾರ್ಚನಲ್ಲಿ ಅಗಲಿದ ಇವರು ಬರೀ 11 ತಿಂಗಳಿಂದ ಸೆಂಚುರಿಯಿಂದ ವಂಚಿತರಾದರು. ಇವರ ನೂರನೇ ಹುಟ್ಟು ಹಬ್ಬ ನನ್ನದೊಂದು ಮೆಚ್ಚಿನ ಕನಸಾಗಿತ್ತು. ಈಗ ನಮ್ಮಲ್ಲಿ 90 ಮುಟ್ಟಿದವರೇ ಇಲ್ಲಾ, ನೂರು ವರುಷ ಬದುಕಿ ಎಂದು ಯಾರಿಗಾದರೂ ಹಾರೈಸಿದರೆ ಶಾಪವೊಂದನ್ನು ಕೊಟ್ಟಂತೆ ನೋಡುತ್ತಾರೆ.

ಈಗ ಕೂಡಿ ಕಳೆವುದೇ ಜೀವನ ಎನ್ನುತ್ತಾ, ಕೂಡಿದವರ ಬಗ್ಗೆ ಹೇಳಲು ಹೊರಟರೆ, ನಾನು ಮೊದಲ ಬಾರಿಗೆ 2022ರಲ್ಲಿ ಚೆನ್ನಭೈರಾದೇವಿ ಬರೆದ ಗಜಾನನ ಶರ್ಮ, ಮಗಳು ಜಾನಕಿಯ ಸಿಎಸ್‌ಪಿ ಸೀತಾರಾಮ್ ಮತ್ತು ಹಲವು ಗಣ್ಯ ಪ್ರಸಿದ್ಧ ವ್ಯಕ್ತಿಗಳನ್ನು ಭೇಟಿಯಾದೆ. ಅವರಲ್ಲಿ ನನ್ನ ಮಟ್ಟಿಗೆ ಇವರನ್ನು ನಾನು ಈ ಮೊದಲೇ ಏಕೆ ನೋಡಲಿಲ್ಲ, ಇವರೊಂದಿಗೆ ಇನ್ನು ಮುಂದಾದರೂ ಉಳಿದಿರುವ ಹೆಚ್ಚೋ, ಕಡಿಮೆಯೋ ಆಯಸ್ಸಿನಲ್ಲಿ, ಹೆಚ್ಚು ಹೆಚ್ಚು ಸಮಯ ಇವರೊಂದಿಗೆ ಕಳೆಯಬೇಕು ಎನಿಸಿದ ಇಬ್ಬರೆಂದರೆ, ಬೆಳ್ಳಿಯ ಸ್ಥಾನದಲ್ಲಿ ಶ್ರೀ ಗಣೇಶ್ ಕಾಸರಗೋಡು. ಇವರು ಸಿನಿಮಾ ಸಾಹಿತ್ಯದ ದಿಗ್ಗಜರು, ಮೊದಲ ಭೇಟಿಯಲ್ಲೇ ಆತ್ಮೀಯತೆ ಉಕ್ಕಿ ಅವರ ಬಳಿ ಇದ್ದ ಅವರು ಬರೆದ ಏಳು ಪುಸ್ತಕಗಳನ್ನು ಕೊಟ್ಟು, 'ಮಿಕ್ಕ ಪುಸ್ತಕಗಳ ಪ್ರತಿ ದೊರಕಿದಾಗ ಕೊಡುವೆ' ಅಂದರು. "ಪರವಾಗಿಲ್ಲ, ನಾನು ಕೊಂಡು ಓದುವೆ" ಎಂದು ಹೇಳಿ, ನಾನು ಲಭ್ಯವಿರುವ ಕೆಲವನ್ನು ತರಿಸಿದೆ.

ನಾನು, ಗೆಳೆಯರು, ಇವರು ಹಾಗೂ ಇವರ ಪತ್ನಿ ಸೌತ್ ಎಂಡ್ ಸರ್ಕಲ್ ಸಮೀಪ ಇರುವ UD ಭರ್ಜರಿ ಊಟಕ್ಕೆ ಹೋಗಿ, ರುಚಿಯಾದ ಊಟ ಆಗಿ ನಮ್ಮ ನಮ್ಮ ಮನೆಗೆ ಹೋದೆವು. ಎರಡು ದಿನಗಳಲ್ಲೇ ಗಣೇಶ್ ಅವರು ತಮ್ಮ ಗೆಳೆಯರೋ, ಸಂಬಂಧಿಗಳೋ ಬಂದಾಗ ಮತ್ತೊಮ್ಮೆ ಎಲ್ಲರನ್ನೂ ಭರ್ಜರಿ ಊಟಕ್ಕೆ ಕರೆದು ಕೊಂಡು ಹೋದೆ. ಅವರು 'ಒಳ್ಳೆ ಹೋಟೆಲ್ ತೋರಿಸಿದಿರಿ' ಎಂದಾಗ ನನಗೆ ಬಹಳ ಸಂತಸವಾಯಿತು.

ಗಣೇಶ್ ಕಾಸರಗೋಡು ಅವರು ಸಿನಿಮಾ ಸಾಹಿತ್ಯದಲ್ಲಿ ಹಲವು ಹದಿನಾರು ಪುಸ್ತಕಗಳನ್ನು ಬರೆದಿದ್ದಾರೆ. ಇವರು 'ಸಂಯುಕ್ತ ಕರ್ನಾಟಕ'ದ ವಾರದ ಪುರವಣಿಯಲ್ಲಿ ಬಹಳ ವರುಷ ತಮ್ಮ ಅಂಕಣವನ್ನು ಪ್ರಕಟಿಸಿ ಜನರ ಮೆಚ್ಚುಗೆ ಗಳಿಸಿದ್ದಾರೆ. ಇವರು "ಮೌನ ಮಾತಾದಾಗ" ಎಂದು ಬೆಳ್ಳಿ ಪರದೆಯಲ್ಲಿ ಮಿನುಗಿದ ಹಲವು ತಾರೆಯರ ಇಂದಿನ ಕಷ್ಟಕರ ಪರಿಸ್ಥಿತಿಯ ಬಗ್ಗೆ ಬರೆದಾಗ, ಇನ್ಫೋಸಿಸ್‌ನ ಸುಧಾ ಮೂರ್ತಿಯವರೂ ಸೇರಿದಂತೆ ಹಲವು ಓದುಗರು, ಎಲ್ಲರೂ ಸಹಾಯ ನೀಡಿ ಹಲವರ ಪರಿಸ್ಥಿತಿ ಸುಧಾರಿಸಿತು. ದೇವರು ಇವರಿಗೆ

ಇಂತಹ ಒಂದು ಪುಸ್ತಕ ಅಂಕಣ ಬರೆಯುವ ಸ್ಫೂರ್ತಿ ಕೊಡುವ ಮೂಲಕ ಹಲವರಿಗೆ ವರಪ್ರದಾನವಾಯಿತು. ದೂರದ ಉಡುಪಿಯಲ್ಲಿ ನಾನು, ಬೆಂಗಳೂರಿನಲ್ಲಿ ಅವರು ಇದ್ದರೂ, ನಾನು ಅವರನ್ನು ನೆನೆಯದ ದಿನವಿಲ್ಲಾ ...

ಇನ್ನು ಕೂಡಿದವರ ಪಟ್ಟಿಯ ಮೊದಲ ಸ್ಥಾನ ಚಿನ್ನದ ಪದಕ ಶ್ರೀ ಬೊಳುವಾರು ಮಹಮದ್ ಕುಂಞಿ. ಇವರು ಬಹಳ ವರುಷ ನಮ್ಮ ಉಡುಪಿಯಲ್ಲೇ, ಇಲ್ಲಿನ ಮಣಿಪಾಲದ ಸಿಂಡಿಕೇಟ್ ಬ್ಯಾಂಕ್‌ನ ಆಡಳಿತ ಕಚೇರಿಯಲ್ಲಿ ಕೆಲಸ ಮಾಡಿದವರು. ಇಂದ್ರಾಳಿಯಲ್ಲಿ ಮನೆ, ಹೆಂಡತಿ ಮಕ್ಕಳು ಇದ್ದು, ಉಡುಪಿಯವರಾಗಿದ್ದರು. ನಾನು ಆ ಹಲವು ವರುಷಗಳಲ್ಲಿ ಕೆಲವು ವರ್ಷವಂತೂ ಉಡುಪಿಯಲ್ಲೇ ಇದ್ದೆ. ಆದರೆ ತಪ್ಪಿಯೂ ಒಮ್ಮೆ ಕೂಡ ಇವರನ್ನು ಭೇಟಿ ಆಗಿರಲಿಲ್ಲ. ಇವರ "ಮೋನು ಸ್ಮೃತಿ" ಆತ್ಮಕಥೆಯ ಒಂದೆರಡು ಪುಟಗಳನ್ನು ನಾನು ಫೇಸ್ಬುಕ್‌ನಲ್ಲಿ ಇಂಗ್ಲಿಷ್‌ಗೆ ಭಾಷಾಂತರಿಸಿ ಪ್ರಕಟಿಸಿದ್ದೆ. ಮುಂದೆ ನವಕರ್ನಾಟಕದಿಂದ ಎರಡು ಪ್ರತಿಗಳನ್ನು, ಮೆಚ್ಚುವಂತಹ ನನ್ನ ಸಂಬಂಧಿಗಳಿಗೆ ಉಡುಗೊರೆ ಕೊಟ್ಟೆ. ನನಗೆ ಹಾಗೂ ನಮ್ಮೀರ್ವರ ಗೆಳೆಯ ಬೆಳಗೋಡು ರಮೇಶ್ ಭಟ್‌ರಿಗೆ ಬೊಳುವಾರು ಅವರು ಸಹಿ ಮಾಡಿದ ಪ್ರತಿಗಳನ್ನು ಕೊಟ್ಟರು. ನನಗೆ ತಮ್ಮಲ್ಲಿದ್ದ ಹಲವು ಪುಸ್ತಕಗಳ ಪ್ರತಿಗಳನ್ನು ಕೊಟ್ಟರು. ಅದರಲ್ಲಿ ಧೀರ್ಘ ಕಾದಂಬರಿ "ಸ್ವಾತಂತ್ರ್ಯದ ಓಟ"ವನ್ನು ನಾನು ಮೊದಲು ಓದಬೇಕು ಎಂದರು. ನಾನು ಇವರ "ಮೋನು ಸ್ಮೃತಿ", "ಒಂದು ತುಂಡು ಗೋಡೆ" ಹಾಗೂ "ಸ್ವಾತಂತ್ರ್ಯದ ಓಟ" ಓದಿದೆ. ಈ ಕಾದಂಬರಿ, ಕಥಾ ಸಂಕಲನ, ಆತ್ಮ ಚರಿತ್ರೆ ಓದಿದ ಮೇಲೆ ಮೋನು ಅವರ ಬಹಳಷ್ಟು ಜೀವಮಾನ ಅಂದರೆ ಸುಮಾರು ಶೇಕಡಾ 40% ಕರ್ನಾಟಕದ ಜನತೆಗೆ ತಿಳಿದಿರುತ್ತದೆ. ಇನ್ನು ಉಳಿದಿರುವುದು ಅಂದರೆ ನನ್ನ ಬಗ್ಗೆ ಅವರಿಗೆ ಹೇಳಬೇಕಲ್ಲಾ, ನಾನು ಖಂಡಿತ ಅತ್ಮಚರಿತ್ರೆ ಬರೆಯುವವನಲ್ಲಾ. ಪಕ್ಕನೆ ಬರೆದರೂ ನನ್ನೊಬ್ಬನನ್ನು ಬಿಟ್ಟು ನನ್ನ ಹೆಂಡತಿ ಕೂಡ ಅದನ್ನು ಓದುವುದಿಲ್ಲಾ. ಇನ್ನು ನಮ್ಮಿಬ್ಬರ ಏಕಮಾತ್ರ ಪುತ್ರಿ 'ತನಗೆ ಕನ್ನಡ ಸರಿಯಾಗಿ ಓದಲು ಬರುವುದಿಲ್ಲಾ' ಎಂದು ಹೇಳುವುದು ಒಂದು ಫ್ಯಾಷನ್ ಎಂದು ಕೊಂಡಿದ್ದಾಳೆ.

ಮೋನು ಅವರನ್ನು ಮತ್ತೊಮ್ಮೆ ಭೇಟಿ ಆದಾಗ ಅವರನ್ನು ಕಾಣಲು ಬಂದ ಬಿ.ಜಯಶ್ರೀ, ಹಿರಿಯ ನಟಿ, ಗಾಯಕಿ ನಮಗೆ ಮಾತನಾಡಲು ದೊರೆತದ್ದು ಇನ್ನೊಂದು ಸಂತಸದ ವಿಷಯ. ಬೊಳುವಾರು ಮಹಮದ್ ಕುಂಞಿ, ಕೇಂದ್ರ ಸರ್ಕಾರ ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಎರಡು ಬಾರಿ ಪಾತ್ರರಾದ ಏಕೈಕ ವ್ಯಕ್ತಿ. ಇವರ ಸ್ನೇಹ ನನಗೆ ಬಹಳ ಅಮೂಲ್ಯ.

ಇದು ನನ್ನ 2022ರ ಸಂಕ್ಷಿಪ್ತ ಕೂಡು ಕಳಿ ಲೆಕ್ಕ.

***

ಕುಟ್ಟುವ ಸಲಕರಣೆಗಳು

– ಮಹಾಬಲ

ಪ್ರೊ.ಎಸ್.ವಿ.ರಂಗಣ್ಣನವರು ತಮ್ಮ 'ಪಾಶ್ಚಾತ್ಯ ಗಂಭೀರ ನಾಟಕಗಳು' ಎಂಬ ಸಂಶೋಧನಾತ್ಮಕ ಗ್ರಂಥವನ್ನು ಕುವೆಂಪು ಅವರಿಗೆ ನೀಡಿದಾಗ ಅವರು ಒಮ್ಮೆ ಅದನ್ನು ಅವಲೋಕಿಸಿ, "ಕನ್ನಡದಲ್ಲಿ ಏನಿದೆ? ಎಂದು ಕೇಳುವವರ ತಲೆಯ ಮೇಲೆ ಈ ಪುಸ್ತಕದಿಂದ ಕುಟ್ಟಿ" ಎಂದರಂತೆ.

ಹೌದು, ಕನ್ನಡ ನಾಡು, ನುಡಿ, ಔನ್ನತ್ಯ, ಸಾಹಿತ್ಯ ಸಾಧಕರು ಇವರ ಬಗ್ಗೆ ಪರಭಾಷಿಗರು ಲಘುವಾಗಿ ಮಾತನಾಡಿದಾಗ ನಮ್ಮಲ್ಲಿ ಕೆಲವರು ಅಂಥವರಿಗೆ ಸಮರ್ಪಕವಾಗಿ ಉತ್ತರಿಸಲಾಗದೆ ದ್ಯೂತದಲ್ಲಿ ಸೋತ ಪಾಂಡವರಂತೆ ಸುಮ್ಮನೆ ಮೌನಕ್ಕೆ ಶರಣಾಗುತ್ತೇವೆ. ನಾಡು, ನುಡಿ, ಸಾಧನೆ, ಸಾಧಕರು ಇವುಗಳ ಬಗ್ಗೆ ನಮಗೆ ಸಮರ್ಥನೀಯ ಜ್ಞಾನ ಇಲ್ಲದಿರುವುದೇ ಈ ದೈನ್ಯಸ್ಥಿತಿಗೆ ಪ್ರಬಲ ಕಾರಣವಾಗಿದೆ. ಹೊಳೆಹೊಳೆವ ವಸ್ತ್ರ ಧರಿಸಿ, ಬ್ಯಾಡ್ಜ್ ಏರಿಸಿ ಸಮಾರಂಭದಲ್ಲಿ ಶತಪಥ ಸುತ್ತುವ ಜತೆಗೆ ಕನ್ನಡದ ಬಗ್ಗೆ ಅರಿವು ಹೊಂದುವುದೂ ಅಷ್ಟೇ ಅಗತ್ಯವಾಗಿದೆ.

ಅನಕೃರವರು ಶಾಂತಿನಿಕೇತನದಲ್ಲಿ ವ್ಯಾಸಂಗ ಮಾಡಲು ಹೋದಾಗ ವಿಶ್ವಕವಿ ರವೀಂದ್ರರು ಅನಕೃ ಕರ್ನಾಟಕದವರೆಂದು ತಿಳಿದಾಗ "ಅಪ್ಪ ಹೇಗಿದ್ದಾರೆ?" ಎಂದು ಕೇಳುತ್ತಾರೆ. ಅನಕೃ ತಬ್ಬಿಬ್ಬಾಗುತ್ತಾರೆ. ಮತ್ತೆ ಟಾಗೋರರೇ "ಕಲಾವಿದ ವೆಂಕಟಪ್ಪನವರು", ಎಂದು ಸ್ಪಷ್ಟನೆ ನೀಡುತ್ತಾರೆ. ಅನಕೃರವರು ವೆಂಕಟಪ್ಪನವರ ಬಗ್ಗೆ ನಿಕಟವಾಗಿ ತಿಳಿದುಕೊಂಡಿರಲಿಲ್ಲ. ಮುಂದುವರೆದು ಕವೀಂದ್ರರು "ಅಣ್ಣ ಹೇಗಿದ್ದಾರೆ?" ಎಂದು ಕೇಳುತ್ತಾರೆ. ಅನಕೃರವರು ತಮಗೆ ಪ್ರಶ್ನೆ ಅರ್ಥವಾಗದಿದ್ದರೂ "ಓಹೋ ಚೆನ್ನಾಗಿದ್ದಾರೆ" ಎನ್ನುತ್ತಾರೆ. ಅಣ್ಣ ಎಂದರೆ ವೀಣೆ ಶೇಷಣ್ಣನವರು. ಆ ಕಾಲದಲ್ಲಿ ಕರ್ನಾಟಕದ ಇಂಥ ಹಲವಾರು ಸಾಧಕರು ದೇಶಾದ್ಯಂತ ಹೆಸರು ಮಾಡಿದ್ದರು. ಅನಕೃರವರಂಥ ಮೇಧಾವಿಗಳಿಗೇ ಇಂಥ ಪಾಡಾದರೆ ಇನ್ನು ನಮ್ಮಂಥವರ ಗತಿಯೇನು?

ರಾಷ್ಟ್ರಕವಿ ಗೋವಿಂದ ಪೈರವರು 22ಕ್ಕೂ ಹೆಚ್ಚು ಭಾರತೀಯ ಹಾಗೂ ಯೂರೋಪಿಯನ್ ಭಾಷೆಗಳ ಪ್ರಾಯೋಗಿಕ ಜ್ಞಾನ ಹೊಂದಿದ್ದ ವರವಿದ್ವಾಂಸರು. ಒಮ್ಮೆ ಮದರಾಸಿನಲ್ಲಿ ವಿಶ್ವಭಾಷಾ ಸಮ್ಮೇಳನ ನಡೆದಾಗ ಅದನ್ನು ಉದ್ಘಾಟಿಸಿದ ರಾಜ್ಯಪಾಲರಾದ ಜಾಮ್‌ನಗರದ ಮಹಾರಾಜರು "ನನ್ನ ಭಾಷಣವನ್ನು ಎಲ್ಲ ಯೂರೋಪಿಯನ್ ಭಾಷೆಗಳಿಗೆ ಅನುವಾದ ಮಾಡುವ ವಿದ್ವಾಂಸರು ಈ ಸಭೆಯಲ್ಲಿದ್ದರೆ ಬನ್ನಿ" ಎಂದು ಆಹ್ವಾನಿಸಿದಾಗ ತಕ್ಷಣ ಹೋಗಿ ಅನುವಾದ ಮಾಡಿದವರು ನಮ್ಮ ಗೋವಿಂದ ಪೈ. ಒಮ್ಮೆ ನಾನು ರಸಪ್ರಶ್ನೆ ಸ್ಪರ್ಧೆ ನಡೆಸುವಾಗ ಗೋವಿಂದ ಪೈ ಅವರ ಚಿತ್ರವನ್ನು ಯಾವ ಸ್ಪರ್ಧಿಯೂ ಗುರುತಿಸಲಿಲ್ಲ. ಆದರೆ ಸಿನಿಮಾ ನಟರ ಚಿತ್ರ ಗುರುತಿಸಲು ನಾ ಮುಂದು ಎಂಬ ಉಮೇದು. ಸಾಂಸ್ಕೃತಿಕ ದುರಂತಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕೆ?

ತೀರಾ ಇತ್ತೀಚಿನ ಒಂದು ಉದಾಹರಣೆ. ಚೆನ್ನೈನಲ್ಲಿ ಚಿತ್ರೋದ್ಯಮದ ಒಂದು ಸಮಾರಂಭದಲ್ಲಿ ಸಾಲುಮರದ ತಿಮ್ಮಕ್ಕ ಅವರಿಗೆ ಪ್ರಶಸ್ತಿ ನೀಡಲಾಯಿತು. ಅವರ ಕನ್ನಡ ಭಾಷಣವನ್ನು ಇಂಗ್ಲಿಷಿಗೆ ತರ್ಜುಮೆ ಮಾಡಲು ಅಲ್ಲಿದ್ದ ರಶ್ಮಿಕಾ ಮಂದಣ್ಣ ಅವರಿಗೆ ಕೋರಲಾಯಿತು. ಆಕೆಗೆ ಇಂಗ್ಲಿಷಿನಲ್ಲಿ ಕೂಡ ಸರಿಯಾಗಿ ಅನುವಾದಿಸಲು

ಸಾಧ್ಯವಾಗಲಿಲ್ಲ. ತಕ್ಷಣ ಧಾವಿಸಿದ ತಮಿಳುನಟ ವಿವೇಕ್, ಸಾಲುಮರದ ತಿಮ್ಮಕ್ಕನ ಬಗ್ಗೆ ತಮಿಳಿನಲ್ಲಿ ಸೊಗಸಾದ ಮಾಹಿತಿ ನೀಡಿದರು. ನಮ್ಮ ಸಾಧಕರ ಬಗ್ಗೆ ನಮಗೇ ಗೊತ್ತಿಲ್ಲದಿದ್ದರೆ ಹೇಗೆ?

ಡಿವಿಜಿಯವರು ಶೈಕ್ಷಣಿಕವಾಗಿ ಹೆಚ್ಚು ಸಾಧಿಸದ ವಿಷಯ ಎಲ್ಲರಿಗೂ ತಿಳಿದದ್ದೇ. ಆದರೆ ಅವರು ಆಕ್ಸ್‌ಫರ್ಡ್ ನಿಘಂಟಿನ ಒಮ್ಮೆ ಆವೃತ್ತಿಯಲ್ಲಿ ಹಲವು ದೋಷ, ಅಸಾಂಗತ್ಯ ಗಮನಿಸಿ ಆಕ್ಸ್‌ಫರ್ಡ್‌ನವರ ಗಮನಕ್ಕೆ ತಂದರು. ಅವರು ಅದನ್ನು ಅಂಗೀಕರಿಸಿ ಮುಂದಿನ ಆವೃತ್ತಿಯಲ್ಲಿ ತಿದ್ದುಪಡಿ ಮಾಡುವುದಾಗಿ ಡಿವಿಜಿಯವರಿಗೆ ಪ್ರಮಾಣಪತ್ರ ನೀಡಿದರು. ಇಂಥ ಅಭಿಮಾನದ ವಿಷಯ ನಮ್ಮ ಮಾಹಿತಿಕೋಶದಲ್ಲಿ ಇರುವುದು ಅನಿವಾರ್ಯ ಅಲ್ಲವೆ?

ವಿ ಕೃ ಗೋಕಾಕರ ಪರೀಕ್ಷೆಯ ಉತ್ತರ ಪತ್ರಿಕೆಯನ್ನು ಆಕ್ಸ್‌ಫರ್ಡ್‌ನಲ್ಲಿ ಪ್ರದರ್ಶನಕ್ಕೆ ಇಟ್ಟಿರುವ ಸಂಗತಿಯೂ ನಮ್ಮ ಟೋಪಿಗೊಂದು ಗರಿ ಅಲ್ಲವೆ?

ಮೈಸೂರಿನ ಕ್ರಾಫರ್ಡ್ ಹಾಲ್ ಎದುರು ಕೌಟಿಲ್ಯ ವೃತ್ತ ಇದೆ. ಆ ಹೆಸರು ಏಕೆ ಗೊತ್ತೆ? ಸಮೀಪ ಇರುವ ಪ್ರಾಚ್ಯ ಸಂಶೋಧನಾ ಸಂಸ್ಥೆಯಲ್ಲಿ ಕೌಟಿಲ್ಯನ ಅರ್ಥಶಾಸ್ತ್ರದ ಮೂಲ ಹಸ್ತಪ್ರತಿ ಇಡಲಾಗಿದೆ. ಇದನ್ನು ಸಂಶೋಧಿಸಿದವರು ವಿದ್ವಾಂಸರಾದ ರುದ್ರಪಟ್ಟಣ ರಾಮಾಶಾಸ್ತ್ರಿಯವರು.

ಇಂಥ ಅಸಂಖ್ಯಾತ ಸಾಧನೆಗಳು ಕನ್ನಡದ ಖಜಾನೆಯಲ್ಲಿದೆ. ಅವನ್ನು ಅರಿತು ಸಮಯ ಬಂದಾಗ ಪ್ರತಿಪಾದಿಸುವುದು ನಮ್ಮ ಕರ್ತವ್ಯವಲ್ಲವೆ?

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061

ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ –

ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 209 – ಸಂಚಿಕೆಯ ಬಿಡುಗಡೆ ದಿನಾಂಕ: 11 ಫೆಬ್ರವರಿ 2023 – ಶನಿವಾರ

ಇಂಗ್ಲೆಂಡಿನ ಸೆರೆಮನೆಯಲ್ಲಿ ನಾನು

– ಡಾ.ಸತ್ಯವತಿ ಮೂರ್ತಿ

ಇತ್ತೀಚೆಗೆ 'ನಾನು ಜೈಲಿಗೆ ಹೋಗಿದ್ದು' ಲೇಖನವನ್ನು ಎಲ್ಲಿಯೋ ಓದಿದಾಗ ನೆನಪಾಯ್ತು. ಹೌದು, ನಾನೂ ಜೈಲಿಗೆ ಹೋಗಿದ್ದೆ, ಪದೇ ಪದೇ ಹೋಗುತ್ತಲೇ ಇದ್ದೆ. ಇದನ್ನು ಕುರಿತು ಬರೆಯಬಹುದಲ್ಲ! ಎನಿಸಿತು. ಕೂಡಲೆ ನನ್ನ ಸುತ್ತಮುತ್ತಲಿನವರಲ್ಲಿ , ಪರಿಚಿತರಲ್ಲಿ ಉಂಟಾಗಬಹುದಾದ ಭಾವನೆಗಳನ್ನು ಎಣಿಸತೊಡಗಿದೆ.

'ಎಲಾ ಎಲಾ, ನೋಡಿದೆಯ ಈಕೆಯ ಮಾತನ್ನ! ಮೊನ್ನೆ ಮೊನ್ನೆ ಇನ್ನೂ ಬಹಳ ಸಭ್ಯರಂತೆ, ಅನೇಕ ದಾಖಲೆಗಳನ್ನು ಮಾಡಿರುವಂತೆ ಕಂಡುಬರುವ ವ್ಯಕ್ತಿತ್ವದ ಫೋಟೋಗಳೊಂದಿಗೆ ಇವರ ಉದ್ದನೆಯ ಪರಿಚಯವನ್ನು ಓದಿದೆವು. ಅದನ್ನು ಓದಿ ನಾವು ಇವರು ಬಹಳ ಸಭ್ಯರು ಎಂದುಕೊಂಡೆವು. ನಮ್ಮ ಅನಿಸಿಕೆ ತಪ್ಪಾಯಿತಲ್ಲವೆ? ಈಕೆ ಪದೇ ಪದೇ ಜೈಲಿಗೆ ಹೋಗಿ ಬಂದಿದ್ದಾರೆಂದರೆ ಯಾವ ಮಟ್ಟದ ನೈತಿಕ ಜವಾಬ್ದಾರಿ ಇರಬಹುದು? ಅಯ್ಯೋ, ಇಂತಹವರ ಬಳಿ ಆದಷ್ಟೂ ಕಡಿಮೆ ವ್ಯವಹಾರ ಇಟ್ಟುಕೊಳ್ಳುವುದೇ ಸರಿ. ನಮ್ಮ ಗುಂಪಿಗೆ ಇವರನ್ನು ಸೇರಿಸಲೇಬಾರದಾಗಿತ್ತು. ನಮ್ಮಲ್ಲಿ ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಹೆಸರಾಂತ ಬರಹಗಾರರು, ಭಾಷಣಕಾರರು. ಇಂತಹವರ ನಡುವೆ ಈ ಹೆಂಗಸನ್ನು ಸೇರಿಸಿದ್ದು ಸರಿಯೇ?

'ಹಿಂದೆಮುಂದೆ ನೋಡದೆ, ಪೂರ್ವಾಪರ ವಿಚಾರಿಸದೆ, ಬನ್ನಿ ನಮ್ಮ ಗುಂಪಿಗೆ ಎಂದೆ. ಏಕೋ ಅದು ಸರಿಯಾದ ನಿರ್ಧಾರವಾಗಲಿಲ್ಲವೆಂದು ಕಾಣುತ್ತದೆ ...', ಶ್ರೀಕಲಾ ಉವಾಚ.

'ಅಲ್ಲಾರೀ, ನಾವಿರೋ ಬಡಾವಣೇಲೆ ಇದಾರೆ, ಇವರ ಪರಿಚಯದವರು ಭವಾನಿ ಅಂತ. ಮೊನ್ನೆ ನಾನು ನಮ್ಮ ಗುಂಪಿಗೆ ಹೊಸದಾಗಿ ಸೇರಿದ ಇವರ ಬಗ್ಗೆ ಮಾತನಾಡಿದಾಗ ಹೇಳಿದರು.

"ಅಯ್ಯೋ ಅವರೇನ್ರೀ? ನಮಗೂ ಗೊತ್ತು ಬಿಡಿ. ನಮ್ಮ ದೇಶದಿಂದ ದೂರ ಇರೋದ್ರಿಂದ ನಮಗೇನೂ ಗೊತ್ತಾಗೋಲ್ಲ ಅಂದುಕೊಂಡುಬಿಡುತ್ತಾರೆ ಅಂತ ಕಾಣುತ್ತೆ. ನಮ್ಮ ಅಕ್ಕನ ಸೊಸೆಯ ತಂಗಿ ಅಲ್ಲೇ ಮ್ಯಾಂಚೆಸ್ಟರ್‌ನಲ್ಲೇ ಓದ್ತಾ ಇರೋದು. ಈಕೇನ ಯಾವುದೋ ಕನ್ನಡ ಸಂಘದ ಕಾರ್ಯಕ್ರಮದಲ್ಲಿ ನೋಡಿಯೂ ಇದಾಳೆ. ಅವಳು ಫೋನ್ ಮಾಡಿದಾಗ ಅವರಮ್ಮನ ಬಳಿ ಹೇಳಿದಳಂತೆ. ಅವರಮ್ಮ ನನ್ನ ಸೊಸೆಗೆ, ನನ್ನ ಸೊಸೆ ನನಗೆ ಹೇಳಿದ್ಲು".

'ಒಬ್ಬರಿಗೆ ಗೊತ್ತಾದರೆ ಸಾಕಲ್ವೇ? ಇವರ ಜಾತಕನೆಲ್ಲ ಜಾಲಾಡೋಕ್ಕೆ! '

'ಆದ್ರೆ ಒಂದು ಮಾತು, ಅಲ್ಲಿರೋರು ಯಾರೂ ಈಕೆ ಬಗ್ಗೆ ಅಗೌರವ ತೋರಿಸ್ತಾ ಇರಲಿಲ್ಲ ಅಂತನೂ ಹೇಳಿದಳಂತೆ. ಎಂಥ ಕಾಲ ಬಂದು ಹೋಯ್ತು ರೀ. ಕಳ್ಳಕಾಕರು, ಸೆರೆಮನೆಗೆ ಹೋಗಿಬಂದೋರು, ಇವರನ್ನೆಲ್ಲ ಮಾಮೂಲಾಗೆ ಮಾತಡಿಸ್ತಾರೆ ಅಂದ್ರೆ !' ಅಂತ ಅಲವತ್ತುಕೊಂಡರು ಶಾಂತ.

'ಹೌದೇನ್ರೀ, ಶಾಂತಾ ಅವರೆ'.

'ನಿಮಗ ಗೊತ್ತಿತ್ತು ಅಂದ್ರ ಮೊದ್ಲೇ ಹೇಳ್ಲಕಿಲ್ಲೇನು? ನಾನ.. ಇವರಿಗೆ ನಮ್ಮ ಗುಂಪಿನಾಗ ಸೇರಿಸ್ತಾನೇ ಇರಲಿಲ್ಲರೀ . ನಿಮ್ಮ ಗುಂಪಿನಾಗೂ ಸೇರಿಸಬ್ಯಾಡ್ರೀ ಅಂತ ಹೇಳೋವಳಿದ್ದೆ' ಶ್ರೀಮತಿ ಉವಾಚ.

'ಹಾಗೇನೂ ಇರಲಿಕ್ಕಿಲ್ಲ ಅಂತ ಕಾಣ್ತದ' ಅಂತ ಹೇಳಿ ಚರ್ಚೆಯಿಂದ ಕಳಚಿಕೊಂಡವರು ಕೆಲವರು.

ಈ ಸುದ್ದಿ ಓದಿದ ಇನ್ನೊಬ್ಬ ಹೆಸರಾಂತ ಬರಹಗಾರರು, "ಹೌದಾ? ನಮ್ಮ ಗುಂಪಿಗೂ ಬರ್ತಾರೆ ಈಕೆ. ಅಲ್ಲಿ ಇವರ ಪರಿಚಯ ಮಾಡೋಕೆ ಹೋದರೆ 'ನಾನು ಡಾ. ಸತ್ಯವತಿ ಮೂರ್ತಿ, ಮ್ಯಾಂಚೆಸ್ಟರ್‌ನಲ್ಲಿರೋದು, ಅಷ್ಟೇ ಸಾಕು' ಅಂತ ಮುಂದಕ್ಕೆ ಹೇಳೋಕ್ಕೇ ಬಿಡೊಲ್ಲ , ಈಗ ಗೊತ್ತಾಯಿತು ಯಾಕೆ ಅಂತ".

"ಅಬ್ಬಾ, ಎಂತೆಂತಹ ಜನ ಇರ್ತಾರೆ ನೋಡಿದ್ರ? ಆಶ್ಚರ್ಯಭರಿತವಾದ ಉದ್ಗಾರವೆತ್ತಿದರು.

"ಇವರು ನಮ್ಮ ಮಕ್ಕಳಿಗೆ ಪಾಠ ಹೇಳಿದಾರೆ ರೀ. ಆಗೆಲ್ಲ ಚೆನ್ನಾಗೇ ಇದ್ದರು. ಇಂಗ್ಲೆಂಡಿಗೆ ಹೋದಮೇಲೆ ಬದಲಾಗಿಬಿಟ್ಟರೋ ಏನೋ, ದೇವರು ಯಾವಾಗ ಯಾರಿಗೆ ಯಾವ ಬುದ್ಧಿ ಕೊಡ್ತಾನೆ ಅಂತ ಗೊತ್ತಾಗೋದೇ ಇಲ್ಲ', ತಾರಾ ಎಳೆದೆಳೆದು ಹೇಳಿದರು

"ಎಂತದೋ, ಯಾವ ಹುತ್ತದಾಗ ಯಾವ ಹಾವಿರುತ್ತೇಂತ ಯಾರಿಗ್ಗೊತ್ತು? ನಮಕೆಂತ ತಿಳೀತೂ? ಮುಖ ಸಹ ನೋಡಿಲ್ಲ, ಅವರೇನು ಹೇಳತಾರ ಅದ ಕೇಳ್ತೀವಿ ಅಷ್ಟ!' ಅಂದರು ಕುಂದಾಪುರದಲ್ಲಿಯ ಮಿತ್ರರು.

"ಇನ್ನುಮೇಲಾದರೂ ಬಹಳ ಎಚ್ಚರಿಕೆಯಿಂದ ಇರಬೇಕು ರೀ. ಬಂದವರನ್ನೆಲ್ಲ ಸಮಿತಿಗೆ ಸೇರಿಸಿಕೊಂಡು ಬಿಡಬಾರದು. ಏನು, ಎತ್ತ ವಿಚಾರಿಸಬೇಕು!"

ಹೀಗೇ ಅವರ ಅನಿಸಿಕೆಗಳು ಒಂದಾದಮೇಲೊಂದು ಉರುಳುತ್ತಿರುವುದನ್ನು ನೋಡಿ, 'ಸೆರೆಮನೆ" ಶಬ್ದ ನಮ್ಮ ಭಾವನೆಗಳನ್ನು ಎಷ್ಟು ಬೇಗ ಒಬ್ಬ ವ್ಯಕ್ತಿಯ ಬಗೆಗೆ ಬದಲಾಯಿಸಿಬಿಡಬಲ್ಲುದು ಎನಿಸಿತು. ಆ ಶಬ್ದವನ್ನು ಜೋರಾಗಿ ಹೇಳಲೇ ಹೆದರಿಕೆ. ಎಲ್ಲಿ ನಾನು ಆ ಶಬ್ದವನ್ನು ಬಳಸಿದರೆ ಜನ ತಪ್ಪು ತಿಳಿದುಬಿಟ್ಟಾರೋ ಎಂಬ ಗಾಬರಿ.

ಅದಿರಲಿ, ನಾನು ಈ ಮೇಲಿನ ಯಾವ ಊಹಾಪೋಹಗಳಿಗೂ ಆಹಾರವಾಗುವವಳಲ್ಲ! ಹೌದು ನಿಜ, ನಾನೂ ಸೆರೆಮನೆಗೆ ಬಹಳ ಬಾರಿ ಹೋಗಿದ್ದೇನೆ. ಆದರೆ ಖೈದಿಯಾಗಿ ಅಲ್ಲ, ಖೈದಿಗಳನ್ನು ಭೇಟಿ ಮಾಡಲು!

ಹೌದು. ನಾನು ಇಂಗ್ಲೆಂಡಿಗೆ ಹೋದ ಒಂದು ವರ್ಷದಲ್ಲೇ ಇದ್ದಕ್ಕಿದ್ದಂತೆ ನನಗೆ ಸರ್ಕಾರದ ವತಿಯಿಂದ ಒಂದು ಪತ್ರ ಬಂದಿತು. ಅದರಲ್ಲಿ ನನ್ನನ್ನು 'ಹೆಂಗಸರು ಮತ್ತು ಮಕ್ಕಳ' ಸೆರೆಮನೆಯ ಮಂತ್ರಿಯನ್ನಾಗಿ ನೇಮಿಸಿಕೊಳ್ಳಲು ಆಲೋಚಿಸಿದ್ದಾರೆಂದೂ ಅದಕ್ಕಾಗಿ ಪೋಲಿಸ್ ತನಿಖೆಗೆ ಬರುತ್ತಾರೆ ಎಂದೂ ಬರೆದಿತ್ತು. ಅದನ್ನು ನೋಡಿ ಆಶ್ಚರ್ಯದ ಜೊತೆಗೆ ಸಂತೋಷವೂ ಆಯಿತು. ಮುಂದಿನ ಕೆಲವೇ ದಿನಗಳಲ್ಲಿ ಪೋಲೀಸ್ ತಪಾಸಣೆ ನಡೆಯಿತು, ಮತ್ತೊಂದು ವಾರದಲ್ಲಿ ಸರ್ಕಾರದ ಮುದ್ರೆ ಇದ್ದ ಪತ್ರ, ಅದರೊಡನೆ ಸೆರೆಮನೆಯ

ಭೇಟಿಮಾಡಬೇಕಾದಾಗ ನಾನು ವಹಿಸಬೇಕಾದ ಎಚ್ಚರ, ಅದಕ್ಕಾಗಿ ನನಗೆ ಅವರು ಕೊಡುವ ಸಂಭಾವನೆ ಇತ್ಯಾದಿಯಾಗಿ ಎಲ್ಲ ವಿವರಗಳನ್ನೂ ಒಳಗೊಂಡ ಪತ್ರವೂ ನನ್ನ ಕೈಸೇರಿತು. ಅಷ್ಟು ದಿನಗಳಲ್ಲಿ ನನಗೆ ತಿಳಿದ ಯಾರಿಗೂ ಸಿಗದೆ ಇದ್ದ ಗೌರವ ನನಗೆ ಸಿಕ್ಕಿದ್ದು ಒಂದು ರೀತಿಯಲ್ಲಿ ಖುಷಿಕೊಟ್ಟಿತು. ನನ್ನ ವಿದ್ಯಾರ್ಹತೆ, ಹಲವು ಕ್ಷೇತ್ರಗಳಲ್ಲಿ ನಾನು ಗಳಿಸಿರುವ ಜ್ಞಾನದ ಜೊತೆಗೆ ನಾನು ಹಲವು ಭಾಷೆಗಳಲ್ಲಿ ಸಂಭಾಷಿಸಬಲ್ಲೆ ಎಂಬ ಅಂಶವೂ ಅವರ ಗಮನವನ್ನು ಸೆಳೆದಿರಬಹುದು ಎನ್ನಿಸಿತು. ಅದು ಬರೇ ಊಹೆ ಮಾತ್ರ! ನನಗೆ ಹಲವು ಭಾಷೆಗಳಲ್ಲಿ ಸಂಭಾಷಿಸುವ ಅರ್ಹತೆಯ ಬಗ್ಗೆ ಯಾವುದೋ ಅರ್ಜಿಯಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಹೇಳಿದ್ದ ನೆನಪು.

ಅಂತೂ ವಿದೇಶಕ್ಕೆ ಬಂದು ನಾನಿದ್ದ ಸಾಹಿತ್ಯಕ ವಾತಾವರಣ ಕಳೆದುಹೋಯಿತೆಂಬ ದುಃಖ ಸ್ವಲ್ಪಮಟ್ಟಿಗೆ ಕಡಿಮೆಯಾಯಿತು. ನನ್ನನ್ನು ನೇಮಕ ಮಾಡಿದ ಕೆಲವೇ ದಿನಗಳಲ್ಲಿ ಒಬ್ಬ ಮಹಿಳೆಗೆ ನನ್ನ ಅಗತ್ಯವಿದೆ ಎಂದು ಹೇಳಿ ಕರೆ ಬಂದಿತು. ನಾನು ಅವರು ಹೇಳಿದ ರೀತಿಯಲ್ಲೇ ಸಿದ್ಧಳಾಗಿ ಹೊರಟೆ. ಚೆಶೈರ್ (Cheshire) ಗೆ ಸೇರಿದ ವಿಂಸ್ಲೋ (Wilmslow) ದಲ್ಲಿರುವ Styal ಸೆರೆಮನೆಯ ಮುಂದಕ್ಕೆ ನನ್ನ ಯಜಮಾನರು ಕರೆದೊಯ್ದು ಬಿಟ್ಟರು.

ಅಲ್ಲಿಂದ ಮುಂದೆ ನಾನು ಹೋಗಿ ನನ್ನ ಪತ್ರ ತೋರಿಸಿದ ಕೊಂಚ ಹೊತ್ತಿನಲ್ಲೇ ಇಬ್ಬರು ಆರಡಿ ಎತ್ತರದ ಭೀಮಕಾಯರು (ಗಾರ್ಡ್ಸ್) ನನ್ನನ್ನು ಅವರೊಡನೆ ಬರಲು ಹೇಳಿದರು. ಕುರಿಯಂತೆ ಹಿಂಬಾಲಿಸಿದೆ. ಒಂದಾದಮೇಲೊಂದು ಬಾಗಿಲುಗಳನ್ನು ದಾಟಿ (ದಾಟುವಾಗಲೆಲ್ಲ ಒಂದೊಂದು ಬಾಗಿಲನ್ನೂ ಬೀಗ ತೆಗೆದು ನಾವು ಒಳಗೆ ಹೋಗುತ್ತಲೇ ಭದ್ರಪಡಿಸಿ ಮತ್ತೆ ಮುಂದುವರಿಯುತ್ತಿದ್ದರು) ಕೊನೆಗೆ ಒಂದು ಕೋಣೆಯಲ್ಲಿ ನನ್ನನ್ನು ಹೋಗಲು ಹೇಳಿ ತಾವು ಹೊರಗೇ ಕಾಯುತ್ತಿರುವುದಾಗಿ ಹೇಳಿದರು. ಕಾರಣ ಅಲ್ಲಿರುವ ಖೈದಿಯೇನಾದರೂ ನನ್ನ ಮೇಲೆ ಆಕ್ರಮಣ ಮಾಡಿದರೆ ನನ್ನನ್ನು ರಕ್ಷಿಸಲು! ಅದನ್ನು ಹೇಳಿದ ಕೂಡಲೆ ಒಳಗೆ ಹೋಗಲು ಸ್ವಲ್ಪ ಅಂಜಿಕೆಯಾಯಿತು. ಆದರೆ ಮುಂದಿಟ್ಟ ಹೆಜ್ಜೆ ಹಿಂದಿಡುವಂತಿಲ್ಲ. ಧೈರ್ಯ ಮಾಡಿ ಒಳಗೆ ಹೋದೆ. ಅಲ್ಲಿದ್ದ ಹೆಂಗಸನ್ನು ಮಾತನಾಡಿಸಿದೆ. ಅವಳ ಮೇಲೆ ಗಂಡನನ್ನು ಹೊಡೆದು (ಒಂದಲ್ಲ ನಾಲ್ಕಾರು ಬಾರಿ) ಘಾಸಿಗೊಳಿಸಿದ ಆರೋಪವಿತ್ತು. ಆಕೆ ಅವನನ್ನು ಕೊಲ್ಲಲೂ ಪ್ರಯತ್ನ ಮಾಡಿದ್ದಳಂತೆ. ಇದು ನನಗೆ ಮೊದಲೇ ತಿಳಿದಿತ್ತು. ಅಂತಹ ದುಷ್ಟ ಹೆಂಗಸಿನ ಕೂಡ ಮಾತನಾಡಿ ಅವಳನ್ನು ಸಂತೈಸಿ, ಸುಧಾರಿಸಿ ಹೊಸಬಾಳು ಬಾಳುವಂತೆ ಅವಳಿಗೆ ನಾನು ಬುದ್ಧಿ ತಿಳಿಸಬೇಕಾಗಿತ್ತು. ಇದು ಒಂದು ರೀತಿಯಲ್ಲಿ ನನಗೆ ಸವಾಲಾಗಿತ್ತಾದರೂ ಹಲವಾರು ವರ್ಷಗಳು ಮಕ್ಕಳಿಗೆ ಪಾಠ ಹೇಳಿದ್ದರಿಂದ ತಾಳ್ಮೆ ಸಾಕಷ್ಟಿತ್ತು. ಹಾಗಾಗಿ ಹೇಗಾದರೂ ಆಕೆಯನ್ನು ಸರಿಹಾದಿಗೆ ತರಬೇಕು ಎಂದು ನಿರ್ಧರಿಸಿದೆ. ನನ್ನ ದೃಢ ನಿಶ್ಚಯ ಕೆಲಸಮಾಡಿತು. ಮೂರು ನಾಲ್ಕು ಭೇಟಿಗಳ ನಂತರ ಆಕೆಯ ಮನಸ್ಸು ಪಕ್ವಗೊಂಡಿತು. ಅವಳ ಬಾಳ್ವೆ ಸುಧಾರಿಸಿತು ಎಂದಿಟ್ಟುಕೊಳ್ಳಿ. ನನ್ನನ್ನು ಹೇಗೆ ಕರೆದೊಯ್ದಿದ್ದರೋ ಅದೇ ರೀತಿ ಹಿಂದಕ್ಕೆ ಕರೆದುತಂದರು. ನಾನು ಭೇಟಿಮಾಡಿದ ಖೈದಿಗಳಿಗಾಗಲೀ ಅಲ್ಲಿ ಕೆಲಸಮಾಡುವ ಮತ್ತಾರಿಗೇ ಆಗಲಿ ನಮ್ಮ ಹೆಸರು, ವಿಳಾಸ ಅಥವಾ ಫೋನ್ ನಂಬರ್ ಏನನ್ನೂ ಕೊಡುವಂತಿರಲಿಲ್ಲ. ಅದು ನಮ್ಮ ರಕ್ಷಣೆಗೋಸ್ಕರವಾಗಿ!

ಹೀಗೇ ಹಲವಾರು ಕೈದಿಗಳನ್ನು ಭೇಟಿಮಾಡುವ ಅವಕಾಶ ನನಗೆ ಜೀವನದ ಒಂದು ದೊಡ್ಡ ಪಾಠವಾಗಿತ್ತು, ಎಲ್ಲದಕ್ಕಿಂತ ಹೆಚ್ಚು ನನಗೆ ನನ್ನಷ್ಟಕ್ಕೆ ಹೆಮ್ಮೆ ಎನಿಸುತಿದ್ದುದು ನನ್ನ ಎಡಬಲಗಳಲ್ಲಿ ಇಬ್ಬರು ಬಂದೂಕು

ಧಾರಿಗಳನ್ನು ರಕ್ಷಣೆಗಾಗಿ ಹೊಂದಿ ಸೆರೆಮನೆಯೊಳಕ್ಕೆ ಹೋಗಿಬರುವುದೇ ಆಗಿತ್ತು, ಎಂದರೆ ನಗಬೇಡಿ. ನನ್ನಷ್ಟಕ್ಕೆ ನಾನೇ ಇಂಗ್ಲೆಂಡಿನ ರಾಣಿಯಾಗಿಬಿಡುತ್ತಿದ್ದೆ, ಅಷ್ಟು ಹೊತ್ತು !

ಹೀಗೆ ನಾನು ಒಳಹೋಗಿ ಬರುವಾಗ ಎಷ್ಟೋ ಕೊಠಡಿಗಳನ್ನು ದಾಟಿಹೋಗಬೇಕಾಗಿತ್ತು. ನಮ್ಮ ದೇಶದಲ್ಲಿ ಸಿನೆಮಾದಲ್ಲಿ ತೋರಿಸುವ ಸೆರೆಮನೆಗಳನ್ನು ನೋಡಿದ್ದ ನನಗೆ ಇಲ್ಲಿ ಎಲ್ಲ ಅನುಕೂಲಗಳಿಂದ ಸಜ್ಜಾಗಿದ್ದ ಕೊಠಡಿಗಳನ್ನು ನೋಡಿದಾಗ ಬಹಳ ಆಶ್ಚರ್ಯವಾಯಿತು. ಆದರೆ ಹೊರಜಗತ್ತಿಗೂ ಇಲ್ಲಿಗೂ ಒಂದೇ ವ್ಯತ್ಯಾಸ. ಎಲ್ಲ ಕಡೆಯಿಂದಲೂ ಚಾವಣಿ ಹೊದಿಸಿದ ಸ್ಥಳಗಳು ಇವು. ಇವನ್ನು ದಾಟಿ ಹೋಗುವ ಯೋಚನೆಯೂ ಬಾರದಷ್ಟು ಬಿಗಿ. ನನಗೆ ತಡೆಯದೇ ನನ್ನನ್ನು ಕರೆದೊಯ್ಯುತ್ತಿದ್ದವರನ್ನು ಕೇಳಯೇಬಿಟ್ಟೆ 'ಇದೇನು, ಇಷ್ಟೊಂದು ಅನುಕೂಲಗಳನ್ನು ಮಾಡಿಕೊಟ್ಟಿದ್ದಾರೆ?' ಅವರು ಅದಕ್ಕೆ ಕೊಟ್ಟ ಉತ್ತರ ನನ್ನನ್ನು ಮತ್ತೂ ಆಶ್ಚರ್ಯದಲ್ಲಿ ನೂಕಿತು. ಅವರೆಂದರು "Madam, these people will have complaints for the TV not working or some other fecility is not provided". ಹೊತ್ತುಹೊತ್ತಿಗೆ ತುತ್ತುಕೊಟ್ಟು, ಎಲ್ಲ ಸೌಕರ್ಯಗಳನ್ನೂ ಕೊಟ್ಟು ಪ್ರತ್ಯೇಕ ಕೊಠಡಿಯನ್ನೂ ಕೊಟ್ಟರೆ ತಪ್ಪುಮಾಡಿ ಶಿಕ್ಷೆ ಅನುಭವಿಸುವವರಿಗೆ ಇದೊಂದು ವರವಲ್ಲವೇ ಎಂದು ಅನ್ನಿಸಿತು. ನಮ್ಮನ್ನು ಬ್ರಿಟಿಷರು ಆಳುತ್ತಿದ್ದಾಗ ರಾಜಕೀಯ ಖೈದಿಗಳನ್ನು ನಡೆಸಿಕೊಳುತ್ತಿದ್ದ ರೀತಿಯನ್ನು ಓದಿ ತಿಳಿದಿದ್ದ, ನನ್ನ ತಂದೆಯವರ ಸ್ವಂತ ಅನುಭವವನ್ನು ಕೇಳದ್ದ ನನಗೆ ಅವರೇ ಇವರೇ? ಎಂದು ಮೂಗಿನ ಮೇಲೆ ಬೆರಳಿಡುವಂತಾಯಿತು. ಅಷ್ಟೇ ಅಲ್ಲ, ತಮ್ಮದೇ ದೇಶದ ಪ್ರಜೆಗಳಾದ ಇವರನ್ನು ನಡೆಸಿಕೊಳ್ಳುವ ಈ ರೀತಿಗೂ, ನಮ್ಮನ್ನು ನಡೆಸಿಕೊಳ್ಳುತಿದ್ದ ರೀತಿಗೂ ಅಜಗಜಾಂತರ!

ಇನ್ನೂ ಮುಂದುವರೆದು ಹೋದಂತೆ ಮಕ್ಕಳಿರುವ ಹೆಂಗಸರನ್ನು ಬಂಧಿಸಿರುವ ಕೊಠಡಿಗಳಿದ್ದವು. ಅವುಗಳಲ್ಲಿ ಅಡಿಗೆ ಮನೆ ಸಹ ಇದ್ದಿತು. ಅಲ್ಲೊಬ್ಬ ಹೆಂಗಸು ಅಡಿಗೆ ಮಾಡುತ್ತಿದ್ದಳು. ನಾನು ಇದೇನೆಂದು ಕೇಳಿದಾಗ ಅವರು ಕೊಟ್ಟ ಉತ್ತರ ನನ್ನನ್ನು ದಂಗುಬಡಿಸಿತು. ಆ ಹೆಂಗಸಿನ ಮಗುವಿನ ಜನ್ಮದಿನವಂತೆ. ಅಂದು ಅವಳೇ ತನಗೆ ಬೇಕಾದ ಅಡಿಗೆ ಮಾಡಿ ಮಗುವಿಗೆ ಬಡಿಸಬಹುದಂತೆ! ಇದೆಲ್ಲ ನನಗೆ ಕನಸಿನಂತೆ ತೋರುತ್ತಿತ್ತು. ಇಷ್ಟೆಲ್ಲ ಸೌಕರ್ಯವಿರುವ ಈ ಸ್ಥಳಗಳನ್ನು ಸೆರೆಮನೆ ಎಂದಾದರೂ ಯಾಕೆ ಕರೆಯುತ್ತಾರೆ ಎಂದುಕೊಂಡೆ. ಆದರೆ ಆ ನಂತರ ತಿಳಿಯಿತು. ಈ ರೀತಿಯ ವ್ಯವಸ್ಥೆಗಳು ಖೈದಿಗಳ ಅಪರಾಧದ ಮೇಲೆ ನಿಶ್ಚಯವಾಗುತ್ತದೆ ಎಂದು. ಅದನ್ನು ಕುರಿತು ಮುಂದೆ ಬರೆಯುತ್ತೇನೆ.

ನಮ್ಮ ಮೇಲೆ 200 ವರ್ಷಗಳ ದಬ್ಬಾಳಿಕೆ ನಡೆಸಿ, ತುಂಬಿದ ಗರ್ಭಿಣಿ ಹೆಣ್ಣುಮಗಳು ರಾಜಕೀಯ ಖೈದಿಯಾದಾಗ ಅವಳ ಹೆರಿಗೆಗೆ ಏರ್ಪಾಟು ಮಾಡುವುದಿರಲಿ, ಅವಳನ್ನು ಕೊಂಡೊಯ್ದು ದೂರ ಕಾಡಿನಲ್ಲಿ ಯಾರ ನೆರವೂ ಸಿಗದ ಸ್ಥಳದಲ್ಲಿ ಬಿಟ್ಟು ಬಂದದ್ದನ್ನು ಓದಿದ್ದ ನನಗೆ ರಕ್ತಕುದಿಯಿತು. ಇಷ್ಟಾಗಿ ಅವರನ್ನು ಸುಧಾರಿಸಿ ಮನೆಗೆ ಕಳುಹಿಸಲು ನನ್ನಂತಹವರನ್ನು ನೇಮಿಸಿಕೊಂಡು ಸರ್ಕಾರ ಅವರ ಭವಿಷ್ಯದ ಬಗೆಗೆ ಮುತುವರ್ಜಿವಹಿಸುತ್ತದೆ. ನಂತರ ಅವರ ಜೀವನ ಸುಗಮವಾಗಿ ನಡೆಯುತ್ತಿರುವುದನ್ನು ಖಾತ್ರಿ ಮಾಡಿಕೊಳ್ಳುತ್ತದೆ. ಒಂದು ರೀತಿಯಲ್ಲಿ ಇದು ಆರೋಗ್ಯಕರ ಸಮಾಜದ ಸೃಷ್ಟಿಗೆ ಒತ್ತುಕೊಡುತ್ತದೆ. ಖಾಯಿಲೆ ಬಂದ ಇಂತಹ ಸಾಮಾಜಿಕ ರೋಗಿಗಳನ್ನು ಸುಧಾರಿಸುವುದರಿಂದ ಸಮಾಜ ಆರೋಗ್ಯವಂತ ವಾಗುತ್ತದೆ . ಅದಕ್ಕೆ ನನ್ನದೂ ಒಂದಿಷ್ಟು ಕಾಣಿಕೆ ಎನಿಸಿ ತೃಪ್ತಿಯಾಯಿತು.

***

ಸಮನ್ವಯ ಸಮಿತಿ - ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ ೨೦೯
ಅಧ್ಯಕ್ಷರ ಅನಿಸಿಕೆಗಳು

– ಸುಜಾತಾ ರವೀಶ್

ಸಸಕಸ ಸಾಹಿತ್ಯ ವೇದಿಕೆಯಲ್ಲಿ 209ನೇ ಸಾಹಿತ್ಯ ದಾಸೋಹದ ಅಧ್ಯಕ್ಷಳಾಗಿ ಆಯ್ಕೆಗೊಂಡಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಬಳಗ ಸೇರಿದಾಗಿನಿಂದ ಎಲ್ಲಾ ದಾಸೋಹಗಳಲ್ಲಿ ಭಾಗವಹಿಸಿದ್ದೇನೆ. ಅವುಗಳ ಅಧ್ಯಕ್ಷರುಗಳ ಅನುಪಮ ಸಾಧನೆ ಹಾಗೂ ಜ್ಞಾನ ಇವುಗಳನ್ನು ಕಂಡು ಹೆಮ್ಮೆ ಹಾಗೂ ಅಚ್ಚರಿಪಟ್ಟಿದ್ದೇನೆ. ಈ ಸಾಲಿನಲ್ಲಿ ನನ್ನನ್ನು ಗುರುತಿಸಿಕೊಳ್ಳಲು ನನಗೆ ಖಂಡಿತ ಸಂಕೋಚ ಎನಿಸುತ್ತಿದೆ. ಈ ವಿಷಯವನ್ನು ಸಂಚಾಲಕರಾದ ಶ್ರೀ ಮಹಾಬಲ ಅವರಿಗೆ ತಿಳಿಸಿದೆ. ಅವರು ಪರವಾಗಿಲ್ಲ ಎಂದು ಧೈರ್ಯ, ಭರವಸೆ ತುಂಬಿದ್ದರಿಂದ ಈ ಗುರುತರ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸ್ವಲ್ಪಮಟ್ಟಿನ ಧೈರ್ಯ ಬಂದಿದೆ. ಹೇಗೆ ನಿಭಾಯಿಸುವೆನೋ ತಿಳಿದಿಲ್ಲ .

ಈ ಬಳಗಕ್ಕೆ ನನ್ನನ್ನು ಪರಿಚಯಿಸಿದವರು ನನ್ನ ಪ್ರಿಯ ಗೆಳತಿ ಶೀಲಾ ಭಂಡಾರ್ಕರ್ ಅವರು. ತುಂಬಾ ಪ್ರಬುದ್ಧ ಸಾಹಿತಿಗಳಿರುವ ಬ್ಯಾಂಕಿನ ನೌಕರರು ಸೇರಿ ಮಾಡಿಕೊಂಡಿರುವ ಒಂದು ವಾಟ್ಸಾಪ್ ಬಳಗವಿದೆ. ಅದಕ್ಕೆ ನಿಮ್ಮನ್ನು ಸೇರಿಸಲೇ ಎಂದಾಗ ನಾನೇನೋ ಹೂಂ ಅಂದುಬಿಟ್ಟಿದ್ದೆ. ಇಲ್ಲಿಗೆ ಸೇರಿದ ಮೇಲೆ ತಿಳಿದಿದ್ದು ಇಲ್ಲಿನ ಸದಸ್ಯರ ಅಗಾಧ ಸಾಧನೆ ಹಾಗೂ ಯಶಸ್ಸುಗಳ ವಿವರ. ದಂಗಾಗಿಹೋಗಿದ್ದೆ. ಈ ವಿದ್ವತ್ ಸಭೆಗೆ ನಾನು ಯೋಗ್ಯಳೇ ಎಂಬ ಸಂದೇಹವು ಕಾಡಿದ್ದೂ ಸುಳ್ಳಲ್ಲ. ಈ ಗಂಧದ ವನದಲ್ಲಿ ಒಂದು ಗರಿಕೆಯ ಹುಲ್ಲಾಗಿ ಇದ್ದರೂ ಸರಿಯೇ ನಾನು ಪಡೆದುಕೊಳ್ಳುವ ಜ್ಞಾನ ಮತ್ತು ಅನುಭವ ವಿಶೇಷ ಎಂದೆನಿಸಿತು. ಆಗಲೂ ಅದನ್ನೇ ಹೇಳಿದ್ದೆ. ಈಗಲೂ ಅದೇ ಭಾವನೆ ಇದೆ. ಮತ್ತೊಂದು ನಾನು ಗಮನಿಸಿದ ಅಂಶವೆಂದರೆ ಒಬ್ಬರಿಗೊಬ್ಬರಿಗೆ ಇರುವ ಸಹಕಾರ ಭಾವ ಮತ್ತು ಪ್ರೋತ್ಸಾಹಿಸುವ ಗುಣ. ಅಕಸ್ಮಾತ್ ಏನಾದರೂ ತಪ್ಪಾದರೂ ಸಹಿತ ವೈಯಕ್ತಿಕವಾಗಿ ಬಂದು ತಿದ್ದುವ ಸಜ್ಜನತೆ. ಇದೆಲ್ಲವನ್ನು ಪ್ರತ್ಯಕ್ಷ ಕಂಡು ಅನುಭವಿಸಿರುವ ನಾನು, ಈ ಸಹೃದಯಿ ಬಳಗದಲ್ಲೊಂದಾಗಿಸಿದ್ದಕ್ಕೆ ಗೆಳತಿ ಶೀಲಾಗೆ ಮತ್ತು ಆತ್ಮೀಯವಾಗಿ ವ್ಯವಹರಿಸುವ ಬಳಗದ ಎಲ್ಲಾ ನಿರ್ವಾಹಕರಿಗೆ ಮತ್ತು ನನ್ನೆಲ್ಲಾ ಸಸ್ನೇಹೀ ಸದಸ್ಯರಿಗೆ ಎಷ್ಟು ಧನ್ಯವಾದಗಳನ್ನು ಸಲ್ಲಿಸಿದರೂ ಸಾಲದು. ಇನ್ನೊಂದು ಇಲ್ಲಿನ ಅತ್ಯಂತ ಒಳ್ಳೆಯ ಅಂಶವೆಂದರೆ ಶಿಸ್ತು. ಮುಖ್ಯ ನಿರ್ವಾಹಕರಾದ ಶ್ರೀ ರವೀಂದ್ರ ಅವರಂತೂ ಬಳಗದ ಶಿಸ್ತು ಪಾಲಿಸಲು ಬಹಳ ಮುಂಜಾಗರೂಕತೆ ಹಾಗೂ ಶ್ರಮ ವಹಿಸುತ್ತಾರೆ. ಹಾಗಾಗಿಯೇ ಅತಿ ಉತ್ಕೃಷ್ಟ ರೀತಿಯಲ್ಲಿ ಬಳಗ ನಡೆದುಕೊಂಡು ಬರುತ್ತಿದೆ. ನನ್ನ ಅರಿವಿನ ಪರಿಧಿಯಲ್ಲಿರುವ ಎಲ್ಲಾ ಬಳಗಗಳಲ್ಲಿ ಅತ್ಯಂತ ಶಿಸ್ತುಬದ್ಧ ಹಾಗೂ ಬಹು ಯಶಸ್ವಿ ಬಳಗವೆಂದರೆ ಇದೇ. ಈ ಹಿಂದೆ ಖೋಕ್ ಕಾದಂಬರಿ ಒಂದನ್ನು ಬರೆಸಿ ಅದೀಗ ಪ್ರಕಟಣೆಯ ಹಂತದಲ್ಲಿದೆ ಎಂದು ತಿಳಿಯಿತು. ಅಲ್ಲದೆ ಈ ಪ್ರತೀ ತಿಂಗಳ ಸಾಹಿತ್ಯ ದಾಸೋಹ ಪ್ರತಿಯೊಬ್ಬರಿಗೂ ಮನೆಯಲ್ಲೇ ಕುಳಿತು ಸಾಹಿತ್ಯ ಸಮ್ಮೇಳನದ ಪ್ರಯೋಜನ ಪಡೆಯುವಂತೆ ಮಾಡುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ಈ ವರೆಗೆ 209 ದಾಸೋಹಗಳು ನಡೆಯಲ್ಪಟ್ಟಿವೆ. ಮತ್ತೊಂದು ಗಮನಿಸಬೇಕಾದ ವಿಷಯ ಈ ದಾಸೋಹದ ಪ್ರಸ್ತುತಿಗಳು ಮತ್ತು ಪೂರಕ ಚಿತ್ರಗಳನ್ನು ಸೇರಿಸಿ ಪಿ ಡಿ ಎಫ್ ಮಾಡುವ ಶ್ಲಾಘನೀಯ ಕೆಲಸವನ್ನು ಶ್ರೀ ಶೃಂಗೇಶ್ವರ ಶರ್ಮ ಅವರು ನಡೆಸಿಕೊಂಡು ಬರುತ್ತಿದ್ದಾರೆ. ಅದೂ ಸಹ 38ರ ವರೆಗೆ ಬಂದಿದೆ. ಸಾಹಿತ್ಯ ಪರಿಷತ್ತು, ಅದರ ಅಂಗ ಸಂಸ್ಥೆಗಳು ಅಥವಾ ದೊಡ್ಡ ಸಾಹಿತ್ಯಿಕ ಸಂಘಗಳು

ನಡೆಸುವ ಕೆಲಸಗಳಿಗಿಂತ ಇದು ಯಾವುದಕ್ಕೂ ಕಡಿಮೆ ಇಲ್ಲ. ಮನೆಯಲ್ಲಿ ಕುಳಿತು ಸಾಹಿತ್ಯ ಪರಿಚಾರಿಕೆ ನಡೆಸುವ ಹಾಗೂ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಅರಿಯುವ, ಬೇರೆಯವರ ಬರವಣಿಗೆ ಓದುವ, ತಿದ್ದಿಕೊಳ್ಳುವ ಅವಕಾಶ ಅಂಗೈನ ತುದಿಯಲ್ಲಿಯೇ ಒದಗಿಸಿಕೊಟ್ಟ ಬಳಗಕ್ಕೆ ಎಲ್ಲ ಸದಸ್ಯರು ಖಂಡಿತ ಆಭಾರಿಗಳಾಗಿರಲೇಬೇಕು. ಇತ್ತೀಚಿಗೆ ನಡೆದ ತನಗ ಉತ್ಸವವು ಅತ್ಯಂತ ಭಾರೀ ಮೆಚ್ಚುಗೆಪಡೆದಿದ್ದು ಹೊಸ ಪ್ರಕಾರ ಒಂದನ್ನು ಕಲಿತ ತೃಪ್ತಿ ತಂದಿತು. ಕನ್ನಡ ಮಾಸದಲ್ಲಿ ನಡೆದ ಪುಸ್ತಕಗಳ ಪರಿಚಯ ತುಂಬಾ ಚೆನ್ನಾಗಿ ಮೂಡಿಬಂದು ಅದಕ್ಕಾಗಿಯಾದರೂ ಐದು ಪುಸ್ತಕಗಳನ್ನು ಓದಿದಂತಹ ಸುಕೃತ ನಮಗೆ ಒದಗಿಸಿ ಕೊಟ್ಟಿತು.

ಇನ್ನು ನನ್ನ ಜೀವನದಲ್ಲಿ ಅತ್ಯಂತ ಹೆಮ್ಮೆಯ ಕ್ಷಣ ಎಂದು ನಾನಂದುಕೊಂಡಿರುವ ಈ ಅಧ್ಯಕ್ಷ ಸ್ಥಾನದಿಂದ ಮಾತನಾಡಬೇಕೆಂದರೆ ಕನ್ನಡಿಗರ ಅಭಿಮಾನ ಶೂನ್ಯತೆ ಹಾಗೂ ನಿಧಾನವಾಗಿ ಸ್ವಚ್ಛ ಶುದ್ಧ ಕನ್ನಡ ಕಣ್ಮರೆಯಾಗುತ್ತಿರುವ ಬಗ್ಗೆ ಒಂದೆರಡು ಮಾತು ಹೇಳಬೇಕೆನಿಸುತ್ತಿದೆ.

ಭಾಷೆ ಬಳಸುವುದರಿಂದ ಮಾತ್ರ ಮುಂದುವರೆಯುತ್ತದೆ ಹೊಸ ಹೊಸ ಪದಗಳನ್ನು ಸೇರಿಸಿಕೊಂಡು ಶ್ರೀಮಂತ ವಾಗುತ್ತಾ ಹೋಗುತ್ತದೆ .ಆದರೆ ಕನ್ನಡದ ವಿಷಯದಲ್ಲಿ ಹಾಗೆ ನಡೆಯದಿರುವುದು ತುಂಬಾ ವಿಷಾದನೀಯ ಸಂಗತಿ. ಪಟ್ಟಣಗಳಲ್ಲಿ ಇರಲಿ, ಹಳ್ಳಿಗಳಲ್ಲೂ ಸಹ ಕೆಲವೊಂದು ಇಂಗ್ಲಿಷ್ ಪದಗಳು ಎಷ್ಟು ಆಳವಾಗಿ ಬೇರೂರಿದೆ ಎಂದರೆ ಇನ್ನು ಕೆಲವು ದಿನಗಳಲ್ಲಿ ಸಾಮಾನ್ಯ ಕನ್ನಡ ಪದಗಳ ಅರ್ಥವೇ ಮುಂದಿನ ತಲೆಮಾರಿಗೆ ಗೊತ್ತಾಗುವುದಿಲ್ಲ. ಸ್ವಚ್ಛ, ಪೂರ್ಣ ಕನ್ನಡದಲ್ಲಿ ಮಾತನಾಡಿದರೆ ಇದು ಯಾವ ಭಾಷೆ ಎಂದೂ ಕೇಳಿಬಿಡಬಹುದು. ಇತ್ತೀಚೆಗೆ ಬೆಂಗಳೂರಿನ ನಗರ ಸಾರಿಗೆ ವಾಹನದಲ್ಲಿ ಅರ್ಧ ಗಂಟೆ ಪ್ರಯಾಣ ಮಾಡಿದಾಗ ಇಂಗ್ಲಿಷ್ ಬಳಸದೆ ಮಾತನಾಡದೆ ಇದ್ದುದು ಕಾಣಿಸಲೇ ಇಲ್ಲ. ಅಷ್ಟು ಆಂಗ್ಲ ಭಾಷೆ ನಮ್ಮ ಸಾಮಾನ್ಯ ಜನಜೀವನದ ಭಾಷೆಯಲ್ಲಿ ಬೆರೆತುಬಿಟ್ಟಿದೆ. ಭಾಷೆ ಮಾಯವಾಗಲು ಅಥವಾ ಸಾಯಲು ಬೇರೇನು ಮಾಡಬೇಕಿದ್ದಿಲ್ಲ. ಅದನ್ನು ಕಲಬೆರಕೆ ಮಾಡುತ್ತಾ ಬಳಸದೆ ಇದ್ದರೆ ಅಷ್ಟೇ ಸಾಕು. ಈಗ ನಾವು ಕನ್ನಡಮ್ಮನ ಕತ್ತು ಹಿಸುಕುತ್ತಿರುವುದು ಈ ರೀತಿಯಿಂದಲೇ. ಕೆಲವೊಂದು ಉದಾಹರಣೆಳನ್ನು ನೋಡಿ:

ಹಳ್ಳಿಗೆ ಬಂದ ಆಂಗ್ಲ ಪದಗಳು...

'ಅಜ್ಜಿ ನಿಮ್ ಮೊಮ್ಮಗ ಈಗೆಲ್ಲಿ ಇರೋದು' ಎಂದು ಕೇಳಿದರೆ, ಈಗ ಅಜ್ಜಿ ಪೇಟೆ ಎನ್ನುವ ಪದ ಬಳಸುತ್ತಿಲ್ಲ ಬದಲಿಗೆ 'ಸಿಟೀಲಿ ಇದಾನೆ' ಎನ್ನುತ್ತಾರೆ.

'ಏನ್ ಸಿಂಗಾರ ಅವಳದ್ದು ವೈಯಾರ ಅವಳದ್ದು' ಎನ್ನುತ್ತಿದ್ದವರೆಲ್ಲ ಬದಲಿಗೆ 'ಏನ್ ಸ್ಟೈಲ್ ಕಲಿತಿದ್ದಾಳಪ್ಪ' ಎನ್ನುತ್ತಾರೆ.

'ಏನೋ ಬ್ಯುಸಿ ಇರ್ಬೇಕು, ಆಮೇಲೆ ಫೋನ್ ಮಾಡು' ಎನ್ನುವ ಪದ ಬಳಕೆ ಹಳ್ಳಿಯ ಜನರ ಬಾಯಲ್ಲಿ ಸಾಮಾನ್ಯವಾಗಿಬಿಟ್ಟಿದೆ.

ಇದೆಲ್ಲ ದಿನನಿತ್ಯದ ಜೀವನದಲ್ಲಿ ಸಾಮಾನ್ಯವಾಗಿಹೋಗಿದೆ. ಹಳ್ಳಿ ಹಳ್ಳಿಯಲ್ಲೂ 'ಎಕ್ಸಾಂ ಈಝಿ ಇತ್ತು' ಎನ್ನುವ ಮಕ್ಕಳ ಮುಗ್ಧ ನಾಲಿಗೆಯೇ, 'ಪರೀಕ್ಷೆ ಮತ್ತು ಸುಲಭ' ಎನ್ನುವ ಪದಗಳನ್ನು ಮೂಲೆಗುಂಪು ಮಾಡುತ್ತಿರುವುದು ಒಳ್ಳೆಯ ಲಕ್ಷಣವಲ್ಲ. ಹೀಗೆ ಅನೇಕ ಪದಗಳು ಕಾಲಕ್ರಮೇಣ ಮೂಲೆಗುಂಪು ಸೇರುತ್ತ, ಬಳಕೆಗೆ ಒಳಪಡದೆ ಹೋದಾಗ ಕನ್ನಡದ ಶುದ್ಧತೆಯ ಕುರಿತು ಮಾತನಾಡುವ ಅರ್ಹತೆಯೇ ನಮಗೆ ಇಲ್ಲವಾಗುತ್ತದೆ.

'ಅಟ್ ಲೀಸ್ಟ್ ಎನ್ನುವ ಪದಕ್ಕೆ ಕನ್ನಡದಲ್ಲಿ ಏನೆಂದು ಕರೆಯುತ್ತಾರೆ?' ಎಂಬ ಪ್ರಶ್ನೆಯನ್ನು ಬೆಂಗಳೂರಿನಲ್ಲಿರುವ ಕನ್ನಡ ಕಂದಮ್ಮಗಳನ್ನು ಕೇಳಿ ನೋಡಿ, ಗೊತ್ತಿಲ್ಲ ಎಂದೇ ಹೇಳುತ್ತಾರೆ. ಕಡೇಪಕ್ಷ ಈ ಪದದ ಅರಿವೂ ಇಲ್ಲ.

ಕನ್ನಡ ಬಳಸುವ ವಿಚಾರಧಾರೆಗೆ ಹೆಗಲಾಗಿ ಇರಬೇಕಾಗಿದ್ದ ಭಾಷಾಭಿಮಾನ ಕಾಲೊರಸಾಗಿ ಅವಸಾನ ಕಾಣುತ್ತಿರುವುದು ಎಷ್ಟು ಶೋಚನೀಯ ಎಂಬುದು ಈಗಲಾದರೂ ನಮಗೆ ಅರ್ಥವಾಗಬೇಕು.

ನಟ ನಟಿಯರ ಖಾಸಗೀ ಸಮಾರಂಭಗಳನ್ನು ದಿನವಿಡೀ ಪ್ರಸಾರ ಮಾಡುವ ವಾಹಿನಿಗಳು ಕನ್ನಡಕ್ಕೆ, ಸಾಹಿತ್ಯಕ್ಕೆ ಸಂಬಂಧಪಟ್ಟ ಸಮಾರಂಭಗಳಿಗೆ ಎಳ್ಳಷ್ಟಾದರೂ ಪ್ರಾಮುಖ್ಯತೆ ಕೊಡುತ್ತಿದ್ದಾರೆಯೇ? ಕನ್ನಡ ಸಾಹಿತ್ಯ ಸಮ್ಮೇಳನ ಪ್ರಸಾರಕ್ಕೆ ಮೀಸಲಿರಿಸಿದ ಅವಧಿ ಎಷ್ಟು? ಕೇಳಿದರೆ ಟಿಆರ್‌ಪಿ ಇಲ್ಲ ಎಂಬ ಕಾರಣ. ಹಾಗಾದರೆ ಕನ್ನಡ ಪ್ರೀತಿ, ಅಭಿಮಾನಗಳು ಹೃದಯಾಂತರಾಳದಿಂದ ಹೊರಬರದೆ ನಾಲಿಗೆ ತುದಿಯ ಮಾತುಗಳಾಗಿ ಉಳಿಯುತ್ತಿರುವುದೇ ಎಂಬ ಅನುಮಾನ ಬರುವುದಂತೂ ಸುಳ್ಳಲ್ಲ .

ಇನ್ನು ಇಂದಿನ ಪ್ರಸ್ತುತಿಗಳ ಬಗ್ಗೆ ಗಮನ ಹರಿಸೋಣ. ಇಂದಿನ ದಾಸೋಹದಲ್ಲಿ ಸಂಖ್ಯೆ ಕಡಿಮೆಯಿದ್ದರೂ ವೈವಿಧ್ಯತೆ ಮತ್ತು ಗುಣಮಟ್ಟಗಳಲ್ಲಿ ಶ್ರೀಮಂತವಾಗಿದ್ದು, ಆಕರ್ಷಕತೆ ಕಾಪಾಡಿಕೊಳ್ಳಲು ಸಫಲವಾಗಿವೆ ಎಂದು ಹೇಳಲು ಬಹಳ ಸಂತಸ ಮತ್ತು ಹೆಮ್ಮೆಯೆನಿಸುತ್ತದೆ.

(1) ಮೊದಲನೆಯದಾಗಿ, ಶ್ರೀ ಕೆ.ಆರ್.ವೆಂಕಟೇಶ್ (ಕಾವ್ಯನಾಮ: ಮನೋಹಂಸ) ಇವರ ಅಕ್ಷರ 'ಕಲಿಕೆ' ಎಂಬ ಸ್ವರಚಿತ ಕವನ. ಅದನ್ನು ಸುಶ್ರಾವ್ಯವಾಗಿ ಹಾಡಿ ನಮ್ಮೆಲ್ಲರ ಮನ ಮುದಗೊಳಿಸಿದ್ದಾರೆ. ತುಂಬಾನೇ ಒಳ್ಳೆಯ ರಚನೆ. ಓದು ಬರಹದ ಪ್ರಾಮುಖ್ಯತೆಯನ್ನು ಎತ್ತಿ ಹೇಳುವ ಈ ಪದ್ಯದಲ್ಲಿ ಸರ್ವೇಸಾಮಾನ್ಯವಾಗಿರುವ ನಾನು ಈಗ ತಾನೇ ಹೇಳಿದ ಆಂಗ್ಲ ಭಾಷೆಯ ಪದಗಳು ಅತ್ಯಂತ ಸಹಜವಾಗಿ ಸೇರಿಕೊಂಡಿರುವುದನ್ನು ಗಮನಿಸಬಹುದು. ಬಸ್ಸು, ಬ್ಯಾಂಕು, ಚಲನ್ ಇತ್ಯಾದಿ. ವಿಷಯ ನಿರೂಪಣೆ ತುಂಬಾ ಸೊಗಸಾದ ಪದಗಳಲ್ಲಿ ಮೂಡಿಬಂದಿದೆ. ಗೇಯತೆಯ ಗುಣ ಹೊಂದಿರುವುದಂತೂ ಅವರು ಹಾಡಿರುವ ರೀತಿಯಲ್ಲೇ ಸ್ಪಷ್ಟವಾಗುತ್ತದೆ .ಮತ್ತಷ್ಟು ಸುಂದರ ರಚನೆಗಳು ತಮ್ಮಿಂದ ಬರಲಿ ಎಂದು ಹಾರೈಸುವೆ.

(2) ಶ್ರೀ ಗಣಪತಿ ಹೆಗಡೆಯವರ 'ಅಲಂಕಾರ' ಲೇಖನ. ಕಾವ್ಯಕ್ಕೆ ಶೋಭೆ ತರುವ ಗುಣ ಹಾಗೂ ಆ ಶೋಭೆಯನ್ನು ಅತಿಶಯಗೊಳಿಸುವ ಅಲಂಕಾರ ಇವುಗಳ ಬಗ್ಗೆ ವಿಷದವಾಗಿ ಈ ಲೇಖನದಲ್ಲಿ ಹೇಳುತ್ತಾರೆ. ಚಂದ್ರ ಹಾಗೂ ಮುಖ ಈ ಎರಡು ವಸ್ತುಗಳನ್ನು ಇಟ್ಟುಕೊಂಡು ವಿವಿಧ ರೀತಿಯ ಅಲಂಕಾರಗಳಾದ ಉಪಮಾಲಂಕಾರ, ರೂಪಕ, ಸಸಂದೇಹ, ಅಪಸ್ಮೃತಿ, ಅನನ್ವಯ, ಪರ್ಯಾಯೋಕ್ತ ಹೀಗೆ ಎಲ್ಲವನ್ನು ವಿವರಿಸುವ ರೀತಿ ತುಂಬಾ ಆಕರ್ಷಕ ಜೊತೆಗೆ ಮಾಹಿತಿ ಪೂರ್ಣವೂ ಹೌದು. ಅಲಂಕಾರದ ವಿವಿಧ ಬಗೆ, ಅವು ಒಂದರಿಂದ ಇನ್ನೊಂದು ವಿಭಿನ್ನವಾಗುವ ಬಗ್ಗೆ ತುಂಬಾ ಒತ್ತು ಕೊಟ್ಟು ಸೋದಾಹರಣ ವಿವರಿಸಿರುವ ರೀತಿ ತುಂಬಾ ಮೆಚ್ಚುಗೆಯಾಯಿತು. ಮನಃಪೂರ್ವಕ ಅಭಿನಂದನೆಗಳು ಸರ್. ಖಂಡಿತವಾಗಿ ಒಂದು ಸಂಗ್ರಹಾರ್ಹ ಲೇಖನ.

(03) ಶ್ರೀ ಪೋಲೇನಹಳ್ಳಿ ರಮೇಶ್ (ಪೋರ) ಅವರ 'ಕಂಬಗಳು' ಕವನ ಪ್ರತಿಮೆಗಳ ಮೂಲಕ ಇಂದಿನ ಸ್ವಾರ್ಥ ಸಮಾಜವನ್ನು ಬಣ್ಣಿಸುತ್ತವೆ. ನಾವೇ ಬೆಳೆಸಿದ ಕೆತ್ತಿದ ಕಂಬಗಳು ನೋಡಲಷ್ಟೇ ಚೆನ್ನ. ನೆಲದಲ್ಲಿ ಊರಿದ್ದರೂ ಆಕಾಶದೆಡೆಗೆ ಮೊಗ ಮಾಡಿ ನಿಂತಿರುವ ಎತ್ತರಕ್ಕೆ ಗುಂಪಿನಂತೆ ಬೆಳೆದರೂ ಸಮಾನಾಂತರ ರೇಖೆಗಳಾಗಿ ಸಾಂಗತ್ಯಕ್ಕೆ

ಎಡೆಗೊಡದ ಅಪ್ಪಿತಪ್ಪಿ ತಾಕಿದರೆ ಕಿಡಿ ಕಾರುವ ಬಿದಿರು ಬೊಂಬುಗಳು ನಮ್ಮ ಸುತ್ತಲಿನ ಸಮಾಜ ಎನ್ನುತ್ತಾರೆ. ಸಹಕಾರ ಸಾಮರಸ್ಯಗಳಿರದ ಸ್ವಾರ್ಥಿ ಜನರನ್ನು ಪ್ರತಿನಿಧಿಸುವ ಕಂಬಗಳು ಹಸಿರು ಹುಲ್ಲಿನ ಮೇಲಿನ ನೆರಳಿನ ಸಮಾನಾಂತರ ಗೆರೆಗಳು ಎಂದು ಕೊಟ್ಟಿರುವ ರೂಪಕ ತುಂಬಾ ಮನಸ್ಸಿಗೆ ಹಿಡಿಸುತ್ತದೆ. ಪರರಿಗೆ ನೆರಳು ಕೊಡದಂತೆ ಸುಮ್ಮನೆ ಉದ್ದಕ್ಕೆ ಬೆಳೆದು ನಿಂತರೆ ಸಮಾಜಮುಖಿಯಾಗದೆ ಹೋದರೆ ಅವು ಬಿಸಿಲಿಗೆ ಆಗಲಿ, ಮಳೆಗೆ ಆಗಲಿ ಆಶ್ರಯ ನೀಡದೆ ನಿರುಪಯುಕ್ತ ಎನ್ನುತ್ತಾರೆ. ಇಂದಿನ ಸ್ವಾರ್ಥ ತುಂಬಿದ ಸದಾ ತಮ್ಮ ತಮ್ಮವರ ಒಳಿತನ್ನಷ್ಟೇ ಬಯಸುವ ಸಮಾಜದ ಗುಣಕ್ಕೆ ಹಿಡಿದ ಕನ್ನಡಿ ಈ ಕಂಬಗಳು ಎನ್ನುವ ಸಂಕೇತ. ಅದನ್ನು ಯಶಸ್ವಿಯಾಗಿ ಹಿಡಿದಿಡುವಲ್ಲಿ ಕವನ ತನ್ನತನವನ್ನು ಉಳಿಸಿಕೊಂಡಿದೆ ಭಾಷೆಯ ದುಡಿತ ಹಾಗೂ ನಿರೂಪಣಾ ಶೈಲಿ ಚೆಗಿಯಾಗಿದೆ. ಇಂತಹ ಸಶಕ್ತ ಅಭಿವ್ಯಕ್ತಿಯ ಕವನಗಳನ್ನು ನಿಮ್ಮಿಂದ ಇನ್ನಷ್ಟು ನಿರೀಕ್ಷಿಸುತ್ತೇವೆ. ಅಭಿನಂದನೆಗಳು ರಮೇಶ್ ಅವರೇ.

(04) ಶ್ರೀಮತಿ ಗೌರಿ ಭಟ್ಟ ಅವರ "ಬಾರದ ಮಿತ್ರನ ಆರದ ನೆನಪುಗಳು" ಲೇಖನ ಸಹೋದ್ಯೋಗಿ ಮಿತ್ರ ಹಾಗೂ ಸೋದರ ಸಮಾನರಾದ ಬಾಲಕೃಷ್ಣ ಭಟ್ಟರ ಬಗ್ಗೆ ವಿವರಿಸುತ್ತದೆ. ಹೌದು ಜೀವನದಲ್ಲಿ ಕೆಲವೊಂದು ವ್ಯಕ್ತಿತ್ವಗಳು ತುಂಬಾ ಮನಸ್ಸಿನಲ್ಲಿ ಅಚ್ಚೊತ್ತಿಬಿಟ್ಟಿರುತ್ತದೆ. ಏನು ಮಾಡಿದರೂ ಮರೆಯಲು ಸಾಧ್ಯವಾಗುವುದಿಲ್ಲ. .ಭಟ್ಟರು ಹೇಳುತ್ತಿದ್ದ ಕಾಣದ ಕಡಲಿಗೆ, ಯಾವ ಮೋಹನ ಮುರಳಿ ಮತ್ತು ಇನ್ನಿತರ ಹಾಡುಗಳನ್ನು ನೆನಪಿಸಿಕೊಳ್ಳುವ ಲೇಖಕಿಯವರು ಹಾಸ್ಯ ಪ್ರಸಂಗಗಳನ್ನು ಕಣ್ಣ ಮುಂದೆ ತರುತ್ತಾರೆ. ಒಂದು ರೀತಿ ನಗೆಗಡಲಿನಲ್ಲಿ ತೇಲುತಿರುವವರನ್ನು ಮುಂದಿನ ಸಾಲುಗಳು ವಿಷಾದದ ಕೂಪಕ್ಕೆ ತಳ್ಳಿಬಿಡುತ್ತದೆ. ಭಟ್ಟರಿಗೆ ಕ್ಯಾನ್ಸರ್ ಆದ ವಿಷಯ ಹಾಗೂ ಅದರಿಂದ ಚೇತರಿಸಿ ಕೊಳ್ಳಲಾಗದೆ ಅವರು ದೂರವಾದದ್ದು ನಮಗೂ ದುಃಖ ತರುತ್ತದೆ. ನಿರೂಪಣಾ ಶೈಲಿ ತುಂಬಾ ಚೆನ್ನಾಗಿದ್ದು, ಪ್ರಸಂಗಗಳು ಕಣ್ಣಿಗೆ ಕಟ್ಟುವಂತೆ ಆಗುತ್ತದೆ. ಅದರಲ್ಲೂ ಭಟ್ಟರು ಬ್ಯಾಂಕಿಗೆ ತಡವಾಗಿ ಬಂದು ಕೌಂಟರ್‌ನಲ್ಲಿ ಕುಳಿತುಕೊಳ್ಳುವುದು, ನಾವು ಈ ತರಹದ ದೃಶ್ಯಗಳನ್ನು ನೋಡುತ್ತಿರುವುದರಿಂದ ಖಂಡಿತ ತುಂಬಾ ಆಪ್ತ ಅನಿಸುತ್ತದೆ. ತಮ್ಮ ದೇವರು ಕೊಟ್ಟ ಈ ಅಣ್ಣನ ಬಗ್ಗೆ ಬರೆದಿರುವ ನುಡಿ ನಮನ ನಿಜಕ್ಕೂ ಆತ್ಮೀಯವಾಗಿದೆ. ನಿಮ್ಮ ಸಾಹಿತ್ಯ ಯಾತ್ರೆಯಲ್ಲಿ ಯಶಸ್ಸು ಸಿಗಲಿ ಎಂದು ಹಾರೈಸುವೆ ಗೌರಿ ಅವರೇ.....

(05) ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರ 'ಬದಲಾದ ಮನೆ ಮನಸುಗಳು' ಬದಲಾವಣೆ ಅನಿವಾರ್ಯ ಎಂಬ ಗುರುತರವಾದ ಸತ್ಯವನ್ನು ಹಾಸ್ಯದ ದಾಟಿಯಲ್ಲಿ ನಿರೂಪಿಸುತ್ತಾ ಹೋಗುತ್ತದೆ. ಮನೆ ಬದಲಾವಣೆ ಮಾಡುವ ಸಂದರ್ಭದಲ್ಲಿ ಅದರಲ್ಲೂ ದೊಡ್ಡ ಮನೆಯಿಂದ ಚಿಕ್ಕ ಮನೆಗೆ ಹೋಗುವಾಗ ತುಂಬಿಸಿಕೊಂಡ ಸಂಗ್ರಹಿಸಿದ ಸಾಮಾನುಗಳು ಇದ್ದಕ್ಕಿದ್ದಂತೆ ಹೆಚ್ಚು ಎನಿಸುತ್ತದೆ. ಆದರೆ ಯಾವುದನ್ನು ಇಟ್ಟುಕೊಳ್ಳುವುದು, ಯಾವುದನ್ನು ಕೊಟ್ಟು ಬಿಡುವುದು ನಿರ್ಧರಿಸುವಲ್ಲಿ ನಿಜಕ್ಕೂ ತುಂಬಾ ಗೊಂದಲಗಳು ಕಾಡುತ್ತವೆ. ಇದನ್ನೇ ಬಿಸಿ ತಾಗದ ಅಂದದ ಚಂದದ ಪಾತ್ರೆಗಳು, ಹೆಚ್ಚು ಸಮಾರಂಭವನ್ನು ನೋಡದ ಬಣ್ಣ ಬಣ್ಣದ ಅನೇಕ ಸೀರೆಗಳು, ಬ್ಯಾಂಕಿನ ಲಾಕರಿನ ಕಗ್ಗತ್ತಲೆಯಲ್ಲಿ ಉಸಿರು ಕಟ್ಟಿದ ಚಿನ್ನ ಬೆಳ್ಳಿಯ ಆಭರಣಗಳು ಎಂದೆಲ್ಲ ಹಲವು ಉದಾಹರಣೆಗಳನ್ನು ಕೊಡುತ್ತಾರೆ. ಚಿಂತನ ಯೋಗ್ಯವಾದ ವಿಷಯವನ್ನು ಲಘು ಹರಟೆಯ ದಾಟಿಯಲ್ಲಿ ಬರೆದಿರುವುದು ನಿಜಕ್ಕೂ ಮನಃಸ್ಪರ್ಶಿಯಾಗಿದೆ. ಪ್ರಾಯಶಃ ಈ ಸಮಸ್ಯೆ 45ರಿಂದ 60ರ ವಯೋಮಾನದ ನಮ್ಮ ತಲೆಮಾರಿನವರಿಗೆ ಮಾತ್ರ ಇರಬೇಕು. ಏಕೆಂದರೆ ಇಂದಿನ ತಲೆಮಾರಿನವರು ಆ ರೀತಿ ನಂಟು ಅಂಟು ಉಳಿಸಿಕೊಂಡಿಲ್ಲ. ಹಾಗಾಗಿ ಬೇಸರವಾಗುವುದಿಲ್ಲ ಎಂದೆನಿಸುತ್ತದೆ. ತುಂಬಾ ಉತ್ತಮ ಲೇಖನ ಮೇಡಂ. ಶುಭವಾಗಲಿ.

(06) ಶ್ರೀಮತಿ ಗಿರಿಜಾ ರಾಜ್ ಅವರ 'ಒಲವಿನ ನಂಬಿಕೆ ಹುಸಿಯಾಗಲಿಲ್ಲ' ಒಂದು ಸರಳ ಸುಂದರ ಸಾಮಾಜಿಕ ಕಥೆ. ಪ್ರೀತಿಸಿದವನನ್ನು ನಂಬಿ ತಂದೆ, ತಾಯಿ, ಮನೆ ತ್ಯಜಿಸಿ ಅಪರಾತ್ರಿಯಲ್ಲಿ ಹೊರಟವಳಿಗೆ ಅವನು ಬಾರದಿರುವ ನಿರಾಸೆ.

ಅಷ್ಟರಲ್ಲಿ ಅಮ್ಮ ತಾನೇ ಬಂದು ಮಗಳನ್ನು ಮನೆಗೆ ವಾಪಸ್ಸು ಕರೆದುಕೊಂಡು ಹೋಗುತ್ತಾಳೆ. ಮಗಳು ಪ್ರಿಯಕರನನ್ನು ಸಂದೇಹಿಸಿದರೂ ಜಗತ್ತು ಕಂಡ ತಾಯಿ, ಕಾದು ನೋಡು ಎಂದು ಸಮಾಧಾನ ಮಾಡುತ್ತಾಳೆ. ಕಡೆಗೆ ಎರಡೂ ಕಡೆಯ ಹಿರಿಯರು ಒಪ್ಪಿ ಮದುವೆಯಾಗುವುದು ಸುಖಾಂತ. ಕಥೆಯ ಸಮರ್ಥ ನಿರೂಪಣೆ ಹಾಗೂ ಮಕ್ಕಳ ಬದುಕಿನಲ್ಲಿ ತಾಯಿಯಾದವಳು ನಿರ್ವಹಿಸಬೇಕಾದ ಜವಾಬ್ದಾರಿ, ತೋರಬೇಕಾದ ಸಹನೆ, ಪ್ರೀತಿ, ಅಲ್ಲದೆ ಮನೆ ಎಂಬ ಸುರಕ್ಷೆ ಇಲ್ಲದಿದ್ದಾಗ ಪಡಬೇಕಾದ ಕಷ್ಟ, ಎದುರಾಗುವ ಸಮಸ್ಯೆಗಳು ಇವುಗಳನ್ನು ತುಂಬಾ ಅಂದದ ಸಾಲುಗಳಲ್ಲಿ ಹಿಡಿದಿಟ್ಟಿದ್ದಾರೆ ಕಥೆಗಾರ್ತಿ. ಮತ್ತಷ್ಟು ಉತ್ತಮ ಕಥೆಗಳು ತಮ್ಮ ಲೇಖನಿಯಿಂದ ಮೂಡಿಬರಲಿ ಎಂದು ಹಾರೈಸುವೆ.

(07) ಶ್ರೀಮತಿ ಮಾಧುರಿ ಕೃಷ್ಣ ಅವರ "ವರ್ಕಂ ಫ್ರಂ ಹೋಂ". ಈ ಹಿಂದೆ ದಾಸೋಹದಲ್ಲಿ ಪ್ರಸ್ತುತಪಡಿಸಿದ ಅವರ ಕಾಲೇಜು ಸಹಪಾಠಿ ಮಿತ್ರನ ಜೊತೆಗೆ ಆದ ಭೇಟಿಯ ಮುಂದುವರಿದ ಭಾಗ ಇದು ಎಂದೆನಿಸುತ್ತದೆ. ಮಗನ ಕಚೇರಿಯಲ್ಲಿ ವರ್ಕ್ ಫ್ರಂ ಹೋಮ್ ಮತ್ತೆ ಮುಂದುವರೆದಿದ್ದರಿಂದ ತಮ್ಮ ಊರಿಗೆ ಹೋಗುವ ಲೇಖಕಿಯವರು ತಮ್ಮ ಬಾಲ್ಯದ ಗೆಳೆಯನನ್ನು ಮೊದಲೇ ಸೂಚನೆ ಕೊಡದೆ ಭೇಟಿಯಾಗಲು ಹೋಗುತ್ತಾರೆ .ಆಗ ಅಲ್ಲಿ ಅವರಿಗಾದ ಅನುಭವವನ್ನು ನಿರೂಪಿಸಿರುವ ಲೇಖನ ಇದು. ಹೇಳದೆ ಕೇಳದೆ ಹೋಗುವುದರಿಂದ ಗೆಳೆಯನ ಮನಸ್ಸಿನಲ್ಲಿ ತಾನು ಅದಕ್ಕೆ ತಯಾರಿ ನಡೆಸಿಲ್ಲದ ಬಗ್ಗೆ ತನ್ನ ಅವ್ಯವಸ್ಥಿತ ವೇಷ, ಬಿಳಿಗೂದಲಿನ ಅಸಹನೆ ಹೊಗೆಯಾಡುವುದನ್ನು ಗಮನಿಸುತ್ತಾರೆ. ಅನಂತರ ಲೇಖಕಿಯೇ ಮುಂದುವರೆದು ಹೊರಗಿನ ವೇಷಭೂಷಣಗಳು ಈಗ ಅಷ್ಟೇನೂ ಪ್ರಮುಖವಾಗುವುದಿಲ್ಲವೆಂದು ಅವುಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡವೆಂದು ಹೇಳುತ್ತಾ ಚೂಟಿಯಾಗಿರುವ ಅವನ ಮೊಮ್ಮಗನ ತೋರಿಸುತ್ತ ನಿನ್ನ ಪ್ರತಿಬಿಂಬವೇ ಇವನು ಎಂದು ಹೇಳಿ ತಮ್ಮ ಮನಸ್ಸಿನಲ್ಲಿ ಇಂದಿಗೂ ಅವನು ಮಿಸ್ಟರ್ ಪರ್ಫೆಕ್ಟ್ ಆಗಿಯೇ ನೆನಪಿನಲ್ಲಿ ಉಳಿದಿದ್ದಾನೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಒಂದು ರೀತಿಯಲ್ಲಿ ಆಂತರಿಕ ಚಿಂತನ ಮಂಥನಕ್ಕೆ ಹಚ್ಚುವ ಲೇಖನ. ಅಭಿನಂದನೆಗಳು, ಮೇಡಂ.

(08) ಶ್ರೀಮತಿ ಜಿ.ವಿ. ನಿರ್ಮಲ ಅವರ ಹಾಸ್ಯ ಲೇಖನ "ಸ್ಪರ್ಧೆಗೊಂದು ಬರಹ". ಹಾಸ್ಯ ಲೇಖನ ಬರೆಯುವುದು ಹೇಗೆ ಅನ್ನುವುದನ್ನ ತಮಾಷೆಯಾಗಿ ವಿವರಿಸುವ ಬರಹ ತುಂಬಾ ಖುಷಿ ಕೊಟ್ಟಿತು. ಸ್ಪರ್ಧೆಗಾಗಿ ಒಂದು ಹಾಸ್ಯ ಬರಹವನ್ನು ಬರೆಯಲು ಹೆಂಡತಿಯ ಸಲಹೆ ಕೇಳುವ ಗಂಡ. ತಾನು ಓದಿದ ಹಾಸ್ಯ ಬರಹಗಳು ಹಾಗೂ ಧಾರಾವಾಹಿಗಳಿಂದ ತನ್ನ ಜ್ಞಾನ ಹೆಚ್ಚಿದೆ ಎಂದು ಹೇಳಿ ಗಂಡನಿಗೆ ವಿವಿಧ ರೀತಿಯ ಸಲಹೆ ಕೊಡುವ ಹೆಂಡತಿ. ಒಳ್ಳೆ ಮುದ್ದಣ ಮನೋರಮೆಯರ ಸಲ್ಲಾಪದಂತೆ ಸಾಗುತ್ತದೆ. ಕಡೆಗೆ ಬೇರೆ ಗಂಡ ಹೆಂಡತಿಯರ ಪಾತ್ರ ಇಟ್ಟುಕೊಂಡು ಗಂಡನನ್ನು ಪೆದ್ದು ಮಾಡಿ, ಕಥೆ ಸೃಷ್ಟಿಸುವ ನಿರ್ಧಾರಕ್ಕೆ ಬಂದಮೇಲೆ ಆರಂಭಿಸುವುದಕ್ಕೆ ಮುಂಚೆ ಒಂದು ಅರ್ಧ ಲೋಟ ಕಾಫಿ ಕೊಡು ಎಂದು ಕೇಳಿದಾಗ ಪತಿಗೆ ಕಾಫಿ ಕೇಳಲು ಈ ಉಪಾಯ ಎಂದು ಅರ್ಥವಾಗಿ ಮೂರ್ಖಳಾದೆನಲ್ಲಾ ಎಂದು ತಲೆಚಚ್ಚಿಕೊಳ್ಳುತ್ತಾಳೆ. ಹದವಾದ ಬಿಗಿಯರಿತ ಸರಳ ಸುಂದರ ಸಂಭಾಷಣೆಗಳು ಹಾಸ್ಯ ಉಕ್ಕಿಸುವಲ್ಲಿ ಸಫಲವಾಗುತ್ತವೆ. ಒಳ್ಳೆಯ ಲೇಖನ. ಅಭಿನಂದನೆಗಳು, ಮೇಡಂ.

(09) ಶ್ರೀಮತಿ ಶೀಲಾ ಭಂಡಾರ್ಕರ್ ಅವರ ಲೇಖನ "ಜೋಡಿಸುವ ಕಲೆ" ಗೆಳತಿಯೊಬ್ಬರ ಟೀ ಕಪ್ ಒಡೆದು ಜೋಡಿಸಿದ ಲೇಖನವನ್ನೇ ಆಧಾರವಾಗಿಟ್ಟುಕೊಂಡು, ಜಪಾನಿನ ಕಿಂಸುಗಿ ಕಲೆಯ ಬಗ್ಗೆ ಮಾಹಿತಿ ಕೊಡುತ್ತಾ ಹೋಗುತ್ತಾರೆ. ವಾಬಿಸಬಿ ತತ್ವ, ಮೊಟ್ಟಂಗಿ ಭಾವನೆ, ಮುಶಿನ್ ತತ್ವ ಇವುಗಳನ್ನು ವಿವರಿಸುತ್ತಾ ಹೋಗುತ್ತಾರೆ. ನಿಜಕ್ಕೂ ಹೊಸ ಅಂಶಗಳುಳ್ಳ ತುಂಬಾ ಮಾಹಿತಿಪೂರ್ಣ ಲೇಖನ. ಮಾಹಿತಿ ನೀಡುತ್ತಾ ಅದನ್ನು ಜೀವನದ ತತ್ವಗಳೊಂದಿಗೆ ಮೇಳಯಿಸಿ ಹೇಳುವ ನಿರೂಪಣೆ ತುಂಬಾ ಅರ್ಥಪೂರ್ಣವೆನಿಸಿತು. ಕಡೆಯ ಈ ಸಾಲುಗಳು ಖುಷಿ ಕೊಟ್ಟವು– "ಏನಾದರೂ ಒಡೆದರೆ ಅದನ್ನು ಜೋಡಿಸುವ ಪ್ರಯತ್ನ ಮಾಡಬೇಕು. ಆಗ ಮತ್ತೂ ಸುಂದರವಾದವು ದಕ್ಕಬಹುದು.

ಕೆಲವೊಮ್ಮೆ ಪರಿಸ್ಥಿತಿ ನಾವೊಂದು ಕೊಂಡಂತೆ ಇರದಿದ್ದರೆ, ಬಂದಹಾಗೆ ಸ್ವೀಕರಿಸಿ ಜೀವನವನ್ನು ಸುಂದರವಾಗಿಸಬೇಕು". ಈ ತತ್ವ ಸಾರ್ವಕಾಲಿಕ ಉಪಯುಕ್ತ ಅಲ್ಲವೇ? ತುಂಬಾ ಚಂದದ ಲೇಖನ ಗೆಳತಿ, ಅಭಿನಂದನೆಗಳು

(10) ಶ್ರೀಮತಿ ರಾಧಿಕಾ ಗುಜ್ಜರ್ ಅವರ "ಮಧುರ" ಕಥೆ. ಸಾಮಾನ್ಯ ಭಾರತೀಯ ಸ್ತ್ರೀಯ ಜೀವಮಾನದ ಚಿತ್ರಣವನ್ನು ಮುಂದಿಡುತ್ತದೆ. ತುಂಬಿದ ಮನೆಯಲ್ಲಿ ಹೆಚ್ಚಿನ ಸಾಂಗತ್ಯ ಸಿಗದ ಬದುಕು ನಂತರವೂ ಹೆಂಡತಿಯ ಆಸೆ ಆಕಾಂಕ್ಷೆಗಳನ್ನು ವಿಶೇಷವಾಗಿ ವಿಚಾರಿಸಿ ನೋಡದ ಗಂಡ, ನಂತರ ತನ್ನ ನಿವೃತ್ತಿಯ ಬದುಕಿನಲ್ಲಿ ಇವಳ ಆಸೆಗಳನ್ನು ಕೇಳಿದಾಗ ಹಿಂದಿನ ನೆನಪಿನ ಕಥೆ ಗರಿಯೊಡೆಯುತ್ತದೆ ಕಡೆಗೆ ಅವಳು ಕೇಳುವುದು ಮತ್ತೆ ಅವನ ಸಾಂಗತ್ಯವನ್ನೇ, ಊಟ ನಡಿಗೆ ಇವುಗಳಲ್ಲಿ. ಆಗ ಇವಳ ನಿಸ್ವಾರ್ಥತೆಯನ್ನು ಗಮನಿಸುವ ಪತಿ ಇದು ನಾನು ನಿನ್ನಿಂದ ಬಯಸುವುದು, ನಿನಗಾಗಿಯೇ ಬೇಕಾದುದನ್ನು ಕೇಳು ಎಂದು ಕಡೆಗೆ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಸಂತೃಪ್ತ ಭಾವ. ತುಂಬಾ ಸುಂದರವಾಗಿ ಕಥೆಯನ್ನು ಹೇಳಿದ್ದಾರೆ. ಕಥೆ ಎಂದೆನಿಸುವುದಿಲ್ಲ ನಮ್ಮ ನಿಮ್ಮದೇ ಜೀವನದ ಪ್ರಸಂಗಗಳು ಎಂದೆನಿಸುವುದು ಇದರ ವಿಶೇಷ. ಅಭಿನಂದನೆಗಳು ರಾಧಿಕಾ ಅವರೇ.

(11) ಶ್ರೀ ವಿಠ್ಠಲ್ ಇಜೇರಿ ಅವರು ಪ್ರೊಫೆಸರ್ ಎಸ್ ಪಿ ರಂಗನಾಥ ಅವರ ಅನುವಾದಿತ ಕಥಾ ಸಂಕಲನದ ಕಥೆ 'ಜೂಹೂರ್ ಬಕ್ಷ'ದ ಬಗ್ಗೆ ಬರೆಯುತ್ತಾರೆ. ಇಡೀ ಸಂಕಲನದ ಬಗ್ಗೆ ಅಲ್ಲದೆ ವಿಶೇಷವಾಗಿ "ಕಸದ ತೊಟ್ಟಿ ಮಾತನಾಡಿದ್ದು" ಎಂಬ ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಡಿಎಂಕೆ ಪಕ್ಷದ ಎಂ ಕರುಣಾನಿಧಿಯವರ ಕಥೆಯ ಬಗ್ಗೆ ವಿವರಿಸುತ್ತಾರೆ. ಕಮ್ಯುನಿಸ್ಟ್ ತತ್ವದ ಕಥೆಯಲ್ಲಿ ದೇವರ ಬಗ್ಗೆ ಅವಹೇಳನ ದೇವತೆಗಳ ಅನೈತಿಕ ಕಥೆಗಳ ಕಡೆಗೆ ಹೆಚ್ಚಿನ ಒಲವು ಹಾಗೂ ಕಸದ ತೊಟ್ಟಿಗೆ ಕೇಳಿಸುವ ಧರ್ಮದರ್ಶಿಯ ಭಾಷಣದಲ್ಲಿಯೂ ಸಹ ದೇವರ ಪವಾಡದ ಬಗ್ಗೆ ವಿವರಣೆ, ಇದು ದೇವರು ಎನ್ನುವುದಕ್ಕೆ ವಿವರಣೆ ಇಲ್ಲ ಎಂಬುದನ್ನು ಸ್ಪಷ್ಟವಾಗಿ ಕಸದ ತೊಟ್ಟಿ ಸಂಭಾಷಣೆಯಲ್ಲಿ ಹೇಳುತ್ತದೆ. ಅಲ್ಲದೆ ಇನ್ನಿತರ ಅದರ ಅನುಭವಗಳ ಬಗ್ಗೆಯೂ ವಿವರಿಸುತ್ತದೆ. ಕುತೂಹಲಕರವಾದ ಒಂದು ಕಥೆಯ ಬಗ್ಗೆ ಪ್ರಸ್ತಾಪಿಸಿ ಇಡೀ ಸಂಕಲನ ಓದುವ ಆಸೆಯನ್ನು ಮೂಡಿಸುತ್ತಾರೆ ಲೇಖಕರು.ನಮ್ಮ ವೇದಿಕೆಯಲ್ಲಿ ಎಲ್ಲರ ಲೇಖನಗಳಿಗೂ ಸ್ಪಂದಿಸುತ್ತಾ, ಸದಾ ಕ್ರಿಯಾಶೀಲವಾಗಿರುವ ವ್ಯಕ್ತಿ. ಅಭಿನಂದನೆಗಳು ಸರ್

(12) ಶ್ರೀ ಪಿ ವೆಂಕಟೇಶ ಕಾಮತ್‌ರ "2022 ಕಳೆದದ್ದು ಕೂಡಿದ್ದು" ಲೇಖನದಲ್ಲಿ ವರ್ಷದ ಅಂಚಿನಲ್ಲಿ ಹಿಂದಿರುಗಿ ನೋಡಿ ತಮ್ಮ ಸ್ನೇಹ ಪರಿಧಿಗೆ ಕೂಡಿದವರನ್ನು ಮತ್ತು ದೈಹಿಕವಾಗಿ ತಮ್ಮಿಂದ ದೂರಾದ ನಿಕಟ ಸಂಬಂಧಿಗಳನ್ನು ನೆನೆಸಿಕೊಂಡಿದ್ದಾರೆ. .ತಮ್ಮ ಸೋದರಮಾವ ವಾಮನ್ ಶೆಣೈ ಮತ್ತು ದೊಡ್ಡಪ್ಪ ವಾಮನ್ ಕಾಮತ್ ಇವರ ಸಾಧನೆಗಳನ್ನು ಸ್ಮರಿಸಿ ಅವರ ಒಡನಾಟಗಳನ್ನು ನೆನೆಸಿಕೊಂಡಿದ್ದಾರೆ. ಅವರ ಅಗಲಿಕೆಯ ವಿಷಾದವನ್ನು ತೋಡಿ ಕೊಂಡಿರುತ್ತಾರೆ. ಗಣೇಶ್ ಕಾಸರಗೋಡು ಅವರ ಪರಿಚಯವನ್ನು ಪ್ರಸ್ತಾಪಿಸಿ, ಅವರು ಕೊಟ್ಟ ಪುಸ್ತಕ ಉಡುಗೊರೆ ಹಾಗೂ ತಾವೂ ಖರೀದಿಸಿ ಓದಿದ್ದನ್ನು ಹೇಳುತ್ತಾರೆ .ಅಂತೆಯೇ ಬೊಳುವಾರು ಮಹಮದ್ ಕುಂಞ ಅವರ ಪುಸ್ತಕ ಸಾಂಗತ್ಯವನ್ನು ವಿವರಿಸಿದ್ದಾರೆ. ಆರ್ಥಿಕ ಸಂಸ್ಥೆಗಳ ವಾರ್ಷಿಕ ವರದಿಯಂತೆ, ಆಯವ್ಯಯ ಪಟ್ಟಿಯಂತೆ ತೋರುವ ಈ ಲೇಖನ ತುಂಬಾ ಅರ್ಥಪೂರ್ಣ ಹಾಗೂ ಇಂದಿನ ದಿನದ ಅಗತ್ಯ ಎನಿಸಿತು. ನಿಜಕ್ಕೂ ಈ ಅಭ್ಯಾಸ ಬೆಳೆಸಿಕೊಂಡರೆ ನಮ್ಮ ಜೀವನದ ಮುಖ್ಯಘಟ್ಟಗಳ ಅವಲೋಕನವಾಗುತ್ತದೆ. ನನಗಂತೂ ಒಳ್ಳೆ ಸ್ಫೂರ್ತಿಯಾಯಿತು.

(13) ಶ್ರೀ ಕೆ.ಎನ್. ಮಹಾಬಲ ಅವರ 'ಕುಟ್ಟುವ ಸಲಕರಣೆಗಳು' ಲೇಖನದಲ್ಲಿ ಕನ್ನಡಿಗರ ಅಭಿಮಾನ ಶೂನ್ಯತೆ ಬಗ್ಗೆ ಹೇಳಿದ್ದಾರೆ. ವಿವಿಧ ಉದಾಹರಣೆಗಳನ್ನು ಕೊಡುತ್ತಾ ರವೀಂದ್ರನಾಥ ಟಾಗೋರ್ ಮತ್ತು ಅನಕೃ ಅವರ ಸಂಭಾಷಣೆ,

ಡಿವಿಜಿ ಮತ್ತು ಆಕ್ಸಫರ್ಡ್ ಡಿಕ್ಷನರಿ ಬಗೆಗಿನ ವಿಷಯ ಎಲ್ಲವನ್ನೂ ಹೇಳುತ್ತಾರೆ .ಇತ್ತೀಚೆಗೆ ನಟಿ ರಶ್ಮಿತಾ ಮಂದಣ್ಣ ಅವರು ಸಾಲುಮರದ ತಿಮ್ಮಕ್ಕನ ಬಗ್ಗೆ ಏನೊಂದೂ ಮಾತನಾಡಲಾಗದ ಅಜ್ಞಾನ ಮುಂತಾದುವುಗಳ ಬಗ್ಗೆ ಬೆಳಕು ಚೆಲ್ಲುತ್ತಾರೆ. ಕೆಲವೆಲ್ಲ ಹೊಸತು ವಿಷಯಗಳೇ. ಈ ರೀತಿಯ ಅಭಿಮಾನ ಶೂನ್ಯತೆ ನಮ್ಮಲ್ಲಿ ಇರುವುದರಿಂದಲೇ ಬೇರೆ ಭಾಷೆಯವರು ನಮ್ಮ ಮೇಲೆ ದಬ್ಬಾಳಿಕೆ ನಡೆಸಲು ಸಾಧ್ಯವಾಗಿರುವುದು. .ಮಧ್ಯೆ ಮಧ್ಯೆ ಈ ರೀತಿ ತಲೆಯ ಮೇಲೆ ಕುಟ್ಟಿ ಎಚ್ಚರಿಸುವ ಸಲಕರಣೆಗಳ ಉಪಕರಣಗಳ ಅಗತ್ಯ ಬಹಳ ಇದೆ ಸರ್. ನಿಮ್ಮ ಲೇಖನ ಸಕಾಲಿಕ ಹಾಗೂ ತುಂಬಾ ಸಮಯೋಚಿತ. ಇದೇ ಅಭಿಮಾನ ಶೂನ್ಯತೆಯ ವಿಷಯವನ್ನೇ ನನ್ನ ಮಾತಿನ ಆರಂಭದಲ್ಲಿ ಪ್ರಸ್ತಾಪಿಸಿದ್ದೇನೆ.

(14) ಡಾ. ಸತ್ಯವತಿ ಮೂರ್ತಿಯವರ "ಇಂಗ್ಲೆಂಡಿನ ಸೆರೆಮನೆಯಲ್ಲಿ ನಾನು" ಲೇಖನ ಹಾಸ್ಯದ ತಳಹದಿಯಲ್ಲಿ ಆರಂಭವಾದರೂ ಮುಂದೆ ಗಂಭೀರ ಚಿಂತನೆಗಳನ್ನು ಹೊತ್ತು ಸಾಗುತ್ತದೆ.. ಜೈಲಿಗೆ ಹೋಗಿ ಬಂದವರು ಎಂಬ ಹಣೆಪಟ್ಟಿ ಇದ್ದರೂ ಅದು ಖೈದಿಯಾಗಿಯಲ್ಲ ಒಬ್ಬ ಮಾನಸಿಕ ಸಲಹಾ ತಜ್ಞೆಯಾಗಿ, ಆಪ್ತ ಸಮಾಲೋಚಕಿಯಾಗಿ ಎಂಬುದನ್ನು ತುಂಬಾ ಆಪ್ತ ರೀತಿಯಲ್ಲಿ ವಿವರಿಸುತ್ತಾರೆ. ಅಲ್ಲಿನ ಜೈಲುಗಳ ವೈಭವಯುತ ವಾತಾವರಣದ ಬಗ್ಗೆ ಹೇಳುತ್ತಾ, ಹಿಂದೆ ಅದೇ ಬ್ರಿಟಿಷರು ಭಾರತೀಯರನ್ನು ಜೈಲುಗಳಲ್ಲಿ ನಡೆಸಿಕೊಳ್ಳುತ್ತಿದ್ದ ರೀತಿಯನ್ನು ತುಲನಾತ್ಮಕವಾಗಿ ವಿವರಿಸುತ್ತಾರೆ. ಈ ರೀತಿಯ ಅವಕಾಶಗಳು ತಮಗೆ ಸಿಗುತ್ತಿರಲಿ ಹಾಗೂ ಅವುಗಳ ಅನುಭವವನ್ನು ನಮಗೆ ಹಂಚಿಕೊಳ್ಳುವ ಪ್ರಸಂಗಗಳು ಹೆಚ್ಚಾಗಲಿ. ಇದು ತಮ್ಮ ಮೊದಲ ಪ್ರಸ್ತುತಿ ಎಂದು ಹೇಳಿದ್ದೀರಿ, ಮುಂದೆ ಬಳಗದ ಹಾಗು ದಾಸೋಹದ ಒಡನಾಟ ನಿರಂತರವಾಗಿರಲಿ ಎಂದು ಹಾರೈಸುವೆ ಅಭಿನಂದನೆಗಳು ಮೇಡಂ.

ನನಗೆ ಈ ಅವಕಾಶ ನೀಡಿದ್ದಕ್ಕಾಗಿ ವೇದಿಕೆಯ ನಿರ್ವಾಹಕರೆಲ್ಲರಿಗೂ ಮತ್ತು ದಾಸೋಹದ ಸಂಚಾಲಕರಾದ ಮಹಾಬಲ ಅವರಿಗೂ ಧನ್ಯವಾದಗಳು .ಸಹನೆಯಿಂದ ನನ್ನ ಮಾತುಗಳನ್ನು ಆಲಿಸಿದ ನಿಮ್ಮೆಲ್ಲರಿಗೂ ನಾನು ಆಭಾರಿ.

ಆದಷ್ಟು ಕನ್ನಡವನ್ನೇ ಬಳಸೋಣ, ಕನ್ನಡವನ್ನು ಇನ್ನಷ್ಟು ಬೆಳಸೋಣ... ಎಂಬ ಧ್ಯೇಯ ಮತ್ತು ಹಾರೈಕೆಗಳೊಂದಿಗೆ ನನ್ನ ಮಾತುಗಳನ್ನು ಮುಗಿಸುವೆ.

ಜೈ ಭುವನೇಶ್ವರಿ

***

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಶ್ರೀ ಶಶಿಧರ ಹಾಲಾಡಿಯವರ ಬರಹಗಳು – ಒಂದು ಅವಲೋಕನ



ಉಪನ್ಯಾಸ ಮತ್ತು ಸಂವಾದ :
ಶ್ರೀಮತಿ ಟಿ.ಎಸ್.ಶ್ರವಣಕುಮಾರಿ

ದಿನಾಂಕ ೨೮ ಜನವರಿ ೨೦೨೩
ಅಂತರಜಾಲ ಮುಖೇನ ಕಾರ್ಯಕ್ರಮ

'ತಪ್ಪದೆ ಇಂದಿನ ಕಾರ್ಯಕ್ರಮಕ್ಕೆ ಬನ್ನಿರಿ'

ಅಬ್ಬಬ್ಬಾ ಅಬ್ಬೆ

ಬಯಲಾದ ನಾಡಿನ ಬೆಡಗಿನಲ್ಲಿ
ಅಬ್ಬೆಜೇಡದ್ದೇಂಥಾ ಬೆರಗು ಗುರು
ಕಚ್ಚದೆ ಪಾಪ ಚಚ್ಚಿಸಿಕೊಂಡಿತಲ್ಲಾ
ಕುಟುಕಿನಲಿ ವಿಷವಿಟ್ಟ ಮನುಜರಿಂದ

ಬಿಡಿಬಿಡಿಯ ಪದಗಳಲ್ಲಿ ಕಥೆ ಚಿತ್ರವತ್ತು
ನಡೆದಿದೆ ಕಣ್ಮುಂದೆ ಎಂಬಂಥ ರಸವತ್ತು
ಅವಸರಿಸದ ಸರಳ ಬರಹದ ಕರಾಮತ್ತು
ಉಬ್ಬರವಿಲ್ಲದ ಕಥೆ ಮಾಂತ್ರಿಕ ಗಮ್ಮತ್ತು

ಕಲ್ಕೆರೆ ಘಟನೆಗೆ ಕಥೆಗಾರ ಸಾಕ್ಷಿ ರೂಪ
ಬೆಟ್ಟದೊಕ್ರತೆಯಲ್ಲಿ ಬಳ್ಳಿಗಳ ಬಾಗಿನಲ್ಲಿ
ಚಿಪ್ಪುಹಂದಿಯಲಿ ಸದಾಶಿವನ ಹೆಣ್ಣಿನಲಿ
ತೆರೆದ ಕಚೇರಿ ರಾಜಕೀಯದುಪಾದ್ಯಾಪ

ಹಂಗೆ ಹಿಂಗೆ ಆ ಬರಹಗಾರನಂತೆ ಅನ್ನದಿರಿ
ಹಾಲಾಡಿ ಹಾಡಿಹರು ತಮ್ಮ ದನಿಯ ಹಾಡು
ಭರವಸೆಯ ಕಾದಂಬರಿಕಾರ ನಮ್ಮ ಶಶಿಧರ
ಕಥೆಯಾಂಕಣ ಅಂಕಣಕಥಾ ಮೋಡಿಗಾರ

– ಬೆಂಶ್ರೀ ರವೀಂದ್ರ/೨೮–೦೧–೨೦೨೩

ಶಶಿಧರ ಹಾಲಾಡಿ ಅವರ ಪ್ರಕಟಿತ ಕೃತಿಗಳು– 14

ಕಾದಂಬರಿಗಳು:

1. ಅಬ್ಬೆ
2. ಕಾಲಕೋಶ

ಪ್ರಬಂಧಗಳು:

3. ನಾ ಸೆರೆ ಹಿಡಿದ ಕನ್ಯಾಸ್ತ್ರೀ
4. ಸುಮ ಅರಳುವ ಸಮಯ
5. ಓಲಿ ಕೊಡೆ

ಅಂಕಣ ಬರಹಗಳು:

6. ಚಿತ್ತ ಹರಿದತ್ತ , ಅಂಕಣ ಬರಹಗಳು
7. ಮನದ ಹಾಯಿದೋಣಿ
8. ಟುವ್ವಿ ಹಕ್ಕಿಯ ಗೂಡು
9. ಅಮ್ಮಮ್ಮನ ದೀಪಾವಳಿ – ಹಳ್ಳಿಯ ನೆನಪುಗಳು
10. ಉರುಳಿದ ಕಟ್ಟಡ ಮರಳಿದ ನೆನಪು
11. ಪ್ರಕೃತಿ ಪ್ರಪಂಚ

ಇತರೆ:

12. ಬೆನಗಲ್ ನರಸಿಂಗ ರಾವ್ – ವ್ಯಕ್ತಿ ಚಿತ್ರ
13. ದೇವರು ಎಚ್ಚರಗೊಂಡಾಗ – ಪ್ರವಾಸ ಕಥನ
14. ಹಿತ್ತಲಿನಿಂದ ಹಿಮಾಲಯಕ್ಕೆ – ಪ್ರವಾಸ ಕಥನ

ಉಪನ್ಯಾಸದ ಪೂರ್ಣಪಾಠ

ಶಶಿಧರ ಹಾಲಾಡಿಯವರ ಅಂಕಣ ಬರಹಗಳು

– ಟಿ.ಎಸ್. ಶ್ರವಣ ಕುಮಾರಿ

ಎಲ್ಲರಿಗೂ ವಂದನೆಗಳು. ಮೊತ್ತಮೊದಲಿಗೆ ಬೆರಗು ಪ್ರಕಾಶನ ಸಂಸ್ಥೆಯಿಂದ 2022ನೆಯ ಸಾಲಿನ ಪುಸ್ತಕ ಪ್ರಶಸ್ತಿಯನ್ನು ಶಶಿಧರ ಹಾಲಾಡಿಯವರ "ಅಬ್ಬೆ" ಕಾದಂಬರಿ ಪಡೆದುಕೊಂಡಿರುವುದು ನಿಜಕ್ಕೂ ನಮ್ಮೆಲ್ಲರಿಗೂ ಒಂದು ಹೆಮ್ಮೆಯ ವಿಷಯ. ನಾವು ಈ ಕಾರ್ಯಕ್ರಮವನ್ನು ಯೋಜಿಸಿ ಅದರ ಪ್ರಕಟಣೆಯನ್ನು ಮಾಡಿದ ದಿನವೇ ಈ ಪ್ರಶಸ್ತಿಯೂ ಪ್ರಕಟಗೊಂಡಿರುವುದು ನಮಗೆಲ್ಲಾ ಇನ್ನಷ್ಟು ಸಂತಸವನ್ನು ತಂದಿದೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಈ ಕಾರ್ಯಕ್ರಮವನ್ನು ಆರಂಭಿಸುತ್ತಿದ್ದೇನೆ. ಹಾಲಾಡಿಯವರೆ, ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.

ನಮ್ಮ ವೇದಿಕೆಯ ಸದಸ್ಯರಾದ ಶ್ರೀ ಶಶಿಧರ ಹಾಲಾಡಿಯವರ ಪರಿಚಯ ತಮ್ಮೆಲ್ಲರಿಗೂ ತಿಳಿದೇ ಇದೆ. ಅವರ ಬರಹಗಳ ಪರಿಚಯವನ್ನು ಮಾಡುವ ಒಂದು ಸಾಹಸವನ್ನು ನಾನೀಗ ಮಾಡುತ್ತಿದ್ದೇನೆ. ಏಕೆಂದರೆ ಸರಿಸುಮಾರು ಒಂದು ಘಂಟೆಯ ಆಸುಪಾಸಿನೊಳಗೆ ಎಲ್ಲ ಕೃತಿಗಳ ಪರಿಚಯ ಮಾಡುವುದು ಸಾಹಸವಲ್ಲದೆ ಮತ್ತೇನು?! ಇದೊಂದು ಸಂಪೂರ್ಣ ಅವಲೋಕನ ಎನ್ನಲಾರೆ ನಾನು. ಆದರೆ ಈ ಕಾರ್ಯಕ್ರಮದ ನಂತರ ನಿಮಗೆ ಮೂಲದ ಆ ಪುಸ್ತಕ ಓದುವ ಕುತೂಹಲ, ಅಭಿಲಾಷೆ ಮೂಡಿದರೆ, ಅಷ್ಟರಮಟ್ಟಿಗೆ ಇಂದಿನ ನನ್ನ ಮಾತುಗಳು ಅರ್ಥಪೂರ್ಣ ಎಂದು ಭಾವಿಸುತ್ತೇನೆ.


ಶಶಿಧರ ಹಾಲಾಡಿಯವರು ಇದುವರೆಗೆ ಅಂಕಣ ಬರಹಗಳ ಎಂಟು ಸಂಕಲನ ಗಳನ್ನು ಪ್ರಕಟಿಸಿದ್ದಾರೆ. ಇದರಲ್ಲಿ "ಪ್ರಕೃತಿ ಪ್ರಪಂಚ" ಎನ್ನುವ ಒಂದು ಸಂಕಲನದ ಪ್ರತಿ ನನಗೆ ದೊರೆಯಲಿಲ್ಲ. ಇನ್ನೊಂದು "ಸುಮ ಅರಳುವ ಸಮಯ" ಎಚ್ಚೆಸ್ಕೆ ನೆನಪು ಕಾರ್ಯಕ್ರಮದಲ್ಲಿ ಬಿಡುಗಡೆಯಾದಂತಹ ಪಿ.ಡಿ.ಎಫ್. ಕೃತಿ. ಇವೆರಡೂ ಪುಸ್ತಕಗಳ ಬಗ್ಗೆ ಮುಂದೆಂದಾದರೂ ಒಮ್ಮೆ ನಮ್ಮ ವೇದಿಕೆಯಲ್ಲಿ ಹಂಚಿಕೊಳ್ಳುತ್ತೇನೆ.

ಶಶಿಧರ ಹಾಲಾಡಿ – ವ್ಯಕ್ತಿ ಪರಿಚಯ




ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿಯಲ್ಲಿ ಜನಿಸಿದ ಶಶಿಧರ ಹಾಲಾಡಿಯವರು, ಒಂದು ಚಿನ್ನದ ಪದಕ ಮತ್ತು ಮೊದಲನೆಯ ರ್‍ಯಾಂಕ್‌ನೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಪದವಿ ಪಡೆದಿದ್ದಾರೆ. ಸಾಹಿತ್ಯದಲ್ಲಿ ಮೊದಲಿನಿಂದಲೂ ಆಸಕ್ತಿ ಹೊಂದಿರುವ ಇವರು ಕಾದಂಬರಿ, ಸಣ್ಣ ಕಥೆ, ಪ್ರವಾಸ ಕಥನ, ಕವನ, ನುಡಿಚಿತ್ರ, ಅಂಕಣ ಬರಹ ಮತ್ತು ಪ್ರಬಂಧ ಲೇಖನಗಳನ್ನು ಬರೆದಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿ, ಸ್ವಯಂ ನಿವೃತ್ತಿ ಪಡೆದು, ಸದ್ಯ ಬೆಂಗಳೂರಿನ 'ವಿಶ್ವವಾಣಿ' ದಿನಪತ್ರಿಕೆಯಲ್ಲಿ ಪುರವಣಿ ವಿಭಾಗದಲ್ಲಿ ಮುಖ್ಯ ಉಪಸಂಪಾದಕರಾಗಿದ್ದಾರೆ.

ಅವ್ವ ಸೃಜನಶೀಲ ಸಾಹಿತ್ಯ ಪ್ರಶಸ್ತಿ (ಚಿತ್ತ ಹರಿದತ್ತ ಕೃತಿಗೆ), ಬೆರಗು ಸಾಹಿತ್ಯ ಪ್ರಶಸ್ತಿ (ಅಬ್ಬೆ ಕಾದಂಬರಿಗೆ), ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ, ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಪರಿಷತ್ತು ನೀಡುವ 'ಕನ್ನಡ ಸೇವಾ ರತ್ನ' ಮತ್ತು ಜ್ಞಾನಗಂಗಾ ಸಾಹಿತ್ಯ ರಂಗ ನೀಡುವ 'ಕರುನಾಡು ಸೇವಾ ರತ್ನ' ಪ್ರಶಸ್ತಿಗಳಿಗೆ ಶಶಿಧರ ಹಾಲಾಡಿಯವರು ಭಾಜನರಾಗಿದ್ದಾರೆ.








ಸಮಯಾಭಾವದಿಂದಾಗಿ "ಹಿತ್ತಲಿನಿಂದ ಹಿಮಾಲಯಕ್ಕೆ" ಮತ್ತು "ದೇವರು ಎಚ್ಚರಗೊಂಡಾಗ" ಎರಡೂ ಪ್ರವಾಸ ಕಥನಗಳ ಬಗೆಗಿನ ಲೇಖನವನ್ನು ವೇದಿಕೆಯಲ್ಲಿ ಪ್ರತ್ಯೇಕವಾಗಿ ಪ್ರಸ್ತುತಪಡಿಸುತ್ತೇನೆ. ಮಿಕ್ಕ ಆರು ಸಂಕಲನಗಳು ಮತ್ತು ಎರಡು ಕಾದಂಬರಿಗಳ ಒಂದು ಅವಲೋಕನವನ್ನು ಇಂದು ಮಾಡಲಿದ್ದೇನೆ. ಈ ಪುಸ್ತಕಗಳು ಪ್ರಕಟಗೊಂಡ ಅನುಕ್ರಮದಲ್ಲೇ ಅವುಗಳನ್ನು ಪರಿಚಯಿಸಲು ಯತ್ನಿಸುತ್ತೇನೆ. 'ಉರುಳಿದ ಕಟ್ಟಡ ಮರಳಿದ ನೆನಪು' ಸದ್ಯದಲ್ಲಿಯೇ ಬಿಡುಗಡೆಯಾಗಲಿರುವ ಕೃತಿ.

ಟುವ್ವಿ ಹಕ್ಕಿಯ ಗೂಡು:

ಇದು 2009ರಲ್ಲಿ ಪ್ರಕಟವಾದ 33 ಅಂಕಣ ಬರಹಗಳ ಲೇಖಕರ ಮೊದಲ ಸಂಕಲನ. ಇದರಲ್ಲಿಯ ಹೆಚ್ಚಿನ ಲೇಖನಗಳು ಪರಿಸರದ ಕುರಿತಾಗಿವೆ. ಒಂದೆರಡು ಸ್ವಂತ ಅನುಭವಗಳು, ಜನಜಾಗೃತಿಯ ವಿಷಯಗಳೆನಿಸಿದರೂ ಅವೂ ಒಂದರ್ಥದಲ್ಲಿ ನಮ್ಮ ನೆಲ, ಜಲ, ವಾತಾವರಣಕ್ಕೆ ಸಂಬಂಧಿಸಿದವುಗಳೇ ಆಗಿವೆ.. ಈ ಸಂಕಲನ ಪ್ರಕಟವಾಗಿ ಈಗಾಗಲೇ 13 ವರ್ಷಗಳು ಕಳೆದಿರುವ ಹಿನ್ನೆಲೆಯಲ್ಲಿ ಇಲ್ಲಿನ ಅನೇಕ ವಿಷಯಗಳು ಇಂದು ಪ್ರಸ್ತುತವಲ್ಲದಿದ್ದರೂ ಆ ಕಾಲದ ಚರಿತ್ರೆಯ ದಾಖಲೀಕರಣದ ದೃಷ್ಟಿಯಿಂದ ಉಪಯುಕ್ತ ವೆಂದೇ ಭಾವಿಸುತ್ತೇನೆ.

ಸಂಕಲನದ ಆರಂಭದಲ್ಲಿ ಬರುವ "ಮತ್ತೊಬ್ಬ ಭಸ್ಮಾಸುರ", "ನಾಗಾರ್ಜುನ ಕಾಳಗ", "ಚಾಮಲಾಪುರದ ಉದಾಹರಣೆ", "ಪರಿಸರ ಪ್ರೇಮಿ ಶ್ರೀಗಳು", ಈ ಪ್ರಬಂಧಗಳು ರಾಜ್ಯದ ದಕ್ಷಿಣ ಕನ್ನಡ, ಮೈಸೂರಿನ ಬಳಿಯ ಚಾಮಲಾಪುರ ಹಾಗೂ ಉತ್ತರಕನ್ನಡದಲ್ಲಿ ಸ್ಥಾಪಿಸಲು ನಿರ್ಧರಿಸಿದ ಉಷ್ಣ ವಿದ್ಯುತ್ ಸ್ಥಾವರವನ್ನು ವಿರೋಧಿಸಿದ ಕಾರಣಗಳನ್ನು ವಿಶ್ಲೇಷಿಸುವ ಪ್ರಬಂಧಗಳು. ಜಗತ್ತಿನ ಅತಿ ಅಪರೂಪದ ಜೀವ ವೈವಿಧ್ಯಗಳನ್ನು ಹೊಂದಿರುವ ಕಾಡುಗಳಿರುವ ಇಂತಹ ಪ್ರದೇಶಗಳಲ್ಲಿ ಸ್ಥಾಪಿಸುವ ಇಂತಹ ಘಟಕಗಳ ತ್ಯಾಜ್ಯ, ಹಾರುಬೂದಿ, ಹೊಗೆ ಮೊದಲಾದವು ಪರಿಸರದ ಮೇಲೆ ಬೀರುವ ಪರಿಣಾಮ ಅತಿ ಭಯಂಕರ. ಸೋಂದೆಯ ಸ್ವರ್ಣವಲ್ಲಿ ಮಠದ ಶ್ರೀಗಳು ಪರಿಸರ ಪರವಾದ ಈ ಹೋರಾಟದ ಚಳುವಳಿಯ ಮುಂದಾಳತ್ವ ವಹಿಸಿ ಬೇಡ್ತಿ ಯೋಜನೆಯು ಸ್ಥಗಿತವಾಯಿತು. ಚಾಮಲಾಪುರದ ಯೋಜನೆಯೂ ಜನ ಹೋರಾಟದ ಪರಿಣಾಮವಾಗಿ



ಬಿದ್ದುಹೋಯಿತು. ಆದರೆ ನಾಗಾರ್ಜುನ ಸ್ಥಾವರದ ಯೋಜನೆಯನ್ನು ಪೇಜಾವರ ಶ್ರೀಗಳು ವಿರೋಧಿಸಿದರೂ ಅದು ಫಲ ನೀಡಲಿಲ್ಲ.

“ಅಣುಶಕ್ತಿ ಎಂಬ ಪೆಡಂಭೂತ” ಹಾಗೂ “ವಾತಾವರಣ ಶುದ್ಧಿಗೆ ಅಣುವಿದ್ಯುತ್” ಎರಡೂ ಲೇಖನಗಳು ಅಣುಶಕ್ತಿಯ ಉತ್ಪಾದನೆ, ಮುಂದುವರಿದ ಅಮೇರಿಕಾ ಕೆನಡಾ ಮತ್ತು ಫ್ರಾನ್ಸ್‌ನಂತಹ ದೇಶಗಳು ಭಾರತದಲ್ಲಿ ಸ್ಥಾಪಿಸಲು ಆಸಕ್ತಿ ತೋರಿಸಿರುವ ಹಿನ್ನೆಲೆ, ರಾಜಕೀಯ ಕಾರಣಗಳು, ಸಾಮಾಜಿಕ ಹುನ್ನಾರಗಳು ಇಲ್ಲವೆ. ಇದರಿಂದ ವಾತಾವರಣ ಶುದ್ಧಿಯಾಗುವುದು ನಿಜವೇ? ತ್ಯಾಜ್ಯಗಳ ವಿಲೇವಾರಿ ಹೇಗೆ? ಇದರ ದುಷ್ಪರಿಣಾಮಗಳು ಏನೇನು? ಎನ್ನುವ ಚರ್ಚೆಯೂ ಇಲ್ಲದೆ.

"ಏರುತ್ತಿರುವ ಉಷ್ಣತೆ", “ನೋಬೆಲ್ ಪ್ರಶಸ್ತಿಗೂ ತಟ್ಟಿದ ಬಿಸಿ” ಮತ್ತು “ನೆಲೆ ಬದಲಿಸಿದ ವಾಲ್ರಸ್” ಈ ಮೂರೂ ಬರೆಹಗಳು ಗ್ಲೋಬಲ್ ವಾರ್ಮಿಂಗ್ ಅಥವಾ ಹೆಚ್ಚುತ್ತಿರುವ ಭೂಮಿಯ ತಾಪಮಾನವನ್ನು ಕುರಿತು ಚರ್ಚಿಸುತ್ತವೆ. ವಾತಾವರಣದಲ್ಲಿ ಹೆಚ್ಚುತ್ತಿರುವ ಇಂಗಾಲಾಮ್ಲದಿಂದಾಗಿ ಏರುತ್ತಿರುವ ಭೂಮಿಯ ಉಷ್ಣತೆ ಈಗಾಗಲೇ ಧ್ರುವ ಪ್ರದೇಶಗಳಲ್ಲಿರುವ ಹಿಮವನ್ನು ಕರಗಿಸುತ್ತಿದೆ. ಇದರಿಂದಾಗಿ ಸಮುದ್ರದ ಮಟ್ಟ ಏರಿ ಹಲವು ಭೂಭಾಗ ಮುಳುಗುವ ಸಾಧ್ಯತೆಯಿದೆ. ಉತ್ತರ ಧ್ರುವ ಪ್ರದೇಶದಲ್ಲಿ ವಾಸಿಸುವ ವಾಲ್ರಸ್ ಎಂಬ ದೈತ್ಯ ಸಸ್ತನಿ ಪ್ರಾಣಿಗಳು ಅಲಾಸ್ಕಾ ದೇಶದ ಈಶಾನ್ಯ ಕರಾವಳಿಯಲ್ಲಿ ಕಾಣಿಸಿಕೊಂಡಿರುವುದು ಹೆಚ್ಚುತ್ತಿರುವ ಭೂಮಿಯ ಉಷ್ಣತೆಯಿಂದಲೆ? ಈ ಗ್ಲೋಬಲ್ ವಾರ್ಮಿಂಗ್‌ನಿಂದಾಗಿ ಪ್ರಾಣಿಗಳ ಜೀವನ ಕ್ರಮವೂ ಬದಲಾಗುತ್ತಿದೆಯೇ? ಇದರ ಪರಿಹಾರವೇ ಈ ಶತಮಾನದ ಅತಿದೊಡ್ಡ ಸವಾಲು ಎನ್ನುತ್ತಾರೆ ಲೇಖಕರು. ಗ್ಲೋಬಲ್ ವಾರ್ಮಿಂಗ್ ಬಗ್ಗೆ ಸಂಶೋಧನೆ ನಡೆಸುತ್ತಿರುವ ಐ.ಪಿ.ಸಿ.ಸಿ.ಯ (Intra Governmental panel for climate change) ಅಧ್ಯಕ್ಷರಾಗಿರುವ ರಾಜೇಂದ್ರ ಪಚೌರಿಯವರು ಮತ್ತು ತೀವ್ರವಾಗಿ ಬದಲಾಗುತ್ತಿರುವ ತಾಪಮಾನದ ಕುರಿತು ಪ್ರಚಾರ ನಡೆಸುತ್ತಿರುವ ಅಮೇರಿಕಾದ ಮಾಜಿ ಉಪಾಧ್ಯಕ್ಷ ಅಲ್ಗೋರೆಯವರು 2008ರ ನೋಬೆಲ್ ಪ್ರಶಸ್ತಿಯನ್ನು ಹಂಚಿಕೊಂಡಿರುವುದು ಈ ವಿಷಯದ ಮಹತ್ವವನ್ನು ಸಾರುತ್ತದೆ.

“ಮಂಗವೊಂದನ್ನು ಉಳಿಸಲು ಡ್ಯಾಂ ನಿರ್ಮಾಣವನ್ನು ಸ್ಥಗಿತಗೊಳಿಸಲಾಗದು” ಎಂದ ರಾಜಕೀಯ ನಾಯಕನಿಗೆ ಸವಾಲೆಸೆದು ಅಣೆಕಟ್ಟು ನಿರ್ಮಾಣ ಸ್ಥಗಿತಗೊಂಡಿದ್ದು “ಕೋತಿ ರಕ್ಷಿಸಿದ ಕಾಡು” ಲೇಖನದಲ್ಲಿದೆ. ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ, ಸಿಂಗಳೀಕನನ್ನೂ ಒಳಗೊಂಡು ಹಲವು ಪ್ರಾಣಿ ಪ್ರಭೇದಗಳಿರುವ, ಮಾನವನ ಯಾವುದೇ ಅತಿಕ್ರಮ ಚಟುವಟಿಕೆಗಳಿಗೆ ಆಸ್ಪದವಿರದ ಪುರಾತನ ಕಾಡನ್ನು ಹಾಗೆಯೇ ಉಳಿಸಿಕೊಂಡಿರುವ ಸೈರಂಧ್ರಿವನದಲ್ಲಿ (ಸೈಲೆಂಟ್ ವ್ಯಾಲಿ) ಹರಿಯುತ್ತಿರುವ ಕುಂತಿ ನದಿಗೆ ಅಣೆಕಟ್ಟು ಕಟ್ಟುವ ಯೋಜನೆಯು ಜನರ ವಿರೋಧದಿಂದ ಸ್ಥಗಿತಗೊಂಡು, ಕೇರಳ ಸರ್ಕಾರ ಅದನ್ನು ಪ್ರವಾಸಿ ತಾಣವಾಗಿ ಮಾಡಿಕೊಂಡ ಕತೆಯಿದು.

“ಕಾಡಿನ ಮರದಿಂದ ಖಾದ್ಯ ತೈಲ” ಇನ್ನೊಂದು ಸಂಕಲನದಲ್ಲಿ ಚರ್ಚಿತವಾಗಿರುವುದರಿಂದ ಇಲ್ಲಿ ಬಿಡುತ್ತಿದ್ದೇನೆ. “ಕಪ್ಪೆ ಕತೆ”, “ನಿಗೂಢಗಳ ಆಗರ ಬಾವಲಿ”, “ಕೂರ್ಮಪುರಾಣ”, “ಹೊಸ ಜೀವಿಗಳ ಶೋಧ” ಮತ್ತು

“ಕಪ್ಪೆಯ ಹೊಸ ತಳ” ಇವೆಲ್ಲವೂ ಪ್ರಾಣಿ ಪ್ರಪಂಚಕ್ಕೆ ಸಂಬಂಧಿಸಿದ ಲೇಖನಗಳು. ಅವುಗಳಿರುವ ದೇಶ, ಜೀವನ ವಿಧಾನ, ಅವುಗಳ ವೈಶಿಷ್ಟ್ಯಗಳು ಇಲ್ಲಿ ಚರ್ಚಿತವಾಗಿವೆ. 940 ಪ್ರಭೇದಗಳ ಬಾವಲಿಗಳಿದ್ದು, ಹಗಲಲ್ಲಿ ತಲೆಕೆಳಗಾಗಿ ಜೋತುಬಿದ್ದು ನಿದ್ರಿಸುವ, ಹಾರುವ ಈ ಸಸ್ತನಿಗಳು ಶಬ್ದತರಂಗಗಳ ಮೂಲಕ ನೋಡಬಲ್ಲವು. ಶ್ರವಣಾತೀತ ಶಬ್ದ ತರಂಗವನ್ನೂ ಮಾಡಬಲ್ಲವು ಮತ್ತು ಅದರ ಪ್ರತಿಧ್ವನಿಯನ್ನು ನಿಖರವಾಗಿ ಗುರುತಿಸಿ ತಮ್ಮ ಆಹಾರವನ್ನು ಹುಡುಕಿಕೊಳ್ಳಬಲ್ಲವು ಎನ್ನುವ ವಿಷಯ ಕುತೂಹಲಕಾರಿ. ಮನುಷ್ಯನಿಗಿಂತ ಬಹಳ ಮುಂಚಿತವಾಗಿ ಭೂಮಿಗೆ ಬಂದು, ಡೈನೋಸರ್‌ಗಳಂತಹ ಪೆಡಂಭೂತಗಳ ಜೊತೆಯಲ್ಲೂ ಜೀವನ ಸಾಗಿಸಿದ ಆಮೆಗಳು ಈಗ ನಮ್ಮೊಂದಿಗೂ ಇನ್ನೂ ಜೀವಿಸುತ್ತಿವೆ. ಮಾನವನಿಂದಾಗಿಯೇ ಸಂಕಷ್ಟಕ್ಕೆ ಗುರಿಯಾಗಿವೆ. ಕಡಲಾಮೆಗಳು ಹೆಚ್ಚಿದರೆ ಕಡಲಿನ ಮೀನಿನ ಸಂತತಿಯೂ ವೃದ್ಧಿಯಾಗುವುದು ಎನ್ನುವುದು ಗಮನಿಸಬೇಕಾದ ವಿಚಾರ. ಜಗತ್ತಿನ ಹಲವು ಜೀವವೈವಿಧ್ಯವಿರುವ 12 ದೇಶಗಳಲ್ಲಿ ಭಾರತವೂ ಒಂದು. ಅರುಣಾಚಲ ಪ್ರದೇಶದಲ್ಲಿ ಪತ್ತೆಯಾಗಿರುವ ಮಾಂಜುಲ ಜಾತಿಯ ಮಂಗಗಳನ್ನೂ ಒಳಗೊಂಡು ಕಳೆದ ಕೆಲವು ವರ್ಷಗಳಲ್ಲಿ ಹಲವು ಪ್ರಾಣಿಗಳು ಪತ್ತೆಯಾಗಿವೆ. ಹಂದಿಮೂತಿಯ ಕಪ್ಪೆ ನೂರು ಮಿಲಿಯ ವರ್ಷಗಳಿಂದಲೂ ಭೂಮಿಯ ಮೇಲಿತ್ತು ಎನ್ನುವ ಅಂಶ ಬೆಳಕಿಗೆ ಬಂದಿದೆ. ಕೇರಳದ ಕುರುಚಿಯರ್ ಕಾಡುಗಳಲ್ಲಿ ನಿಕ್ಟಿಬಾಟ್ರಾಕಸ್ ಪ್ರಭೇದಕ್ಕೆ ಸೇರಿದ 1 ಸೆ.ಮೀ. ಉದ್ದದ ಅತಿ ಚಿಕ್ಕ ಕಪ್ಪೆ ಇತ್ತೀಚೆಗೆ ಪತ್ತೆಯಾಗಿದೆ.

ಗುಬ್ಬಿ, ಸೂರಕ್ಕಿ ಮತ್ತು ಟುವ್ವಿ ಹಕ್ಕಿಗಳ ಬಗೆಗಿನ ಮಾಹಿತಿ “ಗುಬ್ಬಿ ನೀನೆಲ್ಲಿಗೆ ಹೋದೆ?” “ಚೆಂದದ ಸೂರಕ್ಕಿ” ಮತ್ತು “ಟುವ್ವಿ ಹಕ್ಕಿಯ ಗೂಡು”ಗಳಲ್ಲಿ ಸಿಗುತ್ತದೆ. ವಾಸಸ್ಥಳದ ಕೊರತೆಗಿಂತ ಹೆಚ್ಚಾಗಿ ಬೆಳೆಗಳಲ್ಲಿ ಕೀಟನಾಶಕಗಳ ಬಳಕೆಯಿಂದಾಗಿ, ಹುಳುಹುಪ್ಪಟೆಗಳಿಲ್ಲದೆ ಆಹಾರದ ಕೊರತೆಯಿಂದಾಗಿ, ಕಲುಷಿತ ಧಾನ್ಯಗಳಿಂದಾಗಿ, ಗುಬ್ಬಿಯ ಮೊಟ್ಟೆಗಳ ಮೇಲ್ಮೈ ತೆಳುವಾಗಿ ಸಂತತಿ ಕುಂಠಿತವಾಗುತ್ತಿದೆ ಎನ್ನುವುದು ಆತಂಕಕಾರಿ ವಿಷಯವಾಗಿದೆ.. ಟುವ್ವಿ ಟುವ್ವಿ ಎಂದು ಕೂಗುವ, ಗೂಡನ್ನು ನಾಜೂಕಾಗಿ ಒಂದೆರಡು ಎಲೆಗಳನ್ನು ಸೇರಿಸಿ ಹೊಲಿದು ಕಟ್ಟುವ ಈ ಹಕ್ಕಿಗೆ ಟೇಲರ್ ಬರ್ಡ್ ಎಂದೂ ಹೆಸರು. ಗುಬ್ಬಿಗಳಿಗಿಂತ ಪುಟ್ಟ ಹಕ್ಕಿಯಿದು. ಸೂರಕ್ಕಿಗಳ ಬಗೆಗಿನ ಮಾಹಿತಿ ಮುಂದಿನ ಇನ್ನೊಂದು ಪ್ರಬಂಧದಲ್ಲೂ ಇದೆ.

ರಾಮಾಯಣದ ಕತೆಯಲ್ಲಿ ಬರುವ ಶ್ರವಣಕುಮಾರನು ತನ್ನ ತಾಯ್ತಂದೆಯರಿಗಾಗಿ ನೀರು ತುಂಬಿಕೊಂಡ ಕೆರೆಯೆಂದು ಗುರುತಿಸಿಕೊಂಡಿರುವ ಶ್ರವಣ್ ತಾಲ್ ಭರತ್ಪುರದಲ್ಲಿರುವ ಒಂದು ಪಕ್ಷಿಧಾಮ. ಇದರ ವಿವರಗಳು ಪಕ್ಷಿವೀಕ್ಷಕರ ‘ಕಾಶಿ’ ಈ ಪ್ರಬಂದದಲ್ಲಿ ದೊರೆಯುತ್ತದೆ. ಬೇಟೆಯಾಡುವ ನೆಪದಲ್ಲಿ ಸಾವಿರಾರು ಬಾತುಕೋಳಿಗಳ ಮಾರಣ ಹೋಮವಾಗುತ್ತಿದ್ದ ಈ ತಾಣವು ಪಕ್ಷಿಧಾಮವಾಗಿ ಉಳಿದುಕೊಂಡದ್ದು ಪಕ್ಷಿ ವೀಕ್ಷಕ ಸಲೀಂ ಅಲಿಯವರ ಶ್ರಮದಿಂದ. ಇಲ್ಲಿ 425 ಜಾತಿಯ ಹಕ್ಕಿಗಳನ್ನು ಗುರುತಿಸಲಾಗಿದೆ.

ಪ್ರಕೃತಿಯಲ್ಲಿ ದೊರೆಯುವ ಪ್ರತಿ ಬೇರೆಬೇರೆ ಬಣ್ಣದ ಹಣ್ಣು ಮತ್ತು ತರಕಾರಿಗಳು ಬೇರೆಬೇರೆ ರೀತಿಯ ಆ್ಯಂಟಿ ಆಕ್ಸಿಡೆಂಟ್‌ಗಳ ಆಗರ. ದೇಹದಲ್ಲಿ ಆ್ಯಂಟಿ ಆಕ್ಸಿಡೆಂಟ್‌ಗಳ ಸಮತೋಲನವನ್ನು ಸಾಧಿಸಿ, ಉಂಡಾಡಿ ಕಣ (ಟಾಕ್ಸಿನ್)ಗಳನ್ನು ಹದ್ದುಬಸ್ತಿನಲ್ಲಿಡುವ ಉಪಾಯವೆಂದರೆ ದಿನವೂ ಒಟ್ಟು ಕನಿಷ್ಠ 5 ಬಗೆಯ ಬಣ್ಣದ ತರಕಾರಿ ಮತ್ತು ಹಣ್ಣುಗಳನ್ನು ಸೇವಿಸುವುದು ಎನ್ನುತ್ತಾರೆ ಲೇಖಕರು, ತಮ್ಮ “ಹಣ್ಣಿನ ಬಣ್ಣ” ಲೇಖನದಲ್ಲಿ. ಹಣ್ಣಿಗೇನೋ ಬಣ್ಣ ಸರಿ; ಆದರೆ ಆಹಾರ ಪದಾರ್ಥಗಳಲ್ಲಿ, ಕಾನೂನನ್ನು ಉಲ್ಲಂಘಿಸಿ ಬಳಸುವ ಕೃತಕ ಬಣ್ಣಗಳು, ಸಂರಕ್ಷಕಗಳು ಅನೇಕ ವಿಷಮ ಖಾಯಿಲೆಗಳನ್ನು ತರಬಲ್ಲವು ಎನ್ನುವ ವಿಷಯ “ಬಣ್ಣ ಬಣ್ಣದ ವಿಷಗಳು”

ಲೇಖನದಲ್ಲಿ ಸಮಗ್ರವಾಗಿ ಚರ್ಚಿತವಾಗಿದೆ. ಬಣ್ಣಗಳಲ್ಲಿ ಬಳಸುವ ಸೀಸವು ಮಕ್ಕಳ ಮೆದುಳಿನ ಮೇಲೆ ಪರಿಣಾಮ ಮಾಡುತ್ತಿದೆ ಎನ್ನುವುದು ಸಿದ್ಧವಾಗಿರುವ ಅಂಶ. ಗಣಪತಿಗೆ ಸಹಜ ಬಣ್ಣಗಳನ್ನು ಬಳಸಬೇಕು ಎನ್ನುವಂತೆಯೇ ದಿನನಿತ್ಯದ ಬಳಕೆಯಲ್ಲೂ ಎಲ್ಲಾ ಪರಿಸರ ಹಾನಿಕಾರಕ ವಸ್ತುಗಳನ್ನು ತ್ಯಜಿಸಬೇಕು. ಧ್ವನಿಮಾಲಿನ್ಯ, ಜಲಮಾಲಿನ್ಯ, ಪರಿಸರ ಮಾಲಿನ್ಯ ಎಲ್ಲವೂ ನಿಲ್ಲಬೇಕು ಎನ್ನುವ ಲೇಖಕರ ನಿಲುವು "ಸಹಜ ಬಣ್ಣದ ಗಣಪತಿ" ಬರೆಹದಲ್ಲಿದೆ.

ಕೈಗಾರಿಕೆ ಮತ್ತು ನೀರಿನ ಪರಿಶುದ್ಧತೆ – ಇವೆರಡೂ ಪರಸ್ಪರ ವಿರುದ್ಧವಾದವುಗಳು. ಇವೆರಡರ ನಡುವೆ ಸಮತೋಲನವನ್ನು ಕಾಯ್ದುಕೊಂಡು ಈ ಭೂಮಿಯನ್ನು ವಾಸಯೋಗ್ಯವಾಗಿ ಇರಿಸಿಕೊಳ್ಳುವುದೊಂದು ಸವಾಲಾಗಿದೆ ಎನ್ನುತ್ತಾರೆ ಲೇಖಕರು – ಭದ್ರಾ ನದಿಯ ಹಿನ್ನೆಲೆಯಿರುವ "ನದಿ ನೀರಿಗೆ ವಿಷ" ಪ್ರಬಂಧದಲ್ಲಿ. ಹರಿಯುತ್ತಿದ್ದ ಕಾವೇರಿಗೆ ಅಣೆಕಟ್ಟು ಹಾಕಿ ಅದನ್ನು ಕರ್ನಾಟಕದ ಉಪಯೋಗಕ್ಕೆ ಬಳಸಿಕೊಳ್ಳುವ ಯೋಜನೆ ಸರ್. ಎಂ. ವಿಶ್ವೇಶ್ವರಯ್ಯನವರದ್ದು. ಯೋಜನೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಎದುರಾದ ಸಾಕಷ್ಟು ಅಡೆತಡೆ, ವಿವಾದ, ರಾಜಕೀಯ ಹುನ್ನಾರಗಳನ್ನು ಕುರಿತು ಹೇಳುವ ಲೇಖನ "ಕಾವೇರಿಯ ಕಲರವ". ಬೆಳ್ವೆ ಬಳಿಯಿರುವ ಸೀತಾನದಿಯ ನೀರು 20 ಅಡಿ ಮೇಲಿನಿಂದ ಬೀಳುವ ಜೋಮ್ಲು ಜಲಪಾತವಾಗಿದೆ. ಸೌಬರಿ ಮುನಿಯು ತಪಸ್ಸು ಮಾಡಿದ ಈ ತಾಣ ಹಿಂದೆ ಇದ್ದ ಕಾಡಿನ ಪರಿಸರವನ್ನು ಕಳೆದುಕೊಳ್ಳುತ್ತಿದೆ. ನಿಧಾನವಾಗಿ ವನ್ಯಜೀವಿಗಳು ನಾಡಿನ ಕಡೆ ಮುಖ ಮಾಡುತ್ತಿವೆ. ಅವಕ್ಕೆ ಮಾನವನಿರುವ ಜಾಗಕ್ಕೆ ಬರುತ್ತಿದ್ದೀವೆಂಬ ಅರಿವಿಲ್ಲ. ನಮಗಾದರೂ ಅವುಗಳ ಜಾಗವನ್ನು ನಾವು ಕಿತ್ತುಕೊಳ್ಳುತ್ತಿದ್ದೀವೆನ್ನುವ ಅರಿವಿರಬೇಕಲ್ಲವೇ? ಎನ್ನುವ ಪ್ರಶ್ನೆಯನ್ನು ಮುಂದಿಡುತ್ತಾರೆ ಲೇಖಕರು, ತಮ್ಮ "ಜಲಪಾತದ ಸುತ್ತಮುತ್ತ" ಲೇಖನದಲ್ಲಿ.


ಪ್ರತಿವರ್ಷ ದೂರದ ಮೆಕ್ಸಿಕೋ ಮತ್ತು ಆಸ್ಟ್ರೇಲಿಯಾದಿಂದ ದ್ವಾರಕೆಗೆ ಹೆರಿಗೆಗೆ ಬರುವಂತೆ ಬರುತ್ತಿದ್ದ ಶಾರ್ಕ್ ತಿಮಿಂಗಿಲಗಳನ್ನು, ಕಾನೂನಿನ ರಕ್ಷಣೆಯಿದ್ದರೂ ಅದನ್ನು ಪಾಲಿಸದೆ, ಇಲ್ಲಿನ ಖಾರ್ವಾ ಜನಾಂಗದ ಮೀನುಗಾರರು ಹಿಡಿದು ಮಾರುತ್ತಿದ್ದರು. ಸ್ವಾಮಿ ಮೊರಾರಿ ಬಾಪುರವರು ಸೂಕ್ತವಾಗಿ ಅವರ ಮನವೊಲಿಸಿ. ಅವುಗಳ ಜೀವ ಉಳಿಸುವಲ್ಲಿ ಮಹತ್ವದ ಪಾತ್ರವಹಿಸಿದ ಕತೆ "ಮೀನಿನ ರಕ್ಷಣೆಗೆ ಸ್ವಾಮಿಗಳು" ಲೇಖನದಲ್ಲಿದೆ. ಮಕ್ಕಳು ಚಿಕ್ಕವರಿದ್ದಾಗಲೇ ಅವರಿಗೆ ಪ್ರಕೃತಿಯ ಮಹತ್ವ, ಶುದ್ಧ ನೀರಿನ ಬೆಲೆ, ತಿಳಿಗಾಳಿಯ ಅಮೂಲ್ಯತೆಗಳ ಬಗ್ಗೆ ತಿಳುವಳಿಕೆ ನೀಡಿದರೆ ಮುಂದೆಯೂ ಅವರು ಪರಿಸರವನ್ನು ರಕ್ಷಿಸುವಲ್ಲಿ ಮುಂದೆ ನಿಲ್ಲುವ ಸಾಧ್ಯತೆ ದಟ್ಟವಾಗಿದೆ ಎನ್ನುತ್ತಾರೆ ಲೇಖಕರು "Catch them young" ಲೇಖನದಲ್ಲಿ. ಸಿಗರೇಟು, ಬೀಡಿಗಳ ಸೇವನೆಯಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳು, ಪ್ರಕೃತಿಯ ಮೇಲಾಗುತ್ತಿರುವ ಆಕ್ರಮಣ ಎಲ್ಲದರ ವಿಶ್ಲೇಷಣೆ "ಶಾಸನ ವಿಧಿಸಿದ ಎಚ್ಚರಿಕೆ" ಲೇಖನದಲ್ಲಿದೆ.

"ಕಣ್ಮರೆಯಾಗುತ್ತಿರುವ ಕಲ್ಲುಗಳು" ಪ್ರಬಂಧವು ನಿರ್ಮಾಣಕ್ಕಾಗಿ ಹಾಗೂ ಗಣಿಗಾರಿಕೆಗಾಗಿ ಶಿಲೆಗಳನ್ನೂ, ಅದಿರುಗಳನ್ನೂ ಬರಿದುಮಾಡುತ್ತಿರುವುದರಿಂದ ವಾತಾವರಣದಲ್ಲಿ ಕಲ್ಮಷ ಸೇರಿಕೊಳ್ಳುತ್ತಿದೆ. ಹಿಂದಿದ್ದ ಬೆಟ್ಟ, ಗುಡ್ಡ, ನದಿ, ಕಲ್ಲು ಇಂತಹ ನಿಸರ್ಗದ ಕೊಡುಗೆಗಳ ಮೇಲಿನ ಆತ್ಮೀಯ ಭಾವ ಇಂದು ಮರೆಯಾಗುತ್ತಾ ಈ ವಿನಾಶಗಳನ್ನು ನಿರ್ಲಿಪ್ತವಾಗಿ ನೋಡುವ ಮನೋಭಾವ ನಮ್ಮಲ್ಲಿ ಬೆಳೆಯುತ್ತಿದೆ ಎನ್ನುವ ಕಟುಸತ್ಯವನ್ನು ನಮ್ಮೆದುರಿಗಿಡುತ್ತದೆ. "ಪ್ರಜ್ವಲಿಸುವ ದೀಪಗಳು" ಲೇಖನದಲ್ಲಿ, ಹಿಂದೆ ದೀಪಾವಳಿ ಆಚರಿಸುತ್ತಿದ್ದ ವಿಧಾನ. ಕ್ರಮವಾಗಿ ಪಟಾಕಿ ಬಂದದ್ದು, ಅದರ ಸದ್ದಿಗೆ ದನಕರುಗಳು ಹೆದರುತ್ತಿದ್ದದ್ದು ಈ ಎಲ್ಲಾ ಮಾಹಿತಿಗಳನ್ನು

ನೀಡುತ್ತಾ, ಖುಷಿ ಬಂದಾಗೆಲ್ಲಾ ಪಟಾಕಿಯನ್ನು ಸುಟ್ಟು ವಾತಾವರಣವನ್ನು ಮಲಿನಗೊಳಿಸುವುದು ಎಷ್ಟು ಸರಿ? ಎಂದು ಪ್ರಶ್ನಿಸಿದ್ದಾರೆ ಲೇಖಕರು.

ಒಂದು ಗೂಳಿಗಳ ಗುಂಪು, ಸಿಂಹಗಳ ಗುಂಪಿನೊಂದಿಗೆ ಹೋರಾಡಿ ತನ್ನ ಕರುವನ್ನು ರಕ್ಷಿಸಿಕೊಂಡ ಸಾಹಸದ ವೀಡಿಯೋ ಚಿತ್ರದ ಹಿನ್ನೆಲೆಯಲ್ಲಿ, 'ವೀಡಿಯೋಗಳು ನೋಡುಗನ ಮೇಲೆ ಬೀರುವ ಪರಿಣಾಮವನ್ನು ಒಂದು ಪುಸ್ತಕ ಮೂಡಿಸಲಾಗದು. ಮುಂಬರುವ ದಿನಗಳಲ್ಲಿ ಪುಸ್ತಕಗಳ ಆಕರ್ಷಣೆ ಇರಬಲ್ಲದೇ?' ಎಂದು "ಕಾಡಿನ ಒಂದು ಚಿತ್ರ"ದಲ್ಲಿ ಚರ್ಚಿಸಿದ್ದಾರೆ."ಮಂಗಳನ ನೆಲದಲ್ಲಿ ಜೀವಜಲ" ಲೇಖನದಲ್ಲಿ ಮಂಗಳನ ಅಂಗಳದಲ್ಲಿ ನೀರಿದೆ, ಅಲ್ಲಿ ಜೀವಿಗಳು ಇರುವ ಸಾಧ್ಯತೆಯೂ ಇದೆ ಎನ್ನುವುದನ್ನು ನಾಸಾದ ವಿಜ್ಞಾನಿಗಳು ಉಪಗ್ರಹದಿಂದ ಲಭ್ಯವಾದ ಮಾಹಿತಿಗಳ ಆಧಾರದಲ್ಲಿ ಖಚಿತಪಡಿಸಿದ್ದಾರೆ. ಅವು ಪ್ರಾಥಮಿಕ ಹಂತದ ಏಕಕೋಶ, ಪಾಚಿ ಇಂತಹ ಜೀವಿಗಳೇ ಅಥವಾ ಬುದ್ಧಿಮತ್ತೆ ಇರುವ ಜೀವಿಗಳೇ ಎನ್ನುವುದು ಇನ್ನೂ ಸಂಶೋಧನೆಗೆ ಒಳಪಡಬೇಕಾಗಿದೆ. ಅಂತೆಯೇ 'ಬೇರೆ ಗ್ರಹಗಳಲ್ಲೂ ಜೀವಿಗಳಿರಬಹುದೇ, ಬುದ್ಧಿಮತ್ತೆ ಇರುವ ಜೀವಿಗಳಾಗಿದ್ದು ನಮ್ಮನ್ನೂ ಗಮನಿಸುತ್ತಿರಬಹುದೇ?' ಎನ್ನುವ ಪ್ರಶ್ನೆಯನ್ನೂ ಎತ್ತಿದ್ದಾರೆ.

ಸಾಕಷ್ಟು ವೈವಿಧ್ಯತೆಯಿರುವ ಈ ಲೇಖನಗಳು ವಿಷಯ ಪ್ರಚೋದಕವೂ ಆಗಿವೆ. ಸಂಕಲನವನ್ನು ಓದಿ ಕೆಳಗಿಟ್ಟ ಮೇಲೂ ತಲೆ ವಿಚಾರಗಳ ಗೂಡಾಗಿರುತ್ತದೆ.



ಓಲಿಕೊಡೆ

'ಓಲಿಕೊಡೆ' – ಬಾಲ್ಯದ ನೆನಪುಗಳ ಕುರಿತಾದ ಎರಡನೆಯ ಅಂಕಣ ಬರಹಗಳ ಸಂಗ್ರಹ. ಪ್ರಕಟವಾಗಿದ್ದು 2010ರಲ್ಲಿ. ನಿಸರ್ಗದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ತಮ್ಮ ಬಾಲ್ಯದ ನೆನಪುಗಳನ್ನು ಹಾಲಾಡಿಯವರು ಇಲ್ಲಿನ ಲೇಖನಗಳಲ್ಲಿ ದಾಖಲಿಸಿದ್ದಾರೆ. ಸಂಕಲನದಲ್ಲಿರುವ 26 ಪ್ರಬಂಧಗಳಲ್ಲಿ ಮೊದಲನೆಯದ್ದೇ "ಓಲಿಕೊಡೆ". ಬಿದುರಿನ ಹಂದರಕ್ಕೆ ಓಲಿಎಲೆಗಳನ್ನು ಹೊದಿಸಿ ಮಾಡಿದ, ಗೇಣುದ್ದದ ಬಿದುರಿನ ಹಿಡಿಯಿರುವ, ಮಡಿಚಲು ಬಾರದ ಕೊಡೆ. ಇದು 50-60 ವರ್ಷಗಳ ಹಿಂದಿನ ಮಲೆನಾಡಿನ 'ಐಕಾನ್'ಗಳಲ್ಲಿ ಒಂದು ಎನ್ನಬಹುದು. ಎರಡನೆಯ ಪ್ರಬಂಧವು ಮನೆಯಿಂದ ಬೈತಲೆಯಂತೆ ಗದ್ದೆಯಲ್ಲಿ ಸಾಗಿ ಮುಖ್ಯರಸ್ತೆಗೆ ತಲುಪಿಸುತ್ತಿದ್ದ ಕಾಲುದಾರಿಯಾದ "ಬೈಲುದಾರಿ"ಯ ಬಗ್ಗೆ. ವಿವಿಧ ಋತುಗಳಲ್ಲಿ ಬದಲಾಗುತ್ತಿದ್ದ "ಆ ಬಯಲಿನ ಸ್ವರೂಪವು ಒಂದು ನಿಸರ್ಗಶಾಲೆಯಾಗಿತ್ತು; ಶಾಲಾದಿನಗಳಲ್ಲಿ ನನಗೆ ಓರ್ವ ಅಮೂರ್ತ ಸಂಗಾತಿಯೇ ಆಗಿತ್ತು" ಎನ್ನುತ್ತಾ ಮೈಲುಗಟ್ಟಲೆ ದಿನವೂ ಶಾಲೆಗೆ ಹೋಗಿಬರಲು ನಡೆಯುತ್ತಿದ್ದ ಹಾದಿಯನ್ನು ನೆನಪಿಸಿಕೊಂಡಿದ್ದಾರೆ.

ಮುಂದಿನ ಲೇಖನ "ಗುಡ್ಡೆದಾರಿ" ಯಲ್ಲಿ ಬಾಲ್ಯಕಾಲದಲ್ಲಿ ತಾವು ದಿನವೂ ಓಡಾಡುತ್ತಿದ್ದ ಕಾಡಿನ ಪರಿಸರದ ಅನುಭವವನ್ನು ಹೀಗೆ ದಾಖಲಿಸುತ್ತಾರೆ "ಹಕ್ಕಿಗಳ ಹಾಡಿನ ಜೊತೆ ಕಾಡು ನುಡಿಯುವ ಪಿಸುಮಾತನ್ನು ಸಹಾ ಅಲ್ಲಿ ಕೇಳಬಹುದಿತ್ತು! ಮರಗಿಡಗಳು ಮಾತನಾಡುತ್ತವೆ, ಪಿಸುಗುಡುತ್ತವೆ, ಹಾಡುತ್ತವೆ ಎಂಬ ವಿಚಾರವೇ

ಅಮೂರ್ತವೆಂದರೆ ಅಮೂರ್ತ, ಮೂರ್ತವೆಂದರೆ ಮೂರ್ತ– ಕಾಡಿನ ಜೊತೆಗೆ ವಾಸಿಸುವವರಿಗಂತೂ ಅವೆಲ್ಲಾ ತೀರಾ ಸ್ಪಷ್ಟ" ಈ ಸಾಲುಗಳನ್ನೋದುವಾಗ ಓದುಗನಿಗೆ ಇದರ ಸ್ಪಷ್ಟವಾದ ಅರ್ಥವನ್ನು ಹೇಳಲು ಸಾಧ್ಯವಾಗದಿದ್ದರೂ ಆ ಭಾವದ ಅನುಭವವಾಗುತ್ತದೆ. ತಮ್ಮ ಮನೆಯ ಸುತ್ತಲೂ ಇದ್ದ ಅಮಟೆ, ಬಿಂಬಲ, ಬಕುಳ, ಮಾವು, ಸುರಗಿ, ಪೇರಳೆ ಮುಂತಾದ ಮರಗಳು ತಮ್ಮ ಬಾಲ್ಯದ ನೆನಪುಗಳಲ್ಲಿ ಅಚ್ಚೊತ್ತಿರುವುದನ್ನು "ಮನೆ ಸುತ್ತಲೂ ಇರುವ ಮರಗಳು" ಬರೆಹದಲ್ಲಿ ನೆನಪಿಸಿಕೊಳ್ಳುತ್ತಾರೆ.

ಬಕುಳ, ಬಾಗಾಳು ಅಥವಾ ರಂಜದ ಹೂವು ಮಲೆನಾಡಿಗರ ಮತ್ತು ಘಟ್ಟದ ತಗ್ಗಿನವರ ಜನಜೀವನದಲ್ಲಿ ಸಂಸ್ಕೃತಿಯ ಭಾಗವಾಗಿ ಬೆರೆತುಹೋಗಿವೆ. ಮದುವೆಯಲ್ಲಿ ಒಣಗಿದ ಬಕುಲದ ಹಾರವನ್ನಾದರೂ ಧರಿಸುವ ಸಂಪ್ರದಾಯವಿದೆ. "ನಕ್ಷತ್ರ ರೂಪದ ಆ ಹೂವು ನಿಧಾನವಾಗಿ ಚಕ್ರದಂತೆ ತಿರುಗುತ್ತಾ ಕೆಳಗಿಳಿಯುವ ಸೌಂದರ್ಯವನ್ನು ಹೋಲಿಸಲು ಬೇರಾವುದೇ ಹೋಲಿಕೆ ಸಿಗುತ್ತಿಲ್ಲ" ಎನ್ನುತ್ತಾರೆ, "ಬಕುಲವೆಂಬ ಭಾವಗೀತೆ" ಪ್ರಬಂಧದಲ್ಲಿ. ಪೋರ್ಚುಗೀಸರಿಂದ ಈ ಭಾಗಕ್ಕೆ ಬಂದ "ಗೋಯ್ ಬೀಜ" ಅಥವಾ ಗೋಡಂಬಿಯ ಬಗೆಗೇ ಒಂದು ಪ್ರಬಂಧವಿದೆ. ಕರಾವಳಿಯಲ್ಲಿ ಮಾವು ಮತ್ತು ಹಲಸುಗಳನ್ನು ಉಪಯೋಗಿಸುವ ರೀತಿಯೇ ವಿಶಿಷ್ಟ. ಅವುಗಳ ಸಂಪೂರ್ಣ ವಿವರವಿದೆ, "ಮಾವಿನ ಮಿಡಿ" ಮತ್ತು "ಹಲಸಿನ ಹಣ್ಣಿನ ಹಬ್ಬ" ಲೇಖನಗಳಲ್ಲಿ.

ಬಾಲ್ಯದಲ್ಲಿ ವಿವಿಧ ಸ್ಥಳಗಳಿಗೆ ಸ್ಥಳಾಂತರಗೊಳ್ಳುತ್ತಿದ್ದ ತಮ್ಮ "ಮುದೂರಿ ಶಾಲೆ"ಯನ್ನು ನೆನಪಿಸಿಕೊಳ್ಳುವ ಲೇಖಕರು ಅದರ ಮುಂದಿನ "ಭೂತದ ರಹಸ್ಯ" ಪ್ರಬಂಧದಲ್ಲಿ ಕೆಲವು ಸ್ವಾರಸ್ಯಕರ ಘಟನೆಗಳನ್ನು ಸ್ಮರಿಸಿಕೊಂಡಿದ್ದಾರೆ. ದೂಪದ ಮರದಲ್ಲಿ ಮಂಗಗಳು ಹಾರಿದಾಗ ಭೂತವೆಂದು ಭ್ರಮಿಸಿದ್ದು, ಭೂಕಂಪವಾದಾಗ ಕೆಲವರು ಅದನ್ನು ಭೂತವೆಂದುಕೊಂಡು ಹೆದರಿದ್ದು ಇಂತಹ ಕೆಲವು ಆಸಕ್ತಿದಾಯಕ ಘಟನೆಗಳು ಈ ಪ್ರಬಂಧದಲ್ಲಿವೆ. ಅಂದಿನ ದಿನಗಳಲ್ಲಿ ಯಾವುದೇ ಆತಂಕವಿಲ್ಲದೆ ನಿರಾಳವಾಗಿ ಓದಿದ್ದು, ಕುಂದಾಪುರದ ಹೋಟೇಲಿನಲ್ಲಿ ವಾರಗಟ್ಟಲೆ ಉಳಿದುಕೊಂಡು ಪರೀಕ್ಷೆ ಬರೆಯುವಂತಹ ಪರಿಸ್ಥಿತಿಯಿದ್ದದ್ದು, ಇಂತಹ ಅಂದಿನ ವಿದ್ಯಾಭ್ಯಾಸದ ರೀತಿಯು "ಪಬ್ಲಿಕ್ ಪರೀಕ್ಷೆ" ಲೇಖನದಲ್ಲಿ ದಾಖಲಾಗಿದೆ. ಆ ದಿನಗಳಲ್ಲಿ ದಿನವೂ ಶಾಲೆಗೆ ಕೊಂಡೊಯ್ಯುತ್ತಿದ್ದ ಉಗ್ಗದ ಪಾತ್ರೆ, ಊಟ ಮಾಡುವಾಗ ಬೇರೆಯವರು ನೋಡಬಾರದೆಂಬ ನಂಬಿಕೆಗನುಗುಣವಾಗಿ ಗೋಡೆಯ ಕಡೆಗೆ ತಿರುಗಿ ಊಟ ಮಾಡುತ್ತಿದ್ದದ್ದು, ಇಂತಹ ಆಸಕ್ತಿದಾಯಕ ವಿಷಯಗಳು "ಬುತ್ತಿಯೂಟ" ಪ್ರಬಂಧದಲ್ಲಿವೆ. ಪರೀಕ್ಷೆಗೆ ಮುಂಚೆ ಮತ್ತು ನಂತರ ಕೊಡುತ್ತಿದ್ದ ಬೇಸಿಗೆಯ ರಜಾದಿನಗಳ ಅನುಭವಗಳು "ಬೇಸಿಗೆ ರಜಾ" ಲೇಖನದಲ್ಲಿವೆ. ಓದಲು ಕೊಡುತ್ತಿದ್ದ ರಜೆಯಲ್ಲಿ ಸಮಾರಾಧನೆಯ ಊಟ ಮಾಡಿಕೊಂಡು, ಪರೀಕ್ಷೆಯ ನಡುವಿನಲ್ಲೇ ಸಿನಿಮಾ ನೋಡಿಬಂದು ನಿರಾಳವಾಗಿ ಪರೀಕ್ಷೆಯನ್ನು ಎದುರಿಸುತ್ತಿದ್ದ ಪ್ರಸಂಗಗಳು ಇಲ್ಲಿವೆ.

"ಮಳೆಗಾಲ ತಂದ ನೆನಪಿನ ಸರ" ಪ್ರಬಂಧದಲ್ಲಿ ಮಳೆಗಾಲ ಶುರುವಾಗುವಾಗಲೇ ಅವತಾರವೆತ್ತುವ ಕಪ್ಪೆ, ಒಳ್ಳೆ ಹಾವು, ಮಿಂಚುಹುಳ, ದೀಪದ ಹುಳಗಳು, ಹೊಸ ಚಿಗುರು, ಸಸ್ಯಗಳು, ಹಕ್ಕಿಗಳು ಇವೆಲ್ಲವುಗಳ ವಿವರಗಳಿವೆ. ಮಳೆಗಾಲ ಆರಂಭವಾಗುತ್ತಿದ್ದ ರೀತಿಯ ವರ್ಣನೆಯನ್ನು ಇಲ್ಲಿ ನೋಡೋಣ. "ನಮ್ಮ ಹಳ್ಳಿಯಲ್ಲಿ ಮಳೆಗಾಲದ ಆರಂಭವೆಂದರೆ ಮೇ ತಿಂಗಳ ಒಂದು ಸಂಜೆ, ಭಾರೀ ಗುಡುಗು ಮತ್ತು ಮಿಂಚುಗಳೊಡನೆ ಕೂಡಿದ ಮಳೆ, ರಾತ್ರಿಯೆಲ್ಲಾ ಸುರಿದರೂ ಸುರಿದೀತು ಮಳೆ. ಆದರೆ ಮರುದಿನ ಬಿರುಬೇಸಗೆಯ ಬಿಸಿಲಿದ್ದರೂ ಇರಬಹುದು. ಸಂಜೆ ಪುನಃ ಭಾರೀ ಮಳೆ – ಈ ರೀತಿ ಒಂದೆರಡು ದಿನ ಯಕ್ಷಗಾನದ ಬಾಲಗೋಪಾಲರ ರೀತಿ ನರ್ತಿಸಿ, ನಂತರ ಮೂರನೆಯದೋ, ನಾಲ್ಕನೆಯದೋ ದಿನ ಶುರುವಾಯಿತು ನೋಡಿ ಎಡೆಬಿಡದೇ ಸುರಿಯುವ

ಜಡಿಮಳೆ". ಮಳೆಗಾಲದ "ಮರಕೆಸುವಿನ ಚಟ್ನಿ", ಶ್ರಾವಣದ "ಸೋಣೆ ಆರತಿ", ಆಗ ಕಾಣಸಿಗುವ "ಮಳೆ ಕೋಂಗಿಲ", ಕೊಳದಲ್ಲರಳುವ "ಚೆಲುವಿನ ಕೊಳ್ ಹೂ" ಇವೆಲ್ಲಾ ಮಳೆಗಾಲದ ನೆನಪಿನ ಮುಂದಿನ ಭಾಗಗಳಾಗಿವೆ. ತಮ್ಮ "ತೋಟದಾಚೆಯ ತೋಡ"ನ್ನು ಕುರಿತು ಹೇಳುವಾಗ 'ಹರಿಯುವ ನದಿ, ಎಲೆಗಳ ಮರ್ಮರ, ಮಂದಮಾರುತದ ಗಾಯನ ಈ ಎಲ್ಲಾ ಅಮೂರ್ತ ಅನುಭವಗಳಲ್ಲಿ ನೀರು ನುಡಿಸುವ ಗಾಯನವನ್ನು ಕಿವಿಯಾರೆ ಕೇಳಬಹುದು ಎಂಬುದು ನಿಜವಾದ ಸಂಗತಿ' ಎನ್ನುತ್ತಾ ಆ ಅನುಭವವನ್ನು ಓದುಗರಿಗೆ ದಾಟಿಸುತ್ತಾರೆ.


"ಕೊಪ್ಪರಿಗೆಯ ಬೆಲ್ಲ" ಎನ್ನುವ ಪ್ರಬಂಧದಲ್ಲಿ ಬೆಲ್ಲ ಮಾಡುವ ವಿಧಾನದೊಂದಿಗೆ ಈ ಉದ್ಯಮದ ಕಳೆದ ಶತಮಾನದ ಸಿಹಿಕಹಿ ನೆನಪುಗಳನ್ನೂ ದಾಖಲಿಸಿದ್ದಾರೆ. ದೀಪಾವಳಿಯಾಗುತ್ತಿದ್ದಂತೆ ಎಲ್ಲೆಡೆಯೂ ಜೀವ ತಳೆಯುತ್ತಿದ್ದ ಕಬ್ಬಿನಾಲೆ(ಆಲೆಮನೆ)ಗಳು, ಅದೇ ಸಮಯದಲ್ಲಿ ನಡೆಯುತ್ತಿದ್ದ ಯಕ್ಷಗಾನ ಪ್ರಸಂಗಗಳು ಇವೆಲ್ಲವೂ "ಚಳಿಯ ಸುಳಿಯಲ್ಲಿ" ಪ್ರಬಂಧದ ವಸ್ತುವಾಗಿದೆ. "ಕದಿರು ಕಟ್ಟುವ ಹಬ್ಬ" ಅಥವಾ 'ಹೊಸ್ತು' ಕರಾವಳಿಯ ಒಂದು ವಿಶಿಷ್ಟ ಸಂಪ್ರದಾಯವನ್ನು ಕುರಿತು ಹೇಳುವ ಪ್ರಬಂಧ. ಇದು ನವರಾತ್ರಿಯ ಸಮಯದಲ್ಲಿ ಹೊಸ ಬೆಳೆಯನ್ನು ಸಂಭ್ರಮಾಚರಣೆಯಿಂದ ಮನೆಯೊಳಗೆ ಕರೆತರುವ, ಹೊಸಬೆಳೆಯಿಂದ ಅಡುಗೆಯನ್ನು ಮಾಡಿ ಸಂಭ್ರಮಿಸುವ ವಿಶಿಷ್ಟವಾದ ಆಚರಣೆ.

ಭತ್ತದ ಕೊಯ್ಲಾದ ನಂತರದ ವಿಧಿವಿಧಾನಗಳಿಗೆ ಮುಂದಿನ ಮೂರು ಪ್ರಬಂಧಗಳು ಮೀಸಲಾಗಿವೆ. "ಭತ್ತದ ರಾಶಿ" ಪ್ರಬಂಧದಲ್ಲಿ ಭತ್ತವನ್ನು ಕಾಪಿಡುವ ಹುಲ್ಲಿನ ತಿರಿ ಮಾಡುವ ವಿಧಾನ ಹಾಗೂ "ಭತ್ತ ಕುಟ್ಟುವ ಕೆಲಸ"ದಲ್ಲಿ ಕೊಚ್ಚಿಗೆ ಅಕ್ಕಿಯನ್ನು ಮಾಡಿ ಮುಡಿಗಳಲ್ಲಿ ಸಂಗ್ರಹಿಸಿಡುವ ವಿಧಾನ ಮತ್ತು "ಮನೆ ಅವಲಕ್ಕಿ"ಯಲ್ಲಿ ಆ ಕಾಲದಲ್ಲಿ ಅವಲಕ್ಕಿಯನ್ನು ಮನೆಯಲ್ಲೇ ಕುಟ್ಟಿ ತಯಾರಿಸುತ್ತಿದ್ದ ವಿಧಾನಗಳನ್ನು ನೋಡಬಹುದು. "ಆಕಾಶ ದೀಪ" ಪ್ರಬಂಧದಲ್ಲಿ ತಯಾರಿಕಾ ವಿಧಾನ, "ದೀಪದ ಸಾಲು" ಪ್ರಬಂಧದಲ್ಲಿ ಗದ್ದೆಗೆ ಪೂಜೆ ಮಾಡುವ ವಿಧಿ-ವಿಧಾನವನ್ನು ಹೇಳುತ್ತಾ, "ವರ್ಷವಿಡೀ ಊಟ ಮಾಡುವಷ್ಟು ಧಾನ್ಯವನ್ನು ಮನೆಯವರಿಗೆ ನೀಡಿದ ಗದ್ದೆ ಎಂಬ ಭೂತಾಯಿಗೆ, ಆಕೆ ನೀಡಿದ ಹೊಸ ಭತ್ತದಿಂದ ತಯಾರಿಸಿದ ಅವಲಕ್ಕಿಯನ್ನು ದೀಪಾವಳಿಯ ದಿನ ಉಣಬಡಿಸುವ ಈ ಆಚರಣೆ ಅರ್ಥಪೂರ್ಣ" ಎನ್ನುತ್ತಾರೆ ಲೇಖಕರು. ಆ ಸಂದರ್ಭದಲ್ಲಿ ಹಾಡುವ ವಿಶಿಷ್ಟವಾದ ಬಲೀಂದ್ರನನ್ನು ಕರೆಯುವ ಹಾಡು ಆಸಕ್ತಿದಾಯಕವಾಗಿದೆ. "ಗೋಪೂಜೆ"ಯ ವಿಧಾನ ಮತ್ತು ಸಂಭ್ರಮಗಳನ್ನು ಕುರಿತು ಹೇಳುತ್ತಾರೆ ಇನ್ನೊಂದು ಪ್ರಬಂಧದಲ್ಲಿ. ಬಾಲ್ಯದಲ್ಲಿ ಸ್ನೇಹಿತನಂತಿದ್ದ "ಅಂದು ಪಾಂಡನ ನಾಯಿ"ಯ ಬಗ್ಗೆ ಅದೇ ಹೆಸರಿನ ಪ್ರಬಂಧದಲ್ಲಿ ಹೇಳಿದ್ದಾರೆ. "ಗಂಟಿ ಮೇಯಿಸುವ ಕೆಲಸ" ಪ್ರಬಂಧದಲ್ಲಿ ದನಗಳ ಕುತ್ತಿಗೆಗೆ ಕಟ್ಟುವ ಬೊಂಬಿನ 'ಮರಣಿ' ಒಂದೊಂದು ಮರಣಿಯೂ ಬೇರೆ ಬೇರೆ ಧ್ವನಿಗಳನ್ನು ಹೊರಡಿಸುವ ವಿಶಿಷ್ಟತೆಯ ಬಗ್ಗೆ ಹೇಳುತ್ತಾರೆ. ಇಡೀ ಸಂಕಲನವನ್ನು ಓದಿದ ನಂತರ ನನಗಂತೂ ಹಾಲಾಡಿಯವರ ಸಮೃದ್ಧ ಬಾಲ್ಯದ ಬಗ್ಗೆ ಹೊಟ್ಟೆಕಿಚ್ಚು ಪಡುವಷ್ಟು ಸಂತೋಷವಾಯಿತು.

ಅಮ್ಮಮ್ಮನ ದೀಪಾವಳಿ:

2012ರಲ್ಲಿ ಮುದ್ರಣವಾದ 28 ಬರೆಹಗಳಿವ 'ಅಮ್ಮಮ್ಮನ ದೀಪಾವಳಿ', ಶಶಿಧರ ಹಾಲಾಡಿಯವರ ಮೂರನೆಯ ಸಂಕಲನ. ಇದರಲ್ಲಿನ ಹಳ್ಳಿಯ ಬದುಕಿನ ಎಲ್ಲ ಚಿತ್ರಗಳಲ್ಲೂ ಲೇಖಕರ ತಂದೆಯ ತಾಯಿ 'ಅಮ್ಮಮ್ಮ'ನೇ ಆ ತಲೆಮಾರಿನ ಪ್ರತಿನಿಧಿಯಾಗಿ ಕಾಣುವ ನಾಯಕಿ. 55ರಿಂದ 60 ವರ್ಷಗಳ ಹಿಂದಿನ ವಿದ್ಯುತ್ತಿನ

ಸಂಪರ್ಕವಿಲ್ಲದ, ಸುತ್ತಲೂ ಬೆಟ್ಟಗುಡ್ಡಗಳಿಂದ ಆವೃತವಾದ, ಕಡೆಗೆ ಮನೆಗೆ ರಸ್ತೆಯೂ ಇಲ್ಲದೆ, ಮನೆಮುಂದಿನ ಗದ್ದೆಯ ಬದುವಿನ ಮೇಲೆ ಒಂದು ಕಿಲೋಮೀಟರ್ ನಡೆದ ನಂತರ ರಸ್ತೆ ಸಿಗುವಂತಹ, ಕಾಡಿನ ಮಧ್ಯದ



ಹಳ್ಳಿಯಲ್ಲಿನ ಸಾಮಾಜಿಕ ಜನಜೀವನ ಮತ್ತು ಆಚರಣೆಗಳು ಹೇಗಿತ್ತೆಂಬ ನೋಟ ಇಲ್ಲಿನ ಪ್ರಬಂಧಗಳಲ್ಲಿ ತೆರೆದುಕೊಳ್ಳುತ್ತಾ, ಹಲವೆಡೆ ಶಿವರಾಮ ಕಾರಂತರ ಕಾದಂಬರಿಗಳನ್ನು ನೆನಪಿಗೆ ತರುತ್ತವೆ. ಅಮ್ಮಮ್ಮ ಎಂದರೆ ಲೇಖಕರ ತಂದೆಯ ತಾಯಿ. ಲೇಖಕರ ತಂದೆ ದೂರದೂರಿನಲ್ಲಿ ಕೆಲಸದಲ್ಲಿದ್ದುದರಿಂದ ಇಡೀ ಮನೆಯ ಯಜಮಾನಿಕೆ ಈಕೆಯ ಕೈಯಲ್ಲಿತ್ತೆಂದು ಅರಿವಾಗುತ್ತದೆ. ಅಂತೆಯೇ ಲೇಖಕರ ಮೇಲೆ ಈಕೆ ಬೀರಿರುವ ಪ್ರಭಾವ ಮಹತ್ತರವಾದದ್ದು ಎಂದು ಇಲ್ಲಿನ ಲೇಖನಗಳು ಹೇಳುತ್ತವೆ.

ಮೊದಲ ಲೇಖನ "ಅಮ್ಮಮ್ಮನ ದೀಪಾವಳಿ" ಅಂದಿನ ದೀಪಾವಳಿಯ ಆಚರಣೆಯ ಚಿತ್ರಣವನ್ನು ಹಿಂದಿನ ಪ್ರಬಂಧಗಳಲ್ಲೂ ನೋಡಿದ್ದೇವೆ. ಗೋಪೂಜೆಯಂದು "ನಮಗೆ ಗೊಬ್ಬರ ಕೊಡುವ ಗಂಟಿಗೆ ಪೂಜೆ ಮಾಡಿದಾಗ್ಲೇ ನಿಜವಾದ ದೀಪಾವಳಿ" ಎನ್ನುವ ಅಮ್ಮಮ್ಮನ ಮಾತುಗಳು ನಿಜಕ್ಕೂ ಅರ್ಥಪೂರ್ಣ! ಬೆಳಗ್ಗೆ ಮನೆಮಂದಿಯೆಲ್ಲಾ ಕೊಟ್ಟಿಗೆಯ ದನಕರುಗಳನ್ನು ಮೀಯಿಸಿ ತಂದು, ಅಲಂಕರಿಸಿ, ವಿಧಿವತ್ತಾಗಿ ಪೂಜಿಸಿ ಅವುಗಳಿಗೆ ಸೌತೆಕಾಯಿಯ ಕಡುಬಿನ ನೈವೇದ್ಯವಿಡುವ ವಿಶಿಷ್ಟವಾದ ಆಚರಣೆಯದು. ಮುಂದೆ ಬರುವ "ಗದ್ದೆಗೆ ದೀಪ ಇಡುವ ಹಬ್ಬ" ಲೇಖನವು ಸಹಾ ದೀಪಾವಳಿ ಅಭ್ಯಂಜನದಿಂದ, ಗದ್ದೆಗೆ ದೀಪ ಇಡುವ ಸಂಪ್ರದಾಯದವರೆಗೆ ಎಲ್ಲದರ ವರ್ಣನೆ ಮಾಡುತ್ತಾ ಮೊದಲಿನದರ ಮುಂದುವರೆದ ಭಾಗವಾಗಿದೆ..

"ಅಮ್ಮಮ್ಮನ ಉಪವಾಸ"ದ ವೈವಿಧ್ಯವನ್ನು ಅದೇ ಹೆಸರಿನ ಪ್ರಬಂಧದಲ್ಲಿ ಕಾಣುತ್ತೇವೆ. 'ಯಾವ ವೈಜ್ಞಾನಿಕ ಕಾರಣಗಳ ಅರಿವಿರದೆ, ದೈವಭಕ್ತಿ, ಹಿಂದಿನಿಂದ ನಡೆದುಬಂದ ಪರಿಪಾಠ ಮತ್ತು ಅದೇನೋ ಒಂದು ನಂಬಿಕೆಯ ಹಿನ್ನೆಲೆಯಲ್ಲಿ ಅವರು ಮಾಡುತ್ತಿದ್ದ ಉಪವಾಸಕ್ಕೆ ಅವರ ದೃಷ್ಟಿಯಲ್ಲಿ ತುಂಬಾ ಮಹತ್ವವಿತ್ತು' ಎನ್ನುತ್ತಾರೆ ಲೇಖಕರು. ಪ್ರಥಮ ಏಕಾದಶಿ, ಏಕಾದಶಿ, ಶಿವರಾತ್ರಿ, ಜನ್ಮಾಷ್ಟಮಿ, ಹಿರಿಯರ ಪೂಜೆ, ಶನಿವಾರ ಇತ್ಯಾದಿ ಬೇರೆಬೇರೆ ದಿನಗಳ ಉಪವಾಸ ಬೇರೆಬೇರೆ 'ಲೆವೆಲ್ಲಿ'ನದು. ಅನಾರೋಗ್ಯದ ಕಾರಣದಿಂದಾಗಿ ತನ್ನ ಕಟ್ಟುಪವಾಸದ ನೇಮವನ್ನು ಬಿಡುವ ಸಂದರ್ಭವೊದಗಿದಾಗ "ಸ್ನಾನ ಮಾಡ್ದೆ ಅಷ್ಟು ದಿನ ಊಟ ಮಾಡಿ ಆಯ್ತಲೆ. ಆ ಹೋಟೇಲಿನ ಗಂಜಿ ತಿಂದ್ ಆಯ್ತಲ್ಲೆ.ಇನ್ನೆಂಥಾ ಉಪವಾಸ" ಎಂದು ಸಧ್ಯದ ಪರಿಸ್ಥಿತಿಯನ್ನು ಒಪ್ಪಿಕೊಳ್ಳುವ ಅಮ್ಮಮ್ಮನಲ್ಲಿ ಶಠತ್ವವಿಲ್ಲ; ಪರಿಸ್ಥಿತಿಗೆ ಹೊಂದಿಕೊಳ್ಳುವ ಔದಾರ್ಯ ಕಾಣುತ್ತದೆ. "ಶಿವರಾತ್ರಿ ಉಪವಾಸ" ಎನ್ನುವ ಪ್ರಬಂಧದಲ್ಲಿ ಕಾಣಸಿಗುವ 'ಸೆಟ್ಟೆ ಹೊಡೆಯು'ವ ಒಂದು ವಿಶಿಷ್ಟ ಆಚರಣೆ ಗಮನ ಸೆಳೆಯುತ್ತದೆ. ಕಟ್ಟುಪವಾಸ ಬಿಟ್ಟು ಬೇರಾವುದೇ ಉಪವಾಸವೆಂದರೆ ಅದಕ್ಕೊಂದು ಒಗ್ಗರಣೆ ಅವಲಕ್ಕಿ ಮತ್ತು ಹೆಸರು ನೀರಿನ ಮೆನು ಇದೆ.

"ಅಮ್ಮಮ್ಮನ ಕಾಫಿ ಪ್ರೇಮ" ಆಕೆಗೆ ಎದ್ದಕೂಡಲೇ ಕಾಫಿ ಕುಡಿಯದೇ ಕೆಲಸವೇ ಸಾಗುವುದಿಲ್ಲವೇನೋ ಎನ್ನುವಂತದು. ಆಕೆ ತನ್ನ ಈ ಅಭ್ಯಾಸವನ್ನು ಬಾಯಾರು ಕುಡಿಯುವ ದನಗಳೊಂದಿಗೆ ಹೋಲಿಕೆ

ಮಾಡಿಕೊಳ್ಳುತ್ತಾ, "ರಾತ್ರಿಯಿಂದ ಉಪವಾಸ ಇದ್ದೋ. ಬೆಳಗ್ಗೆ ಬಾಯರು ಹಾಕಿದ ಕೋಡ್ಲೆ ಕಾಯ್‌ಕಂಡು ಕುಡಿತೋ. ನಾವು ಎದ್‌ಕೂಡ್ಲೆ ಕಾಫಿ ಕುಡಿಯೋ ರೀತಿಯೇ ಈ ದನಗಳಿಗೂ ಬಾಯರ್" ಎನ್ನುವ ಈ ಸಮೀಕರಣದ ಹೋಲಿಕೆ ಮನಸೆಳೆಯುತ್ತದೆ. ಕಾಫಿಯ ಬಗೆಗಿನ ಹಲವು ವಿವರಗಳು ಈ ಲೇಖನದಲ್ಲಿದೆ.

ಹಾಲಾಡಿಯವರಿಗೆ ಚಾರಣದ ಅಮಲನ್ನು ಹತ್ತಿಸಿದವರು ಪ್ರಾಯಶಃ ಅವರ ಅಮ್ಮಮ್ಮನೇ. ಎಂಟು ವರ್ಷದ ಹುಡುಗನನ್ನು ಎಂಟು ಮೈಲಿ ಗದ್ದೆ, ಕಾಡು, ನದಿ, ಗುಡ್ಡ, ಝರಿಗಳನ್ನು ದಾಟಿಸಿಕೊಂಡು ಕುಚ್ಚೂರು ಎನ್ನುವ ಒಂದು ಗ್ರಾಮದ ಮದುವೆಗೆ ಕರೆದೊಯ್ಯುವ ಪ್ರಬಂಧ "ಅಮ್ಮಮ್ಮನ ಜೊತೆ ಚಾರಣ". ಬಾಲ್ಯದ ಆ ನೆನಪನ್ನು ಸುಮಾರು 40 ವರ್ಷಗಳ ನಂತರದ ದೃಷ್ಟಿಯಲ್ಲಿ ನೋಡಿ ಬರೆದಿರುವ ಪ್ರಬಂಧ ಅವರ ಚಾರಣದ ನಡೆಯನ್ನು ಗುರುತಿಸುವ ಬರೆಹ. ಮುಂದೆ ನಾವು ನೋಡುವ "'ಬಾಳೆಬರೆ' ಘಾಟಿ ರಸ್ತೆ" ಎಂಬ ಪ್ರಬಂಧದಲ್ಲಿ ಲೇಖಕರು ಚಿಕ್ಕವರಾಗಿದ್ದಾಗಲೇ ಏಕಾಂಗಿಯಾಗಿ ಚಾರಣ ಮಾಡಿದ ಅನುಭವಗಳನ್ನು ಸಹಾ ದಾಖಲಿಸಿದ್ದಾರೆ.

ಮನೆಯ ಮುಂದೆ ಅಡ್ಡಕಟ್ಟೆಯಿಲ್ಲದ, ಮಳೆಗಾಲದಲ್ಲಿ ಬಗ್ಗಿ ಕೊಡದಿಂದ ನೀರೆತ್ತಿಕೊಳ್ಳುವಂತಹ "ಬಗ್ಗುಭಾವಿ" ಅಂದಿನ ಅಂತರ್ಜಲದ ಸಮೃದ್ಧಿಯನ್ನು ತೋರಿಸುತ್ತದೆ. ಪ್ರತಿ ಬೇಸಗೆಯಲ್ಲಿ ಒಣಗುತ್ತಿದ್ದ ಆ ಭಾವಿಯಲ್ಲಿ ನೀರಿರುವವರೆಗೂ ಕಪ್ಪೆಗಳು, ಒಳ್ಳೆ ಹಾವುಗಳೂ ಇರುತ್ತಿದ್ದವಂತೆ. ನಂತರದ ದಿನಗಳಲ್ಲಿ ಮನೆಯ ಮುಂದಿನ ಗದ್ದೆಯಲ್ಲಿ ದೊಡ್ಡ ಭಾವಿ ತೋಡಿಸಿ ಸುತ್ತಲೂ ಹಣ್ಣಿನ ಮರಗಳನ್ನು ಬೆಳೆಸಿದ ಕತೆಯನ್ನು ಹೇಳುತ್ತದೆ ಈ ಲೇಖನ. ಆ ಭಾವಿಯಲ್ಲೊಮ್ಮೆ ಒಂದು ಕರು ಬಿದ್ದಾಗ, ಅಮ್ಮಮ್ಮ ಅದರ ಕಿವಿಯನ್ನು ಹಿಡಿದೆಳೆದು ಎತ್ತಿದ ಸಂಗತಿ ಅವರ ಸಮಯಪ್ರಜ್ಞೆಯ ಉದಾಹರಣೆಯಂತಿದೆ. ಅಂತೆಯೇ ಬೇರೊಬ್ಬರ ಜಮೀನಿನಲ್ಲಿದ್ದ ಭಾವಿಗೆ ಏತದ ವ್ಯವಸ್ಥೆ ಮಾಡಿಕೊಂಡು, ಸೌತೆಕಾಯಿ ಬೆಳೆದು, ಮಳೆಗಾಲಕ್ಕಾಗಿ ರಕ್ಷಿಸಿಕೊಳ್ಳುತ್ತಿದ್ದ ಸಂಗತಿಗಳು "ಬೈಲುಬಾವಿಯ ನೀರಿನಿಂದ ಸೌತೆಕಾಯಿ" ಲೇಖನದಲ್ಲಿ ಬರುತ್ತದೆ. ಯಾವುದೇ ಕಟಿಪಿಟಿಯಿಲ್ಲದೆ ಪರಸ್ಪರರು ನೀರನ್ನು ಹಂಚಿಕೊಳ್ಳುತ್ತಿದ್ದ ಸಂಗತಿ ಖುಷಿನೀಡುತ್ತದೆ. ಮನೆಯೊಳಗೆ ಬಂದು ನೆಲಸುವ ಇಲಿಗಳು, ಬೆಕ್ಕುಗಳು, ನಾಯಿಗಳು ಕೊನೆಗೆ ಹಾವುಗಳನ್ನು ಸಹಾ ವಿನೋದದಿಂದ ಲೇಖಕರು "ಕರೆಯದೇ ಬರುವ ಅತಿಥಿಗಳು" ಎನ್ನುತ್ತಾರೆ ಅದೇ ಹೆಸರಿನ ಲೇಖನದಲ್ಲಿ. ಎಲ್ಲ ಜೀವಿಗಳಿಗೂ ಬದುಕುವ, ತನ್ನ ಹೊಟ್ಟೆಪಾಡನ್ನು ನೋಡಿಕೊಳ್ಳುವ ಹಕ್ಕಿದೆ ಎನ್ನುವುದನ್ನು ನಿರೂಪಿಸುವ ಲೇಖನವಿದು.

ಚಿಕ್ಕಂದಿನಿಂದಲೇ ದಿನವೂ ಶಾಲೆಯೆಂದರೆ ಕನಿಷ್ಠಪಕ್ಷ ೩ ಕಿ.ಮೀ. ನಡೆಯಬೇಕಾಗಿದ್ದ ದಾರಿಯಲ್ಲಿನ ಅನುಭವಗಳು "ನಡುಗೆ ದಾರಿಯ ಸವಿ" ಲೇಖನದಲ್ಲಿ ಸೆರೆಯಾಗಿವೆ. ಪ್ರಕೃತಿದತ್ತವಾಗಿ ಹೇರಳವಾಗಿ ಸಿಗುತ್ತಿದ್ದ ಮಾವಿನ ಮಿಡಿ, ಚೇಂಪಿ ಹಣ್ಣು, ಹೆಬ್ಬಲಸು, ಬೆಳಮಾರ, ಕಿಸ್ಕಾರ, ಗರ್ಜನ, ಮುರಿನ (ಪುನರ್ಪುಳಿ), ಕಾಟುಮಾವು ಇವೆಲ್ಲವನ್ನೂ ವರ್ಣಿಸುವಾಗ ಓದುಗನಿಗೆ 'ನಾನೂ ಜೊತೆಗಾರನಾಗಿ ಹೋಗಿರಬೇಕಿತ್ತು' ಎನ್ನಿಸಿದರೆ ಅಚ್ಚರಿಯೇನಿಲ್ಲ. ಶಾಲೆಗೆ ನೇರದಾರಿಯೊಂದೇ ಅಲ್ಲದೆ ದೂರವನ್ನು ಕಡಿಮೆಮಾಡುವ ಗುಡ್ಡೆ, ಬೈಲು, ತೋಡುಗಳಿರುವ ಎರಡು ಮೂರು ಒಳದಾರಿಗಳನ್ನೂ ಲೇಖಕರು ಕಂಡುಕೊಂಡಿದ್ದ ಸಂಗತಿ "ಒಳದಾರಿ" ಪ್ರಬಂಧದಲ್ಲಿ ಕಾಣಸಿಗುತ್ತದೆ.

ಪ್ರತಿ ಮಳೆಗಾಲದಲ್ಲಿ ಕಾಣಸಿಗುತ್ತಿದ್ದ ಇಳೆಯ ವೈಭವೋಪೇತ ಸೌಂದರ್ಯದ ವರ್ಣನೆ "ಮಳೆ ಇಳೆಗೆ ಕಳೆ" ಬರೆಹದಲ್ಲಿದೆ. "ತಾವು ನಂಬಿದ ಮಳೆರಾಯನು, ಪ್ರತಿ ವರುಷ ನಂಬಿಕೆಯನ್ನು ಹುಸಿಗೊಳಸದೆ ಬಂದು ತಮ್ಮ

ಮನದಾಸೆಯನ್ನು ನೀಗಿಸುವುದನ್ನು ಕಂಡು ಜನರು, ತಮ್ಮನ್ನು ನಂಬಿದವರನ್ನು ಸಹಾ ಇದೇ ರೀತಿ ನಿರಾಸೆಗೊಳಸದೇ ನೋಡಿಕೊಳ್ಳುವರೆಂಬ ಒಂದು ವಾದ ತುಂಬಾ ಲಾಜಿಕಲ್ ಆಗಿದೆ ಅಲ್ಲವೇ? ಮಳೆಯು ಇಡೀ ಜೀವಜಾಲದ ಸರಪಳಿಯಲ್ಲಿ ವಹಿಸುವ ಪಾತ್ರ ವಿಸ್ಮಯಕಾರಿ. ಈಗೀಗ ಹೆಚ್ಚಾಗುತ್ತಿರುವ ಯಾಂತ್ರಿಕತೆಯು, ಮನದಾಳದಲ್ಲಿ ಅಡಗಬೇಕಾದ ಅನುಭವಗಳನ್ನು ಗ್ರಹಿಸುವ ಶಕ್ತಿಯನ್ನೇ ಹೊಸಕಿಹಾಕಿದೆಯೇ? ಎಂದು ಲೇಖಕರು ಎತ್ತಿರುವ ಪ್ರಶ್ನೆಗಳು ಓದುಗನನ್ನು ವಿಚಾರಮಂಥನಕ್ಕೆ ದೂಡುತ್ತದೆ.


ಆಷಾಢದ ಸಂದುಕಡಿಯದ ಬಿರುಮಳೆ, ಮಳೆಗಾಲದ ಕಷ್ಟಗಳು, ಕೃಷಿಕರಿಗೆ ತಿನ್ನಲೂ ಇರದಂತಹ ಪರಿಸ್ಥಿತಿ, ಆ ಕಾಲಕ್ಕೆ ಆಧಾರವಾಗುವ ಒಣಗಿಸಿಟ್ಟುಕೊಂಡ ಗೆಣಸಿನ ತುಂಡುಗಳು, ಹಲಸಿನ ಬೀಜ, ಉಪ್ಪಿನಲ್ಲಿ ನೆನೆಸಿಟ್ಟುಕೊಂಡ ಮಾವು, ಹಲಸಿನ ತೊಳೆಗಳು, ಮನೆಯ ಸುತ್ತ ಸಿಗುತ್ತಿದ್ದ ಸಸ್ಯ ವೈವಿಧ್ಯ ಇವೆಲ್ಲಾ ವಿವರಗಳು "ಜಿರಾಪತಿ ಮಳೆ"ಯಲ್ಲಿ ಕಾಣಸಿಗುತ್ತದೆ. ಮಲೆನಾಡಿನಲ್ಲಿ ತರಕಾರಿ ಅಂಗಡಿಗಳಿಲ್ಲದ ಕಾಲದಲ್ಲಿ ಮನೆಯ ಸುತ್ತಮುತ್ತಲಲ್ಲಿ ಬಿಡುತ್ತಿದ್ದ ಗಿಡದ ಹೂಗಳು, ಕುಡಿಗಳು, ಸಿಪ್ಪೆಗಳೇ ಅಡುಗೆಯಲ್ಲಿ ಬೇಯುತ್ತಿದ್ದ ಒಂದು ಆಸಕ್ತಿದಾಯಕ ಸಂಗತಿಯನ್ನು "ತರಕಾರಿ ಅಲ್ಲದ ತರಕಾರಿಗಳು" ಪ್ರಬಂಧದಲ್ಲಿ ನೋಡುತ್ತೇವೆ.

ಗೀಜಗಗಳ ಜೀವನ ವಿಧಾನದ ಒಂದು ಸಂಕ್ಷಿಪ್ತ ನೋಟವನ್ನು ನೀಡುತ್ತದೆ "ಗೆರೆಹಕ್ಕಿಗಳ ಚಿಲಿಪಿಲಿ" ಲೇಖನ. "ತೆಂಗಿನ ಗರಿಗಳ ಅಂಚನ್ನು ಕಲಾತ್ಮಕವಾಗಿ ಸೀಳಿ ದಾರಗಳನ್ನು ಮಾಡಿ ಒಂದೂವರೆ ಅಡಿ ಉದ್ದದ ಗೂಡನ್ನು ಹೆಣೆಯಲು ಆ ಹಕ್ಕಿಗಳಿಗೆ ಹೇಳಿಕೊಟ್ಟವರ್ಯಾರು?" ಎಂದು ಲೇಖಕರು ತೋರಿರುವ ವಿಸ್ಮಯ ನಮ್ಮ ಮನದ ಪ್ರಶ್ನೆಯೂ ಅಲ್ಲವೇ? ಇದೊಂದು ಕುತೂಹಲಕಾರಿ ಲೇಖನ.

ಗಮನ ಸೆಳೆಯುವ ಇನ್ನೊಂದು ಲೇಖನ "ಸೊಪ್ಪಿನ ಗೊಬ್ಬರ", ಅದನ್ನು ಮಾಡುತ್ತಿದ್ದ ವಿಧಾನ, ಸೊಪ್ಪನ್ನು ಸಂಗ್ರಹಿಸುತ್ತಿದ್ದ ರೀತಿ, ಮಕ್ಕಳಿಗೆ ತರಬೇತಿ ನೀಡುತ್ತಿದ್ದದ್ದು. ನಿಧಾನವಾಗಿ ಕಲ್ಲುಹಾಸಿನ ಕೊಟ್ಟಿಗೆ ನಿರ್ಮಾಣವಾಗಿ ಒಂದು ನೈಸರ್ಗಿಕವಾದ ಗೊಬ್ಬರ ತಯಾರಾಗುತ್ತಿದ್ದ ವಿಧಾನವೇ ಕಣ್ಮರೆಯಾಗಿದ್ದು ಇವುಗಳ ವಿವರ ಇಂತಹ ಇನ್ನೆಷ್ಟು ಪಾರಂಪರಿಕವಾದ ಕೃಷಿ ವಿಧಾನಗಳು ಕಾಲಕ್ರಮೇಣ ನಮ್ಮಿಂದ ಮರೆಯಾಗಿಹೋಗಿದೆಯೋ ಎನ್ನುವ ವಿಷಾದವನ್ನು ಮೂಡಿಸುತ್ತದೆ.

"ಉದ್ದಿನ ಹಪ್ಪಳ", "ಹಳ್ಳಿ ಶಾಲೆಯಲ್ಲಿ ಒಂದು ದಿನ", "ಕೊಂಬನ ಕಲೆಗಾರಿಕೆ", "ನಾನು ಸೈಕಲ್ ಕಲಿತದ್ದು", "ಹಟ್ಟಿ ಕೊಟ್ಟಿಗೆ", "ಬಿಸಿಬೆಲ್ಲ", "ಅಮ್ಮಮ್ಮನ ರೈಲು ಪ್ರಯಾಣ", "ವಂಡಾರು ಕಂಬಳ" ಇವೆಲ್ಲ ಲೇಖನಗಳು ಆ ಲೇಖನದ ವಸ್ತುಗಳಿಗೆ ನಿಷ್ಠವಾಗಿ ಹೆಣೆಯಲ್ಪಟ್ಟಿವೆ. ಮನೆಯ ಸುತ್ತಲೂ ಇದ್ದ "ಬಳ್ಳಿ ಹರ", "ಚೇರ್ಕಿ ಹರ", "ಹರನ ಗುಡ್ಡೆ"ಗಳ ವರ್ಣನೆಗಳು ಇದೇ ಹೆಸರಿನ ಲೇಖನಗಳಲ್ಲಿ ದೊರೆಯುತ್ತವೆ.

ಒಟ್ಟಾರೆಯಾಗಿ ಈ ಪ್ರಬಂಧ ಸಂಕಲನದ ಓದು, ಓದುಗನನ್ನು ಕಾಲಯಾನದಲ್ಲಿ ಒಂದೈವತ್ತು ವರ್ಷಗಳ ಹಿಂದೆ ಕರೆದೊಯ್ಯುವುದಂತೂ ನಿಜ. ಎಲ್ಲಾ ಪ್ರಬಂಧಗಳಲ್ಲೂ ಮುಖತೋರುವ ಅಮ್ಮಮ್ಮನದು ಗಮನ ಸೆಳೆಯುವ ಗಟ್ಟಿ ವ್ಯಕ್ತಿತ್ವ. ಇದನ್ನು ಬರಿಯ ಅಂಕಣ ಬರಹಗಳನ್ನಾಗಿ ಮಾತ್ರಾ ನೋಡದೆ ಒಂದು ಕಾಲದ ಜನಜೀವನ ಕ್ರಮದ ದಾಖಲಾತಿಯೆಂದು ಪರಿಗಣಿಸಬಹುದು.



ಮನದ ಹಾಯಿದೋಣಿ

ವಿವಿಧ ಸಂದರ್ಭಗಳಲ್ಲಿ ರಚಿಸಿದ ಬಿಡಿ ಅಂಕಣ ಬರಹಗಳ ಸಂಗ್ರಹವಾದ ಈ ಪುಸ್ತಕ 2020ರಲ್ಲಿ ಪ್ರಕಟವಾಗಿದೆ. ಇಲ್ಲಿ ವ್ಯಕ್ತಿ ಚಿತ್ರಗಳಿವೆ, ಸಾಮಾಜಿಕ ಸಮಸ್ಯೆಗಳಿವೆ, ಪ್ರಚಲಿತ ತಲ್ಲಣಗಳಿವೆ, ಪ್ರತಿಸ್ಪಂದನೆಗಳಿವೆ, ಪರಿಸರ ಬರಹಗಳಿವೆ, ಗ್ರಾಮೀಣ ಬದುಕಿನ ಅನುಭವಗಳಿವೆ ಎನ್ನುತ್ತಾರೆ ಶಶಿಧರ ಹಾಲಾಡಿಯವರು. ಒಟ್ಟು 33 ಪ್ರಬಂಧಗಳಿರುವ ಈ ಸಂಕಲನದಲ್ಲಿ ಅಡಗಿರುವ ವಿಷಯ ವೈವಿಧ್ಯತೆ ಬೆರಗುಗೊಳಿಸುವಂತಹುದು. ಜಾಗತಿಕ ಮಟ್ಟದ ಚರ್ಚೆಯ ವಿಷಯಗಳೇ ಇಲ್ಲಿನ ಹಲವು ಪ್ರಬಂಧಗಳ ವಸ್ತುಗಳಾಗಿವೆ. ಈ ಪ್ರಬಂಧಗಳ ಬಗ್ಗೆಯೇ ಒಂದು ದಿನವೆಲ್ಲಾ ಚರ್ಚೆ ಮಾಡಬಹುದಾದಷ್ಟು ವೈವಿಧ್ಯಮಯ ವಿಷಯಗಳಿದ್ದರೂ ಸಮಯದ ಮಿತಿಯಿಂದಾಗಿ ಎಲ್ಲಾ ಪ್ರಬಂಧಗಳ ವಸ್ತುಗಳ ಬಗ್ಗೆ ಮಾತ್ರಾ ಹೇಳುತ್ತಾ ಹೋಗುತ್ತೇನೆ.

ಮೊದಲ ಪ್ರಬಂಧ "ನಾವು ಕಡೆಗಣಿಸಿದ ಅಸಾಧಾರಣ ಗಣಿತ ಪ್ರತಿಭೆ" ಶಕುಂತಲಾ ದೇವಿಯವರ ಜೀವಯಾನ ವನ್ನು ಕುರಿತಾದದ್ದು. ಪ್ರಪಂಚವೆಲ್ಲಾ ಗುರುತಿಸಿದ ಈ ಅದ್ಭುತ ಪ್ರತಿಭೆಗೆ ನಮ್ಮ ನೆಲದಲ್ಲಿ ಸಿಗಬೇಕಾದ ಮನ್ನಣೆಯೇಕೆ ಸಿಗಲಿಲ್ಲ ಎನ್ನುವುದರ ಹಿಂದಿನ ಕಾರಣಗಳನ್ನೂ ಬಿಚ್ಚಿಡುತ್ತದೆ. "ಹದಿನೇಳರ ಹುಡುಗಿಯ ಪರಿಸರ ಗೀತೆ" ಎರಡು ಬಾರಿ ವಿಶ್ವ ನೊಬೆಲ್ ಪಾರಿತೋಷಕಕ್ಕೆ ನಾಮನಿರ್ದೇಶನಗೊಂಡ ಗ್ರೆತಾ ಥನ್‌ಬರ್ಗ್‌ಳ ಅಸಾಮಾನ್ಯ ಹೋರಾಟದ ಯಶೋಗಾಥೆ. ಅವಳು ಪ್ರತಿಪಾದಿಸುವ ವಿಚಾರಗಳು, ಪರಿಸರ ವಿನಾಶಕ್ಕೆ ವಿವಿಧ ರೀತಿಯ ಕಾಣಿಕೆ ನೀಡುತ್ತಿರುವ ಇಂದಿನ ಜನಾಂಗದವರು ತಲೆತಗ್ಗಿಸುವಂತೆ ಮಾಡುತ್ತದೆ. ನಮ್ಮ ದೇಶದ ಸಂವಿಧಾನ ರಚನೆಯ ಮೊದಲ ಕರಡುಪ್ರತಿ ರಚಿಸಿದ "ಅಂತಾರಾಷ್ಟ್ರೀಯ ಮಟ್ಟದ ನ್ಯಾಯ ಶಾಸ್ತ್ರಜ್ಞ ಬೆನಗಲ್ ನರಸಿಂಗ ರಾವ್" ಅವರ ಬಗ್ಗೆಯೇ ಒಂದು ವಿಸ್ತೃತ ಪ್ರಬಂಧವಿದೆ. ಅವರ ತಮ್ಮ "ಕರ್ನಾಟಕದ ಅಪರೂಪದ ರಾಜಕಾರಣಿ ಬೆನಗಲ್ ಶಿವರಾವ್" ಅವರು ಕೂಡಾ ಅದೇ ಹೆಸರಿನ ಪ್ರಬಂಧವೊಂದರ ವಸ್ತುವಾಗಿದ್ದಾರೆ.

ಭೋಪಾಲ್ ಯೂನಿಯನ್ ಕಾರ್ಬೈಡ್ ಸಂಸ್ಥೆಯಿಂದ 3ನೆಯ ಡಿಸೆಂಬರ್ 1984ರಲ್ಲಿ ನಡೆದ ವಿಷಾನಿಲ ದುರಂತದ ಕರುಳು ಮಿಡಿಯುವ ಚಿತ್ರಣ "ಜೀವಗಳಿಗೆ ನಮ್ಮ ದೇಶದಲ್ಲಿ ಬೆಲೆಯೇ ಇಲ್ಲವೇ" ಲೇಖನದಲ್ಲಿದೆ. ಇಡಿಯ ಪ್ರಕರಣದ ಹಿಂದಿನ ರಾಜಕೀಯ ಒಳಸುಳಿಗಳು, ಹುನ್ನಾರಗಳು ಮನತಟ್ಟುತ್ತವೆ. ಕೋವಿಡ್ 19 ಸೃಷ್ಟಿಸಿದ ವಿಶ್ವಮಟ್ಟದ ಅವಾಂತರ. ಅದರ ಪರಿಣಾಮಗಳು, ಲಸಿಕೆಗಳು ಮತ್ತು ಅದರಿಂದಾಗಿ ಜನಜೀವನ ದಲ್ಲಾದ ಬದಲಾವಣೆಗಳ ಬಗೆಗಿನ ವಿಸ್ತೃತ ರೂಪ "ಆಗಲಿದೆ ಮುಖಗವಸು ನಮ್ಮ ಹೊಸ ಅಲಂಕಾರ"ದಲ್ಲಿ ಚಿತ್ರಿತವಾಗಿದೆ. ವಿಶ್ವದ ದೊಡ್ಡಣ್ಣ ಅಮೇರಿಕಾದಲ್ಲಿ ಇಂದಿಗೂ ಜೀವಂತವಾಗಿರುವ ವರ್ಣದ್ವೇಷದ ಕರಾಳ ಸ್ವರೂಪವನ್ನು "ಅಲ್ಲಿನ ನೆಲದಲ್ಲಿ ಹರಿಯುತ್ತಿದೆಯೇ ಒಂದು ದ್ವೇಷದ ನದಿ" ಹೇಳುತ್ತದೆ. ಜಾರ್ಜ್ ಫ್ಲಾಯ್ಡ್ ಎನ್ನುವ ಕರಿಯ ಜನಾಂಗೀಯನನ್ನು ಡೆರೆಕ್ ಚಾವಿನ್ ಎಂಬ ಬಿಳಿಯ ಪೋಲೀಸ್ 25.05.2020ರಂದು ಉಸಿರುಗಟ್ಟಿಸಿ ಕೊಂದ ಪ್ರಕರಣದ ಹಿನ್ನೆಲೆಯನ್ನಿಟ್ಟುಕೊಂಡು ಬರೆದ ಪ್ರಬಂಧವಿದು. ಅಮೇರಿಕಾಧ್ಯಕ್ಷ ಟ್ರಂಪ್ ಭಾರತಕ್ಕೆ ಬಂದ ದಿನ ದೆಹಲಿಯಲ್ಲಿ ನಡೆದ ಸಿ ಎ ಎ ವಿರೋಧಿ ಹಿಂಸಾತ್ಮಕ ಘಟನೆಗಳನ್ನು "ದೇಶದ ರಾಜಧಾನಿಯಲ್ಲಿ ನಡೆದ ಮೊದಲ ಬೃಹತ್ ಗಲಭೆ" ಪ್ರಬಂಧದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ.

ಒಬ್ಬ ಸೂಕ್ಷ್ಮಗ್ರಾಹಿ ಪತ್ರಕರ್ತ ಘಟನೆಗಳನ್ನು ಮಾನವೀಯ ನೆಲೆಯಲ್ಲಿ ನೋಡುವುದಕ್ಕೆ ಸಾಕ್ಷಿಯಾಗಿದೆ "ಹೆದ್ದಾರಿ ಬದಿಯಲ್ಲಿ ಒಂದು ಸಾವು" ಲೇಖನ. 2019ರ ಜನವರಿಯಲ್ಲಿ ಉತ್ತರ ಕರ್ನಾಟಕದ 3500 ಹೆಂಗಸರು ಮದ್ಯನಿಷೇದಕ್ಕಾಗಿ ಒತ್ತಾಯಿಸಿ ನಡೆಸಿದ ಕಾಲ್ನಡಿಗೆ ಜಾತಾದಲ್ಲಿ ಬೈಕ್ ಸವಾರನೊಬ್ಬನ ಡಿಕ್ಕಿಯಿಂದ ಮೃತಪಟ್ಟ ರೇಣುಕಮ್ಮನ ಪ್ರಸಂಗದ ಮೂಲಕ ಮದ್ಯಪಾನದ ಹಿಂದಿರುವ ರಾಜಕೀಯ ಹುನ್ನಾರಗಳ ಒಳಸುಳಿಗಳ ಚಿತ್ರಣವನ್ನು ಓದಿ ಮುಗಿಸುವಾಗ ಕಣ್ಣಲ್ಲಿ ನೀರಾಡಿದರೆ ಅಚ್ಚರಿಯೇನಿಲ್ಲ. ನನ್ನ ಮನಸ್ಸನ್ನು ತಟ್ಟಿದ ಇನ್ನೊಂದು ಬರೆಹ "ಗಾಂಧಿ ಹೇಳಿಕೊಟ್ಟ ಪಾಠ ಮರೆತ ಭಾರತ". ಉಪವಾಸ, ಅಹಿಂಸೆ, ಸತ್ಯ ಇಂತಹ ಪಾಠಗಳನ್ನು ಮರೆತಿರುವ ಆಧುನಿಕ ಭಾರತ, ಅವರ ಕೆಲವು ಆಯ್ದ ಹೇಳಿಕೆಗಳನ್ನು ವಿಪರೀತ ಅರ್ಥಕ್ಕೆ ಒಳಗುಮಾಡಿ, ಟೀಕಿಸುವುದರಲ್ಲಿ ಮುಂದಿದೆ. ಅಂಥದ್ದೊಂದು ಉನ್ನತ ಲೆಗಸಿಯನ್ನು ಅನುಸರಿಸಲು ಇದ್ದ ಅವಕಾಶವನ್ನು ಕಳೆದುಕೊಂಡಿದ್ದು ಈ ಕಾಲಮಾನದ ಒಂದು ದುರಂತವೆಂದು ಲೇಖಕರು ಹೇಳುವ ಮಾತುಗಳು ಒಪ್ಪುವಂತವು. 1914ರ 'ಕೋಮಗಾಟು ಮಾರು' ಹತ್ಯಾಕಾಂಡದ ಪೂರ್ಣ ವಿವರಗಳು "ಮರೆತುಹೋದ ಆ ಒಂದು ಹತ್ಯಾಕಾಂಡ" ಲೇಖನದಲ್ಲಿ ಚರ್ಚಿತವಾಗಿದೆ. ಮುಚ್ಚಿಟ್ಟ ಈ ದುರಂತದ ವಿಷಯವು 1954ರಲ್ಲಿ ಬಹಿರಂಗವಾಗಿ ಬುಡ್ಗೆ ಬುಡ್ಗೆ ಬಂದರಿನ ಬಳಿ ಸ್ಮಾರಕ ನಿರ್ಮಾಣವಾಗಲು 40 ವರ್ಷಗಳೇ ಬೇಕಾಯಿತು.

ಬೆಳೆಯುತ್ತಿರುವ ಬೆಂಗಳೂರಿಗೆ ಎಲ್ಲೆಲ್ಲಿಂದ, ಹೇಗೆ ಹೇಗೆ ನೀರನ್ನು ತಂದರೂ ಸಾಲದು. ಬೆಂಗಳೂರಿಗಿಂತ 1800 ಅಡಿ ತಗ್ಗಿನಲ್ಲಿರುವ ಪ್ರದೇಶದಿಂದ ನೀರನ್ನು ಎತ್ತುಗಡೆ ಮಾಡಿ 400 ಕಿ.ಮೀ. ದೂರ ತರುವ ಸರ್ಕಾರದ ವಿವೇಕರಹಿತ ಯೋಜನೆಯನ್ನು ಕುರಿತು "ಬೆಂಗಳೂರಿನ ಜಲದಾಹ ತಣಿಸಲು ಶರಾವತಿಯ ನೀರೇ ಅಗತ್ಯವೇ?" ಎಂದು ಪ್ರಶ್ನಿಸಿದ್ದಾರೆ ಲೇಖಕರು ಅದೇ ಹೆಸರಿನ ಲೇಖನದಲ್ಲಿ. 'ಪರಿಸರವನ್ನು ಹಾಳು ಮಾಡುವುದರಲ್ಲಿ ನಾಗರಿಕ ಮಾನವನು ತೋರುತ್ತಿರುವ ತರಾತುರಿ, ಚಾಣಾಕ್ಷತೆ, ತಂತ್ರಗಾರಿಕೆಯನ್ನು ಕಂಡರೆ ಆ ನಿಸರ್ಗ ದೇವತೆಯೇ ಮೂಗಿನ ಮೇಲೆ ಬೆರಳಿಟ್ಟು ಬೆರಗಾದಾಳು' ಎಂದು "ಪರಿಸರ ರಕ್ಷಣೆ ಎಂದರೆ ಕೇವಲ ನಾಟಕವೇ?" ಲೇಖನದಲ್ಲಿ ಪ್ರಶ್ನಿಸುತ್ತಾರೆ.

"ಕಾಡಿನ ಬೆಂಕಿ ನಿಯಂತ್ರಣಕ್ಕೆ ಏಕೆ ಸೋಮಾರಿತನ?" ಎನ್ನುವ ಲೇಖನದಲ್ಲಿ ಮಾನವನ ದುರಾಸೆ ಹಾಗೂ ನಿರ್ಲಕ್ಷ್ಯದಿಂದಾಗಿ ಹೆಚ್ಚುತ್ತಿರುವ ಕಾಡಿನ ಬೆಂಕಿಯ ಪ್ರಕರಣಗಳು. ಬೆಂಕಿ ತಡೆಗೆ ಕೈಗೊಳ್ಳಬೇಕಾದ ಸೂಕ್ತವಾದ ಕ್ರಮಗಳ ಬಗ್ಗೆ ಸಂಪೂರ್ಣ ಚರ್ಚೆಯಾಗಿದೆ. ಕೊಲ್ಲೂರು ಬಳಿಯ ಬೆಳಕಲ್ ತೀರ್ಥದ ಮೋಹಕ ಜಲಧಾರೆಯ ಮಳೆಗಾಲದ ರುದ್ರ ರಮಣೀಯ ಅಸಾದೃಶ ಸೌಂದರ್ಯದ ಸೊಬಗನ್ನು ಸೆರೆಹಿಡಿದು ಕೊಡುತ್ತದೆ "ಅದೊಂದು ಕಿನ್ನರ ಲೋಕ" ಲೇಖನ. "ನಾ ಸೆರೆಹಿಡಿದ ಕನ್ಯಾಸ್ತ್ರೀ" ಡಿಕ್ಟಿಯೋ ಪೋರಾ ವೀಲ್ಡ್ ಲೇಡಿ, ಅದಕ್ಕೆ ಬಿ ಜಿ ಎಲ್ ಸ್ವಾಮಿಯವರ ನಾಮಕರಣ ಕನ್ಯಾಸ್ತ್ರೀ. ಈ ಲೇಖನ ಮುಖಕ್ಕೆ ತೆಳ್ಳನೆಯ ಪರದೆಯನ್ನು ಹಾಕಿಕೊಂಡ ಮಹಿಳೆಯನ್ನು ಹೋಲುವಂತಹ ಕೇವಲ ಒಂದೇ ದಿನದ ಆಯಸ್ಸಿನ ಅಣಬೆಯ ಜೀವನ ಚರಿತ್ರೆಯನ್ನು, ಅಷ್ಟರಲ್ಲೇ ನಡೆಯುವ ಬೀಜಪ್ರಸರಣವನ್ನೂ ಕುರಿತು ಹೇಳುತ್ತದೆ.

"ಅಗೇಡಿಯಲ್ಲಿ ತೊಂಡೆ ಚಪ್ಪರ" ನಮ್ಮ ವೇದಿಕೆಯಲ್ಲಿ ಪ್ರಸ್ತುತಗೊಂಡಿದ್ದಾಗ ಹಲವರು ಊರ ತೊಂಡೆಯ ರುಚಿಗೆ ಮಾರುಹೋಗಿದ್ದನ್ನು, ಅದರಲ್ಲಿ ತಯಾರಿಸಬಹುದಾದ ಬೇರೆಬೇರೆ ರೀತಿಯ ಖಾದ್ಯಗಳನ್ನು ಕುರಿತು ಬಾಯಿ ಚಪ್ಪರಿಸಿದ್ದನ್ನು ನೆನಪಿಸಿಕೊಳ್ಳಬಹುದು. ವಸತಿ ಸಮುಚ್ಚಯದಲ್ಲಿ ಬಲೆಯನ್ನು ಹೆಣೆದ ಕಾಡಿನ ಜೇಡ ಮತ್ತು ಎಂಜಲಿನಿಂದ ಗೂಡು ರಚಿಸಿಕೊಂಡ ಉಗುಳು ಕೀಟದಿಂದ ಸಮುಚ್ಚಯದಲ್ಲಿ ಉಂಟಾದ ಸಂಚಲನವನ್ನು "ಕಾಡಿನ ಜೇಡ ನಗರಕ್ಕೆ ಬಂತೇ?" ಪ್ರಬಂಧದಲ್ಲಿ ನೋಡಬಹುದು. ಮನೆಮುಂದಿನ

ಅಡಿಕೆಮರದಲ್ಲಿ ಗೂಡುಕಟ್ಟಿದ್ದ ಹುಲಿಕಡ್ಜುಳ ಕಚ್ಚಿದರೆ ಪ್ರಾಣಕ್ಕೇ ಸಂಚಕಾರ ಎಂದು ಹಲವರ ವಾದ. ಅದು ಕಚ್ಚಿದ್ದರೂ ಬದುಕಿ ಉಳಿದದ್ದು ಹಿರಿಯರೊಬ್ಬರ ಅನುಭವ. ಇಕಾಲಜಿ ಸರಪಳಿಯನ್ನು ನಂಬಿರುವ ಲೇಖಕರಿಗೆ ಗೂಡನ್ನು ನಾಶಮಾಡುವ ಮನಸ್ಸಿಲ್ಲ. ಕಡೆಗೂ ಆ ಗೂಡು ನಾಶವಾದಾಗ ಉಂಟಾಗುವ ವಿಷಾದ "ಹುಲಿಕಡ್ಜುಳನ ಗೂಡು" ಲೇಖನದ ತಿರುಳು. ಗಂಡು ಹಟ್ಟಿಮುದ್ದ ಹಕ್ಕಿಯ ಬಿಳಿಯ ಬಾಲ, ಅದರ ಮರಿಗಿರುವ ನಸುಗೆಂಪು ಬಾಲ ಮತ್ತು ಕಾಜಾಣದ ಕರಿಯ ಬಾಲ. ಕುಡುಬಿ ಜನಾಂಗದವರ ಹೋಳಿ ಆಚರಣೆಗೆ ಅಗತ್ಯವಾಗಿ ಬೇಕಾಗಿರುವ ಸರಕು. ಇದರ ಗರಿಗಳನ್ನು ಹಕ್ಕಿಗಳಿಗೆ ಯಾವುದೇ ಅಪಾಯವಾಗದಂತೆ ಸಂಗ್ರಹಿಸುವ ಕಲೆಯನ್ನು "ಹಟ್ಟಿಮುದ್ದ ಹಕ್ಕಿಬಾಲ" ಲೇಖನ ಸ್ವಾರಸ್ಯವಾಗಿ ಕಟ್ಟಿಕೊಟ್ಟಿದೆ.

ನೌಕಾಪಡೆಯ ಸೈನಿಕರ ಮಿನಿ ಕ್ವಿಟ್ ಇಂಡಿಯಾ ಚಳುವಳಿಯ ಕುರಿತಾದ ನಾಟಕವನ್ನು 1965ರಲ್ಲಿ ಹಾಗೂ 1946ರಲ್ಲಿ ಮುಂಬೈನಲ್ಲಿ ನಡೆದ 20000 ಸೈನಿಕರು ಹಾಗೂ 100000 ನಾಗರಿಕರು ಭಾಗವಹಿಸಿ, 500ಕ್ಕೂ ಹೆಚ್ಚು ಜನ ಸಾವಿಗೀಡಾದ ಚಳುವಳಿಯ ವಿವರಗಳನ್ನು ಕಾಂಗ್ರೆಸ್ ಹತ್ತಿಕ್ಕಿದ ಹಿಂದಿನ ರಾಜಕೀಯ ಹುನ್ನಾರಗಳ ಬಗೆಗಿನ ಚರ್ಚೆಯಾಗಿದೆ, "ಈ ಸೈನಿಕರ ತ್ಯಾಗಕ್ಕೆ ಬೆಲೆಯೇ ಇಲ್ಲವೇ" ಲೇಖನದಲ್ಲಿ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವುದಾದರೆ ದೇಶವೇಕೆ ಧರ್ಮಾಧಾರಿತವಾಗಿ ವಿಭಜನೆಯಾಗಬೇಕಿತ್ತು? ಈ ವಿಚಾರವನ್ನು ಹುಟ್ಟುಹಾಕಿದ್ದು ಯಾರು? ಇವುಗಳಿಗೆ ಉತ್ತರವನ್ನು ಕಂಡುಕೊಳ್ಳುವ ಪ್ರಯತ್ನ "ಬ್ರಿಟಿಷರೇಕೆ ಭಾರತ ಬಿಟ್ಟು ಹೋದರು?" ಈ ಲೇಖನದಲ್ಲಿದೆ. 14.08.1990ರಲ್ಲಿ ಮೊರಾರ್ಜಿ ದೇಸಾಯಿಯವರಿಗೆ ಪಾಕಿಸ್ತಾನ ನೀಡಿದ "ನಿಶಾನ್ ಎ ಪಾಕಿಸ್ಥಾನ್" ಗೌರವವನ್ನು, 30 ವರ್ಷಗಳ ನಂತರ 14.08.2020ರಲ್ಲಿ ಕಾಶ್ಮೀರದ ಪ್ರತ್ಯೇಕತಾವಾದಿ ಸೈಯದ್ ಅಲಿ ಶಾ ಗಿಲಾನಿಗೆ ನೀಡಿರುವ ಹಿಂದಿನ ರಾಜಕಾರಣ "ಮೊರಾರ್ಜಿ ದೇಸಾಯಿ ಪಡೆದ ಆ ಒಂದು ಪ್ರಶಸ್ತಿ" ಲೇಖನದಲ್ಲಿ ಚರ್ಚಿಸಲಾಗಿದೆ. ವಿಶ್ವದ ಮೊದಲ ಮಹಾಯುದ್ಧದಲ್ಲಿ ಬ್ರಿಟಿಷರ ಪರವಾಗಿ ಪಾಲ್ಗೊಂಡು ಮೃತರಾದ, ಗಾಯಾಳುಗಳಾದ, ಕಣ್ಮರೆಯಾದ ನಮ್ಮ ಯೋಧರ ಬಲಿದಾನದ ಕತೆ "ನೂರು ವರ್ಷಗಳ ಹಿಂದಿನ ಆ ಒಂದು ವಿಜಯ" ಲೇಖನದಲ್ಲಿದೆ.

ಮೊದಲ ಮಹಾಯುದ್ಧದಲ್ಲಿ ಅಮೇರಿಕಾ ಜಪಾನ್ ಮೇಲೆ ಅಣುಬಾಂಬ್ ಸ್ಫೋಟಿಸಿದ ನಂತರದ ಈ 75 ವರ್ಷಗಳಲ್ಲಿ ಬಹಳಷ್ಟು ರಾಷ್ಟ್ರಗಳು ಅಣುಬಾಂಬುಗಳನ್ನು ತಯಾರಿಸಿಕೊಂಡಿರುವ ಭಯಾನಕ ಚಿತ್ರಣವನ್ನು ನೀಡುತ್ತದೆ, "ಎಚ್ಚರ! ನಮ್ಮ ಬಳಿ 13000 ಅಣುಬಾಂಬುಗಳಿವೆ" ಲೇಖನ. ಟೋರಾಬೋರಾ ಗುಹೆಗಳಲ್ಲಡಗಿ ಕುಳಿತಿದ್ದ ಒಸಾಮಾ ಬಿನ್ ಲ್ಯಾಡೆನ್‌ನನ್ನು ಸಂದರ್ಶಿಸಿದ್ದ ಸೌದಿ ಅರೇಬಿಯಾದ ಪತ್ರಕರ್ತ ಜಮಾಲ್ ಕಶೋಗಿಯು, ಟರ್ಕಿಯ ಸೌದಿಯ ದೂತಾವಾಸದಲ್ಲಿ ಕೊಲೆಯಾದ ಬಗೆಗಿನ ವಿಮರ್ಶಾತ್ಮಕ ಲೇಖನ "ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ ಎನ್ನಿಸದ ಪತ್ರಕರ್ತನೊಬ್ಬನ ಕೊಲೆ". ಚೀನಾದ ಇಂಗ್ಲಿಷ್ ಅಧ್ಯಾಪಕನೊಬ್ಬ ಚತುರಮತಿಯಿಂದ ಆಲಿಬಾಬಾನಂತಹ ಬೃಹತ್ ಅಂತರ್ಜಾಲ ವಾಣಿಜ್ಯ ಸಂಸ್ಥೆಯನ್ನು ಕಟ್ಟಿದ ಯಶೋಗಾಥೆಯನ್ನು ಕಟ್ಟಿಕೊಡುತ್ತದೆ, "54ನೇ ವಯಸ್ಸಿನಲ್ಲಿ ನಿವೃತ್ತಿ ಘೋಷಿಸಿದ ಜಾಕ್ ಮಾ". ಅಮೇರಿಕಾ ಅಧ್ಯಕ್ಷ ಬುಷ್ ಅವರ ಏಳುಬೀಳುಗಳ ಚಿತ್ರಣ "ಸಾಹಸಿ ಜೀವನ ನಡೆಸಿದ ಬುಷ್ ಸೀನಿಯರ್"ನಲ್ಲಿದೆ.

1000 ಕನ್ನಡ ಮಾಧ್ಯಮ ಶಾಲೆಗಳನ್ನು ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನಾಗಿ ಪರಿವರ್ತಿಸುವ ಸರ್ಕಾರದ ನಿರ್ಧಾರದ ಹಿನ್ನೆಲೆಯಲ್ಲಿ ಬರೆದ ಲೇಖನ "ಇಂಗ್ಲಿಷ್ ಮಾಧ್ಯಮದ ಬಯಕೆಯ ಎದುರು ಕನ್ನಡ ಕುಸಿಯಲಿದೆಯೇ?". ಅಡುಗೆಮನೆಯ ಭಾಷೆಯಾದ ಕನ್ನಡ, ಅನ್ನಕೊಡುವ ಭಾಷೆ ಇಂಗ್ಲೀಷಿನೆದುರು ನಿಲ್ಲಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ಮುಂದಿಟ್ಟಿದ್ದಾರೆ ಲೇಖಕರು. 2008ರ ಮೇ ತಿಂಗಳಲ್ಲಿ ಮುಂಬೈನ ತಾಜ್


ಹೋಟೆಲ್‌ನಲ್ಲಿ ಲಷ್ಕರ್ ಇ ತೋಯಿಬಾನವರು ನಡೆಸಿದ ವಿಧ್ವಂಸಕ ಕೃತ್ಯದಿಂದ 170 ಅಮಾಯಕರು ಬಲಿಯಾದ ಘಟನೆ ಮತ್ತು 14.02.2019ರಂದು ಪುಲ್ವಾಮಾದಲ್ಲಿ ಜೈಶ್ ಎ ಮೊಹಮ್ಮದ್ ಸಂಘಟನೆಯಿಂದ 40 ಸಿ ಆರ್ ಪಿ ಎಫ್ ಯೋಧರನ್ನು ಬಲಿ ತೆಗೆದುಕೊಂಡ ಘಟನೆಯ ಸುತ್ತ ಹೆಣೆದ ಲೇಖನ "ದೇಶ ಕಾಯುವಾತ ಇದ್ದರೆ ತಾನೇ ನಾವು ನೀವು ಸುರಕ್ಷಿತ".

ಬ್ಲೂವೇಲ್, ಮೊಮೊ ಚಾಲೆಂಜ್‌ನಂತಹ ಅಪಾಯಕಾರಿ ಆಟವನ್ನು ಮಕ್ಕಳು, ಯುವಜನರ ಮೇಲೆ ಪ್ರಯೋಗಿಸುವುದನ್ನು ಕಂಡುಹಿಡಿದ ತಂತ್ರಜ್ಞನ ವಿಕೃತ ಮನಸ್ಥಿತಿಯ ಕುರಿತಾದ ಚಿಂತನೆಯಿರುವ "ಆಧುನಿಕ ಮಾನವನ ವಿಕೃತ ಸಂಶೋಧನೆ" ಪ್ರಬಂಧ ದಿಗಿಲು ಹುಟ್ಟಿಸುತ್ತದೆ. ಶಬರಿಮಲೆಯಲ್ಲಿ ಮಹಿಳೆಯರ ಪ್ರವೇಶದ ವಿವಾದದ ಕುರಿತಾದ ಚರ್ಚೆ. ಭಾವನೆ, ನಂಬಿಕೆ ಮತ್ತು ಕಾನೂನುಗಳ ನಡುವಿನ ಸಂಘರ್ಷ "ಶಬರಿಮಲೆಯಲ್ಲಿ ಸ್ತ್ರೀಶಕ್ತಿಗೆ ಜಯ" ಲೇಖನದಲ್ಲಿದೆ. ನವೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ಉದ್ಭವಿಸುವ ಹೊಂಜಿನ ಸಮಸ್ಯೆ ಮತ್ತು ಅದರ ಪರಿಹಾರದ ಹಿಂದಿರುವ ರಾಜಕೀಯ ವಿಚಾರಗಳನ್ನು ಚರ್ಚಿಸುತ್ತದೆ "ರೈತರು ಸುಟ್ಟ ಹೊಗೆ ದೆಹಲಿಯ ಶ್ವಾಸಕೋಶಕ್ಕೆ" ಎನ್ನುವ ಲೇಖನ.

ಈ ಎಲ್ಲಾ ಲೇಖನಗಳಲ್ಲೂ ಹಾಲಾಡಿಯವರು ವಸ್ತುವಿನ ಉಗಮ, ಬೆಳವಣಿಗೆ ಮತ್ತು ಇಂದಿನ ವಸ್ತುಸ್ಥಿತಿಯ ಬಗ್ಗೆ ಚರ್ಚಿಸುತ್ತಾರೆ. ಅಗತ್ಯಕ್ಕಿಂತ ಹೆಚ್ಚು ವಿವರಗಳನ್ನು ತುರುಕದೆ ಕ್ಲುಪ್ತವಾಗಿ ಹೇಳಬೇಕಾದ್ದಷ್ಟನ್ನೇ ಹೇಳಿದ್ದಾರೆ. ನಾನು ಹೇಳಿರುವ ಸಂಗತಿಗಳು ಇಲ್ಲಿರುವ ಪ್ರಬಂಧಗಳ ಒಂದು ಟ್ರೇಲರ್ ಮಾತ್ರಾ. ಇದನ್ನು ಸಂಪೂರ್ಣವಾಗಿ ಓದಿದಾಗ ಅದರ ರುಚಿ ನಮಗೆ ಸಿಗುತ್ತದೆ. ಸಂಗ್ರಹಯೋಗ್ಯವಾದ ಹೊತ್ತಿಗೆಯಿದು.

ಚಿತ್ತ ಹರಿದತ್ತ

ಇದು 2021ರಲ್ಲಿ ಪ್ರಕಟವಾದ 33 ಬರೆಹಗಳುಳ್ಳ ಐದನೆಯ ಸಂಕಲನ. ಇದರಲ್ಲಿ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದುದರಲ್ಲಿ ಆಯ್ಕೆಮಾಡಿದ ಲೇಖನಗಳಿವೆ. ಪರಿಸರಕ್ಕೆ ಸಂಬಂಧಿಸಿದ 18 ಪ್ರಬಂಧಗಳು ಮೊದಲ ಭಾಗದಲ್ಲಿದ್ದರೆ, ಎರಡನೆಯ ಭಾಗದಲ್ಲಿ ಪ್ರಚಲಿತ ವಿದ್ಯಮಾನಗಳ 15 ಪ್ರಬಂಧಗಳಿವೆ. ಈ ಸಂಕಲನವು "ಹಾಮಾನಾ ಅಂಕಣ ಬರಹ ಪ್ರಶಸ್ತಿ" ಹಾಗೂ "2022ರ ಅವ್ವ" ಎರಡು ಪ್ರಶಸ್ತಿಗಳನ್ನು ಪಡೆದುಕೊಂಡಿದೆ.



ಕುವೆಂಪು ಅವರ ನೆಚ್ಚಿನ ತಾಣ ಸಿಬ್ಬಲುಗುಡ್ಡದ ಬುಡದಲ್ಲಿ ಹರಿಯುವ ತುಂಗೆ "ಬರಿ ನೀರಲ್ಲ; ಸ್ಪಟಿಕ ಶುದ್ಧ ಸಲಿಲ. ಇಲ್ಲಿ ನೀರೆಲ್ಲವೂ ತೀರ್ಥ" ಎನ್ನುತ್ತಾರೆ ಲೇಖಕರು, "ಇಲ್ಲಿ ತುಂಗೆ ಧ್ಯಾನ ಮಾಡುತ್ತಿದ್ದಾಳೆ" ಲೇಖನದಲ್ಲಿ. ಅಲ್ಲಿ ನಿರ್ಭಯವಾಗಿ ಈಜಾಡುವ ಮೀನುಗಳು. ನಿಶ್ಶಬ್ದ ಜಗತ್ತಿನಲ್ಲಿ ಅಮೂರ್ತವೋ, ಮೂರ್ತವೋ ಅನಿಸುವ ಮನದ ಕದವನ್ನು ತಟ್ಟುತ್ತಿದ್ದ ಹಲವಾರು ದನಿಗಳು, ಸುತ್ತಲೂ ಮುತ್ತಿದ್ದ ಕಾಡು ಧ್ಯಾನ ಮಾಡುತ್ತಿತ್ತೋ ಅಥವಾ ಆ ಅನೂಹ್ಯ ಪರಿಸರದಲ್ಲಿ ಮಿಂದೆದ್ದ ನಮ್ಮೆಲ್ಲರ ಮನವೇ ತನ್ನಷ್ಟಕ್ಕೆ ತಾನೇ ಧ್ಯಾನಕ್ಕೆ ಅರಸುತ್ತಿತ್ತೋ ಏನೊಂದೂ ಗೊತ್ತಾಗದ ಅಯೋಮಯ ಸ್ಥಿತಿ ಎನ್ನುವ ಲೇಖಕರು ಓದುಗನನ್ನು ಒಂದು ಧ್ಯಾನಸ್ಥ ಸ್ಥಿತಿಗೆ ಒಯ್ಯುತ್ತಾರೆ.

ಮಲೆನಾಡು ಮತ್ತು ಕರಾವಳಿಯಲ್ಲಿ ಅಗತ್ಯಕ್ಕಿಂತ ಹೆಚ್ಚು ಮಳೆ ಸುರಿದು ಪ್ರಕೃತಿ ದಿನವೂ ಹೊಸಹೊಸ ರೂಪ ತಳೆಯುವ ಅಚ್ಚರಿಯನ್ನು "ಮಳೆಗಾಲದ ಹೂವುದಳು" ಪ್ರಬಂಧದಲ್ಲಿ ಕಾಣುತ್ತೇವೆ. ಸೀತಾಳೆ ದಂಡೆ. ಹೆಸರು ತಿಳಿಯದ ಬಣ್ಣಬಣ್ಣದ ಹೂಗಳು, ಕಾಳುಗಳು, ಕೊಳ್‌ಹೂಗಳಾಗುವ ವಿಸ್ಮಯ – ಎಲ್ಲದರ ವಿವರಗಳನ್ನು ಇಲ್ಲಿ ನೋಡುತ್ತೇವೆ. "ಯಾವುದಿದು ಲಂಗ ಧರಿಸಿದ ಅಣಬೆ" ಈಗಾಗಲೇ ಚರ್ಚಿತವಾಗಿದೆ.

ಶಿವರಾತ್ರಿಯಂದು ಕುಂದಾಪುರದ ಕ್ರೋಡ ಶಂಕರನಾರಾಯಣ, ಸಿದ್ಧಾಪುರದ ಹೊಳೆ ಶಂಕರನಾರಾಯಣ, ಮಾಂಡೋವಿ ಶಂಕರನಾರಾಯಣ, ಬೆಳ್ವೆ ಶಂಕರನಾರಾಯಣ, ಅವರ್ಸೆಶಂಕರನಾರಾಯಣವನ್ನು ನೋಡಿ ಮುಗಿಸಿ ಮತ್ತೆ ಕ್ರೋಡ ಶಂಕರನಾರಾಯಣ ದರ್ಶನ ಮಾಡುವ ಒಂದು ಪದ್ಧತಿಯ ವಿವರಗಳನ್ನು "ಪಂಚ ಶಂಕರನಾರಾಯಣ ದರ್ಶನ"ದಲ್ಲಿ ನೀಡುತ್ತಾ ಇದು ದೇವರಪೂಜೆ ಎನ್ನುವುದಕ್ಕಿಂದ ಪ್ರಕೃತಿಯ ಆರಾಧನೆ ಎನ್ನುತ್ತಾರೆ ಲೇಖಕರು. ಮೋಹಿನಿ ಮತ್ತು ಭೈರವೇಶ್ವರ ಶಿಖರಗಳು, ಬೆಟ್ಟದ ಬುಡದಲ್ಲಿ ತಾನಾಗೇ ರೂಪುಗೊಂಡಿರುವ ಶಿವಲಿಂಗ, ಮೇಲೊಂದು ದೇವಿಯ ವಿಗ್ರಹ. ಬಂಡಿಗಳ ನಡುವಿನಿಂದ ಗಂಗೋದ್ಭವ – ನಿಸರ್ಗದ ಒಂದು ವಿಸ್ಮಯವೆನಿಸುವ ಇಂತಹ ದೃಶ್ಯ ಯಾಣದ ಒಂದು ಮುಖವಾದರೆ, ಇಂದಿನ ಸಂಪರ್ಕಸೌಲಭ್ಯದಿಂದಾಗಿ, ಜನರ ದುಂಡಾವರ್ತನೆಯಿಂದಾಗಿ ಈ ಸ್ಥಳ ವಿನಾಶದತ್ತ ಸಾಗುತ್ತಿರುವುದು ಇನ್ನೊಂದು ಮುಖ. ಇವುಗಳ ಅನಾವರಣ "ಯಾಣದಲ್ಲಿ ಕಂಡ ಆ ಮತ್ತೊಂದು ಮುಖ" ಲೇಖನದಲ್ಲಿದೆ. ಚಾರಣದ ಯಾಣ ಈಗ ಹೊಲಸಿನ ತಾಣವಾಗಿದೆ.

ಬೆಕ್ಕುಗಳ ನಡವಳಿಕೆ, ಬಾಂಧವ್ಯ ಬೆಳೆದು ಕುಟುಂಬದ ಸದಸ್ಯರಾಗುವ ಪರಿಯ ಬಗೆಗಿನ ಲೇಖನ "ಬೆಕ್ಕಿನ ಮರಿಯ ಆಗಮನ". ಮನೆ ಮುಂದಿನ ಗಿಡದಲ್ಲಿ ಗೂಡುಕಟ್ಟಿ, ಮೊಟ್ಟೆಯಿಟ್ಟು, ಮರಿಮಾಡಿಕೊಂಡು ತಮ್ಮ ಜೀವನಕ್ರಮಕ್ಕೆ ಹಾರಿಹೋದ ಕಥನ "ಟುವ್ವಿ ಹಕ್ಕಿಯ ಗೂಡು". ಮಲೆನಾಡಿನ ಸಿರಿವೈಭವವನ್ನು ಕಟ್ಟಿಕೊಡುವ ಪ್ರಬಂಧ "ಮನದುಂಬುವ ಮಲೆನಾಡು". ಮಲೆನಾಡಿನ ಬಗ್ಗೆ "ಆಳದಲ್ಲಿ ಅಡಗಿರುವ ಅಮೂರ್ತ ಆಸೆಗಳನ್ನು ಬಡಿದೆಬ್ಬಿಸಿ, ಸುತ್ತಲಿನ ಹಸಿರು ತುಂಬಿದ ದೃಶ್ಯಗಳನ್ನು ಎದುರಿಗೆ ತೆರೆದಿರಿಸಿ, ಕಣ್ಣು ತುಂಬಾ ತುಂಬಿಕೊಟ್ಟ ಮೂರ್ತತೆಯನ್ನು ಸಾಕಾರಗೊಳಿಸುವ ಸಾಮರ್ಥ್ಯ ಹೊಂದಿದ ಶ್ಯಾಮಲ ಸೀಮೆ. "ಪ್ರಕೃತಿ ಮತ್ತು ಸಂಸ್ಕೃತಿ ಎರಡೂ ಸಮ್ಮಿಳಿತವಾಗಿರುವ ಪ್ರದೇಶವೆಂದರೆ ಮಲೆನಾಡು" ಎನ್ನುತ್ತಾರೆ. "ನಿರ್ಜೀವವೆಂದು ನಾವು ಪರಿಗಣಿಸಿರುವ ವಸ್ತುಗಳಿಗೆಲ್ಲಾ ಶ್ರಾವಣದ ಮಾಂತ್ರಿಕ ಸ್ಪರ್ಶದಿಂದ ಹೊಸ ರೂಪ ಬರುವುದಾದರೂ ಹೇಗೆ?!" ಎಂದು ಸೋಜಿಗವನ್ನು ವ್ಯಕ್ತಪಡಿಸುತ್ತಾರೆ, "ಈ ವರ್ಷದ ಶ್ರಾವಣ" ಬರೆಹದಲ್ಲಿ. "ರಂಗನತಿಟ್ಟಿನ ಹಕ್ಕಿಗಳು" ಲೇಖನವು ಅಪೂರ್ವವಾದ ಪಕ್ಷಿಲೋಕವೊಂದನ್ನು ತೆರೆದಿಡುತ್ತದೆ. 40000ಕ್ಕೂ ಹೆಚ್ಚಿನ ಹಕ್ಕಿಗಳಿಗೆ ಆಶ್ರಯಧಾಮವಾಗಿರುವ ಆರು ಪುಟ್ಟದ್ವೀಪಗಳ ತಾಣವಿದು. 150 ವಿವಿಧ ಜಾತಿಯ ಹಕ್ಕಿಗಳು ಇಲ್ಲಿವೆ. ರಷ್ಯಾ ಮತ್ತು ಸೈಬೀರಿಯಾದಿಂದಲೂ ಬರುತ್ತವೆ. ಇಲ್ಲಿರುವ ಮೊಸಳೆಗಳೇ ಇವುಗಳಿಗೆ ನಿಸರ್ಗ ನೀಡಿರುವ ಕಾವಲುಗಾರನಾಗಿರುವುದೊಂದು ಅಚ್ಚರಿಯೆನಿಸುತ್ತದೆ!.

ಕಳೆದ ಶತಮಾನದ ಉತ್ತರಾರ್ಧದಲ್ಲಿ ರಾತ್ರಿ ಓದಲು ಬಳಕೆಯಾಗುತ್ತಿದ್ದ ಚಿಮಿಣಿ ಎಣ್ಣೆಯ ಬುಡ್ಡಿ ಡೀಪಗಳ ಬಗೆಗಿನ ಸ್ವಾರಸ್ಯಕರ ಮಾಹಿತಿಗಳು "ರಾತ್ರಿ ಓದಲು ಬುಡ್ಡಿ ದೀಪ" ಲೇಖನದಲ್ಲಿವೆ. ಬುಡ್ಡಿಯ ಅಣ್ಣ ತಮ್ಮಂದಿರಾದ ಲ್ಯಾಂಟ್ರನ್‌ಗಳು, ಪೆಟ್ರೋಮ್ಯಾಕ್ಸ್‌ಗಳ ವಿವರಗಳೂ ಇಲ್ಲಿದೆ. "ದೀಪಕ್ಕೆ ಹ್ವಾಪನಾ" ಲೇಖನವು ಬಾಲ್ಯಕಾಲದಲ್ಲಿ ನಡೆಯುತ್ತಿದ್ದ ಮಹಾಲಿಂಗೇಶ್ವರ ದೇವಾಲಯದ ಕಾರ್ತೀಕ ದೀಪೋತ್ಸವದ ಸ್ವಾರಸ್ಯವನ್ನು

ತೆರೆದಿಡುತ್ತದೆ. ಕತ್ತಲಿನಲ್ಲಿ ಕಾಡುದಾರಿಯಲ್ಲಿ ಸಾಗುವಾಗ ಕಾಣುತ್ತಿದ್ದ ಮಿಂಚುಹುಳುಗಳ ಕಾಡಿನ ಸಸ್ಯರಾಶಿಗೆ ದಿನನಿತ್ಯದ ದೀಪೋತ್ಸವವನ್ನು ಕಂಡು ಬೆರಗಾಗುತ್ತಾರೆ ಲೇಖಕರು.

ಮನೆಮದ್ದು ಮಗುವಿನ ಕೆಮ್ಮನ್ನು ನಿವಾರಿಸಿದ ವಿಷಯವನ್ನು ವಿವರಿಸುತ್ತದೆ, “ಕೆಮ್ಮು ನಿವಾರಕ ದೊಡ್ಡಪತ್ರೆ”. ಕೊಡಚಾದ್ರಿಯ ಕಷ್ಟಕರ ಚಾರಣ ಹಾಗೂ ಮನದಣಿಯೆ ನಿಸರ್ಗ ಸೌಂದರ್ಯವನ್ನು ಅನುಭವಿಸಿದ ಕ್ಷಣಗಳು“ಕೊಡಚಾದ್ರಿಯ ನೆನಪು”ವಿನಲ್ಲಿ ದಾಖಲಾಗಿದೆ. ಸಂಜೆಯ ಸೂರ್ಯಾಸ್ತ ಮತ್ತು ಸೂರ್ಯೋದಯದ ಅತಿಸುಂದರ ಅನುಭವವನ್ನು ಓದುಗನಿಗೆ ದಾಟಿಸುವ ವಿವರಣೆ ಈ ಲೇಖನದಲ್ಲಿದೆ.

2013ರಲ್ಲಿ ಭಾರೀ ಮಳೆಯಿಂದಾಗಿ ಕೇದಾರನಾಥದಲ್ಲಿ ದೊಡ್ಡ ದುರಂತವಾದುದರ ಹಿನ್ನೆಲೆಯಲ್ಲಿ, 2005ರಲ್ಲಿ ಲೇಖಕರು ಕುಟುಂಬದೊಂದಿಗೆ ಅಲ್ಲಿಗೆ ಮಾಡಿದ ಪ್ರವಾಸವನ್ನು ನೆನಪಿಸಿಕೊಂಡಿದ್ದಾರೆ, “ನಲುಗಿದ ಕೇದಾರ ಖಂಡದಲ್ಲಿ”. “ನಿಮ್ಮೂರಿನ ಗದ್ದೆಯಲ್ಲಿ ವಾಂಟರ್ಕ ಉಂಟಾ?” ಎಂದು ಲೇಖಕರು ಓದುಗನನ್ನು ಕೇಳಿರುವುದು ಮಳೆಗಾಲದ ಆರಂಭದಲ್ಲಿ ಭತ್ತದ ಗದ್ದೆಗಳಲ್ಲಿ, ಬಾವಿಗಳಲ್ಲಿ ಕಾಣಸಿಗುವ ವಾಂಟರ್ಕ ಅಥವಾ ನೀರಾಮೆಯ ಪೂರ್ಣ ಪರಿಚಯ ನೀಡುವ ಸಲುವಾಗಿ. ಮನೆಹಿಂದಿನ ಗುಡ್ಡದಲ್ಲಿ ಕಾಣಸಿಗುತ್ತಿದ್ದ ಕಲ್ಲು ಆಮೆಯ ಪ್ರಸ್ತಾಪವೂ ಇದರಲ್ಲಿದೆ. ಇಂದಿನ ಮೊಬೈಲ್ ಯುಗದಲ್ಲಿ ವಾಟ್ಸಾಪ್ ಮಹಿಮೆಯ ಹಾಸ್ಯದ ಚಿತ್ರಣ “ವಾಟ್ಸಾಪ್ ಅಜ್ಜ”.

ಜಾಗತಿಕ ವಿಷಯಗಳ ಬಗೆಗಿನ ಇಲ್ಲಿನ ಪ್ರಬಂಧಗಳಲ್ಲಿ ಮೊದಲನೆಯ ಪ್ರಬಂಧ “ಮೈಕೆಲೇಂಜೆಲೋ ಗೊತ್ತು ಮಲ್ಲಿತಮ್ಮ ಗೊತ್ತಾ?” 16ನೆಯ ಶತಮಾನದ ರೆನೇಸಾನ್ಸ್ ಕಾಲದ ಈ ಶಿಲ್ಪಿ ಮತ್ತು ವರ್ಣಚಿತ್ರ ಕಲಾವಿದ ಜೀವಿಸಿರುವಾಗಲೇ ಇವನ ಜೀವನ ಚರಿತ್ರೆ ರಚನೆಗೊಂಡಿತ್ತು. ಅದೇಕಾಲದ ಲಿಯೋನಾರ್ಡೋ ಡಾವಿನ್ಸಿಯ ಬಗ್ಗೆಯೂ ನಾವು ಪಠ್ಯಗಳಲ್ಲಿ ಓದಿದ್ದೇವೆ. ಆದರೆ ಇಟಲಿಯ ಇತಿಹಾಸಕ್ಕಿಂತಲೂ ಮುಂಚೆಯೇ 12ನೆಯ ಶತಮಾನದಲ್ಲಿ ಏಳು ದೇಗುಲಗಳ ನಿರ್ಮಾಣದಲ್ಲಿ ಮುಖ್ಯ ಪಾತ್ರವಹಿಸಿದ, ವಿಶ್ವವಿಖ್ಯಾತ ಮದನಿಕೆಗಳ ವಿಗ್ರಹಗಳನ್ನು ಕೆತ್ತಿದ ಮಲ್ಲಿತಮ್ಮ, ಚವಣ, ದಾಸೋಜ ಇವರುಗಳ ಬಗ್ಗೆ ವಿದ್ಯಾ ಇಲಾಖೆಗೆ ವಿಸ್ಮೃತಿ ಆವರಿಸಿರುವುದು ಸಾಂಸ್ಕೃತಿಕ ವ್ಯಂಗ್ಯವಲ್ಲವೇ?!, ಒಂದು ಗಂಭೀರವಾದ ಚಿಂತನಾರ್ಹ ಪ್ರಶ್ನೆಯನ್ನೆತ್ತಿದ್ದಾರೆ ಲೇಖಕರು.

1868ರಲ್ಲಿ ಬ್ರಿಟನ್ನಿನ ಎಡ್ಮಂಡ್ ಡೇವಿಡ್ ಲೋಯ್ನ್ ಎಂಬಾತ ತೆಗೆದಿರುವ ಚಿತ್ರದಲ್ಲಿ ಹಂಪೆಯ ಕಲ್ಲಿನ ರಥಕ್ಕೆ ಗೋಪುರವಿದೆ. 1920ರ ತನಕ ಗೋಪುರವಿತ್ತು ಎನ್ನುವುದಕ್ಕೆ ಪುರಾವೆಗಳಿವೆ. ಬ್ರಿಟಿಷರು ಆರ್ಕಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾದ ಮೂಲಕ 1940ರಲ್ಲಿ ಇಡೀ ಆವರಣವನ್ನು ಸುಸ್ಥಿತಿಗೊಳಿಸಿರುವ ನಂತರದಲ್ಲಿ ತೆಗೆದ ಚಿತ್ರಗಳಲ್ಲಿ ಈ ಗೋಪುರವಿಲ್ಲ. ಈ ಮಾಹಿತಿಗಳ ವಿವರವಾದ ಲೇಖನ “ಯಾರು ಕೆಡವಿದರು ಈ ಐತಿಹಾಸಿಕ ಗೋಪುರವನ್ನು!”. ಮನವನ್ನು ಭಾರಗೊಳಿಸಿದ ಲೇಖನವಿದು. ಇದರ ಮುಂದುವರಿದ ಭಾಗದಂತಿರುವ ಮುಂದಿನ ಲೇಖನ “ತಾಳೀಕೋಟೆ ಯುದ್ಧದ ನಂತರವೂ ಹೋರಾಡಿದ ವಿಜಯನಗರದ ಆ ಅರಸ”. 15–16ನೆಯ ಶತಮಾನದಲ್ಲಿ ಇಡೀ ವಿಶ್ವದಲ್ಲಿಯೇ ಎರಡನೆಯ ಅತಿದೊಡ್ಡ ನಗರ ಎಂದು ಕರೆಸಿಕೊಂಡಿದ್ದ ಹಂಪಿಯನ್ನು ‘ಹಾಳು ಹಂಪಿ’ ಎನ್ನುತ್ತಿರುವುದು ಬ್ರಿಟಿಷರ ನಾಮಕರಣದ ಕಾರಣದಿಂದಲೇ? “ಉಳಿದ ಹಂಪಿ ಮತ್ತು ಗುರು ಬಿಷ್ಟಪ್ಪಯ್ಯನವರು” ಎನ್ನುವ ವಸುಂಧರಾ ದೇಸಾಯಿಯವರ ಪುಸ್ತಕದ ಬಗ್ಗೆ ಇಲ್ಲಿ ವಿವರಗಳಿವೆ. ಕಡೆಯ ಅರಸು ವೆಂಕಟಪತಿರಾಜು ತಾಳೀಕೋಟೆಯ ಯುದ್ಧದ ನಂತರವೂ 20 ವರ್ಷಕಾಲ ಹೋರಾಡಿದ ವಿವರಗಳು ಜನಮಾನಸದಿಂದ ಮರವೆಯಾಗಿವೆ.

ಅಮೇರಿಕಾದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 210 ಮತಗಳನ್ನು ಪಡೆದಿರುವಾಗಲೇ, ಎದುರಾಳಿ ಬೈಡೆನ್ 240 ಮತಗಳನ್ನು ಪಡೆದಿದ್ದರೂ, "ನಾನೇ ಗೆದ್ದಿರುವುದು, ಎಣಿಕೆ ಮುಂದುವರೆದರೆ ಅದು ದೊಡ್ಡ ಮೋಸ, ಈ ಕ್ಷಣವೇ ಮತಎಣಿಕೆ ನಿಲ್ಲಬೇಕು" ಎಂದು ಘೋಷಣೆ ಮಾಡಿಕೊಂಡ ಬೇಜವಾಬ್ದಾರಿ ಹೇಳಿಕೆಯ, ಸಾಮಾಜಿಕ ಟೊಳ್ಳನ್ನು ಕುರಿತಾದ ಲೇಖನ "ಗೆಲ್ಲುವ ಮೊದಲೇ ತಾನು ಗೆದ್ದೆ ಎನ್ನುತ್ತಾರಾ ಯಾರಾದರೂ". ದೇಶದ ಬೌದ್ಧಿಕ ದಿವಾಳಿತನ. 33 ಕೋಟಿ ಜನಸಂಖ್ಯೆಗೆ, 36 ಕೋಟಿ ಅಧಿಕೃತ ಗನ್‌ಗಳಿವೆ ಎನ್ನುವ ದಿಗಿಲು ತರಿಸುವ ಸತ್ಯ. ಇಡೀ ಪ್ರಕರಣದ ಹಿಂದಿನ ರಾಜಕೀಯ ವಿದ್ಯಮಾನಗಳನ್ನು ಕುರಿತ ಲೇಖನವಿದು.

22.10.1947ರಿಂದ 01.01.1949ರ ತನಕ ಪಾಕಿಸ್ತಾನವು ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಮಾಡಿದ ಯುದ್ಧಗಳು, ಪಿ ಓ ಕೆ. ಸೃಷ್ಟಿ, ಇದಕ್ಕೆ ಪರೋಕ್ಷವಾಗಿ ಕಾರಣನಾದ ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಮೌಂಟ್ ಬ್ಯಾಟನ್‌ನ್ನನ ಕುಟಿಲ ತಂತ್ರಗಳನ್ನು ಬಿಚ್ಚಿಡುತ್ತದೆ, "ಕಾಶ್ಮೀರ ಸಮಸ್ಯೆಗೆ ಮೌಂಟ್ ಬ್ಯಾಟನ್ ಕಾಣಿಕೆ" ಲೇಖನ. ಡಾಕ್ಟರ್ ಲಕ್ಷ್ಮೀ ಸೆಹೆಗಲ್ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಅವರ ಒಡನಾಡಿಯಾಗಿದ್ದು, ರಾಣಿ ಆಫ್ ಝಾನ್ಸಿ ಮಹಿಳಾ ರೆಜಿಮೆಂಟಿನ ನಾಯಕಿಯಾಗಿ, ಮೊದಲ ಮಹಿಳಾ ಕ್ಯಾಪ್ಟನ್ ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಅವರ ವೈವಿಧ್ಯಮಯ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ ಲೇಖನ "ಈ ಡಾಕ್ಟರ್ ಭಾರತದ ಮೊದಲ ಮಹಿಳಾ ಕ್ಯಾಪ್ಟನ್".

"ಅಪ್ಪಟ ಕಾಂಗ್ರೆಸಿಗ ಪ್ರಣಬ್ ಮುಖರ್ಜಿ"ಯವರ ಬಗೆಗಿನ ವಿವರವಾದ ಲೇಖನವಿದೆ. 5 ಬಾರಿ ರಾಜ್ಯಸಭಾ ಸದಸ್ಯರು, 2004ರಲ್ಲಿ ಲೋಕಸಭೆಗೆ ಆಯ್ಕೆ. 2012ರಲ್ಲಿ ರಾಷ್ಟ್ರಪತಿ ಹುದ್ದೆ. ನಂತರ 2019ರಲ್ಲಿ ಭಾರತರತ್ನ ಪಡೆದುಕೊಂಡ ಗಾಂಧಿ ಕುಟುಂಬದ ಆಪ್ತರು ಇವರು. ಜೋಗೇಂದ್ರನಾಥ್ ಮಂಡಲ್‌ರವರು ವಿಭಜನೆಯ ನಂತರ ಪಾಕಿಸ್ತಾನದ ಕಾನೂನು ಸಚಿವರಾಗಿದ್ದವರು. ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಲ್ಲಿ ಹಿಂದೂ ಜನರನ್ನು ಕಾಪಾಡುವ ಅವರ ಉದ್ದೇಶ ವಿಫಲವಾದದ್ದಷ್ಟೇ ಅಲ್ಲದೆ ಪಾಕಿಸ್ತಾನದ ಕಾನೂನು ರಕ್ಷಕರೇ ಅಲ್ಲಿನ ಹಿಂದೂ ಜನರ ನಾಶಕ್ಕೆ ಸಹಕಾರ ನೀಡಿದ್ದರಿಂದಾದ ಅವರ ಭ್ರಮನಿರಸನದ ವ್ಯಾಖ್ಯೆಯೇ "ನೆರೆಯ ದೇಶದ ಕಾನೂನು ಸಚಿವರೊಬ್ಬರು ನಿರಾಶ್ರಿತರಾದ ಕತೆ".

"ಬ್ರಿಟಿಷರೇಕೆ ಭಾರತ ಬಿಟ್ಟು ಹೋದರು" ಪ್ರಬಂಧವನ್ನು 'ಮನದ ಹಾಯಿದೋಣಿ' ಸಂಕಲನದಲ್ಲೂ ನೋಡಿದ್ದೇವೆ. ಸ್ವಾತಂತ್ರ್ಯ ನೀಡಲು 30.06.1948ರ ಗಡುವನ್ನು ಬ್ರಿಟನ್ ನೀಡಿದ್ದರೂ ಲಾರ್ಡ್ ಮೌಂಟ್ ಬ್ಯಾಟನ್ ಹನ್ನೊಂದು ತಿಂಗಳ ಮೊದಲೇ, ಸಿರಿಲ್ ರ್‍ಯಾಡ್‌ಕ್ಲಿಫ್ ಎಂಬ ಬ್ರಿಟಿಷ್ ವಕೀಲನ ಸಹಾಯದಿಂದ ಅವೈಜ್ಞಾನಿಕವಾಗಿ ಭಾರತ, ಪಾಕಿಸ್ತಾನದ ಗಡಿಯನ್ನು ಗುರುತಿಸಿ ವಿಭಜನೆ ಮಾಡಿ ಅವಸರದಲ್ಲಿ ಸ್ವಾತಂತ್ರ್ಯ ಘೋಷಣೆ ಮಾಡಿದ ವಿವರಗಳು "ಆತ ಅದೇಕೆ ಹನ್ನೊಂದು ತಿಂಗಳು ಅವಸರಿಸಿದ?" ಲೇಖನದಲ್ಲಿ ವಿವರವಾಗಿ ಮೂಡಿಬಂದಿದ್ದು, ಆ ಐತಿಹಾಸಿಕ ವಿವರಗಳು ನಮ್ಮನ್ನು ಬೆಚ್ಚಿಬೀಳಿಸುತ್ತವೆ. ಇಡೀ ವಿಶ್ವವೇ ಶಾಂತಿದೂತನೆಂದು ಗುರುತಿಸುವ ಗಾಂಧೀಜಿಯವರಂತಹವರನ್ನು ಗುರುತಿಸಿಲ್ಲದ ಪ್ರತಿಷ್ಠಿತ ಪ್ರಶಸ್ತಿಯೊಂದು, ಬಹಿರಂಗವಾಗಿಯೇ ಜನಾಂಗೀಯ ತಾರತಮ್ಯವನ್ನು, ವಸಾಹತುಶಾಹಿ ಧೋರಣೆಯನ್ನು ಪ್ರತಿಪಾದಿಸುವ ಲೇಖಕ ರುದ್ಯಾರ್ಡ್ ಕಿಪ್ಲಿಂಗ್‌ನಂತಹವರಿಗೆ ದೊರಕಿದ್ದು ಸಮಂಜಸವೇ? ಎನ್ನುವ ಪ್ರಶ್ನೆಯನ್ನು ಲೇಖಕರು ಕೇಳಿದ್ದಾರೆ "ನೋಬೆಲ್ ಪ್ರಶಸ್ತಿಗೆ ಭಾಜನನಾದ ಸಾಹಿತಿಯ ತಾರತಮ್ಯ ನೀತಿ" ಲೇಖನದಲ್ಲಿ. ಈ ಪ್ರಶಸ್ತಿಯ ಹಿಂದಿನ ರಾಜಕೀಯ ಮತ್ತು ರಾಜಕೀಯೇತರ ಕಾರಣಗಳನ್ನು ವಿಶ್ಲೇಷಿಸಿದ್ದಾರೆ.


ಭಾರತ ಮತ್ತು ಚೀನಾದ ನಡುವೆ ಗಡಿ ತಕರಾರಿನ ಸಮಯದಲ್ಲೇ, ಚೀನಾಕ್ಕೆ ಎಚ್ಚರಿಕೆ ನೀಡುವ ರೀತಿಯಲ್ಲಿ, ಆ ದೇಶದ ಹಲವು ಆ್ಯಪ್‌ಗಳನ್ನು, ಗೇಮ್‌ಗಳನ್ನು ನಿಷೇಧಿಸಿದ ಸುದ್ದಿ ದೇಶವಿದೇಶಗಳಲ್ಲಿ ಸಂಚಲನವನ್ನೇ ಸೃಷ್ಟಿಸಿತು. ಅದರಿಂದ ಚೀನಾಗೆ ಆರ್ಥಿಕ ನಷ್ಟವಾಗದಿದ್ದರೂ, ಚೀನಾದ ತಂತ್ರಜ್ಞಾನ ಶಕ್ತಿಗೆ ಭಾರತವೂ ಸವಾಲು ಒಡ್ಡಬಲ್ಲದು ಎಂದು ಅಂತಾರಾಷ್ಟ್ರೀಯ ಮಟ್ಟದಲ್ಲಿ ರೂಪುಗೊಂಡ ಅಭಿಪ್ರಾಯದ ಶಕ್ತಿ ದೊಡ್ಡದು ಎನ್ನುತ್ತಾರೆ ಲೇಖಕರು "ಪಬ್‌ಜಿ ನಿಷೇಧವೆಂದರೆ ಚೀನಾಕ್ಕೆ ಹಾಕಿದ ಸವಾಲು" ಬರೆಹದಲ್ಲಿ. ಬೆಂಗಳೂರಿಗೆ ಟೆಸ್ಲಾ ಆಗಮನದ ಪರಿಣಾಮವನ್ನು ವಿವರಿಸುತ್ತಾ "ಜಗತ್ತು ಇದುವರೆಗೆ ನಾನಾ ಮಜಲುಗಳ ಯಶಸ್ವಿ ವ್ಯಕ್ತಿಗಳನ್ನು ಕಂಡಿದೆ. ಆದರೆ ಎಲಾನ್ ಮಸ್ಕ್ ತಲುಪಿದ ಮಟ್ಟ, ಕಂಡ ಕನಸುಗಳು, ಕಾರ್ಯವೈಖರಿ, ವಿಕ್ಷಿಪ್ತ ಎನಿಸಬಹುದಾದ ನಡೆನುಡಿಗಳು ಇವೆಲ್ಲಕ್ಕೂ ಮಸ್ಕ್ ಮಾತ್ರಾ ಸಾಟಿ. ಕೈಹಾಕಿದ್ದೆಲ್ಲಾ ಚಿನ್ನ ಎನ್ನುವುದಕ್ಕಿಂತ ಯಾವ ಕ್ಷೇತ್ರದಲ್ಲಿ ಕೈ ಹಾಕಿದರೆ ಚಿನ್ನವನ್ನು ಹೊರತೆಗೆಯಬಹುದು ಎಂದು ಗುರುತಿಸುವಲ್ಲಿ ಮಸ್ಕ್ ನಿಸ್ಸೀಮರು ಎಂದಿದ್ದಾರೆ "ಬೆಂಗಳೂರಿಗೆ ಬಂದ ಎಲಾನ್ ಮಸ್ಕ್ ಒಡೆತನದ ಟೆಸ್ಲಾ" ಲೇಖನದಲ್ಲಿ.

ಅಮೇರಿಕಾದಂತಹ ಬಲಶಾಲಿ ದೇಶಗಳು ಭಾರತದಂತಹ ದೇಶಗಳನ್ನು ಬಳಸಿಕೊಳ್ಳುತ್ತಿರುವ ಹೇಯ ರೀತಿ "ನಂದಾದೇವಿ ಶಿಖರದಲ್ಲಿ ಅಮೇರಿಕಾದ ಗೂಢಚಾರರು" ಲೇಖನದಲ್ಲಿದೆ. 1965ರಲ್ಲಿ ಅಮೇರಿಕಾದ ಸಿ ಐ ಎ ಸಂಸ್ಥೆ ಹಾಗೂ ಭಾರತದ ಪರ್ವತಾರೋಹಿಗಳು, ಕ್ಯಾಪ್ಟನ್ ಕೊಯ್ಲಿ ನೇತೃತ್ವದಲ್ಲಿ ಅಮೇರಿಕಾವು ಚೀನಾದ ಮೇಲೆ ನಿಗಾ ಇಡಲು ಅನುಕೂಲವಾಗುವಂತೆ, ನಂದಾದೇವಿ ಶಿಖರದ ಬಳಿ ಒಂದು ಮಿನಿ ಪ್ಲುಟೋನಿಯಮ್ ಪರಮಾಣು ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಹೊರಟಿತು. ಭೀಕರ ಬಿರುಗಾಳಿಯಿಂದಾಗಿ ಪ್ರಯತ್ನ ವಿಫಲವಾಗಿ ಅದನ್ನು ಅಲ್ಲೇ ಬಿಟ್ಟು ಬಂದಿದ್ದರ ಪರಿಣಾಮವಾಗಿಯೇ ರೈನಿ, ಲಾತಾ ಹಳ್ಳಿಗಳಲ್ಲಿರುವ ಋಷಿಗಂಗಾ ತೀರದ ಸುರಂಗದಲ್ಲಿ ಇದ್ದಕ್ಕಿದ್ದಂತೆ ಪ್ರವಾಹ ನುಗ್ಗಿದ್ದು ಇನ್ನೂರು ಜನರ ಅಕಸ್ಮಾತ್ ಸಾವಿಗೆ ಕಾರಣವಾಯಿತೇ? 23.08.2018ರಲ್ಲಿ ಕೊಡಗಿನಲ್ಲಿ ನಡೆದ ಭೂಕುಸಿತದ ದುರಂತದ ವಿಶ್ಲೇಷಣೆ "ಪರಿಸರಕ್ಕೆ ಬೇಕು ಮೊದಲ ಸ್ಥಾನ" ಬರೆಹದಲ್ಲಿದೆ. ಅವೈಜ್ಞಾನಿಕ ಕಾಮಗಾರಿಗಳಿಂದಾಗಿ ಭೂಮಿಯ ಧಾರಣಾ ಶಕ್ತಿಯೇ ಕುಂದಿದೆ. ಗಾಡ್ಗೀಳ್ ವರದಿ, ಕಸ್ತೂರಿ ರಂಗನ್ ವರದಿಯ ಶಿಫಾರಸ್ಸಿನಂತೆ ಪರಿಸರ ಉಳಿಸುವತ್ತ ಕ್ರಮ ಕೈಗೊಂಡರೆ ಮಾತ್ರಾ ಕೊಡಗು ಈಗಿರುವಂತಾದರೂ ನಮಗೆ ಉಳಿದೀತು. ಎಂದು ಅಭಿಪ್ರಾಯ ಪಡುತ್ತಾರೆ ಲೇಖಕರು.

ಈ ಸಂಕಲನವನ್ನು ಓದಿದ ನಂತರ ಮನದಲ್ಲಿ ಮಿಶ್ರಭಾವವುಂಟಾಗುತ್ತದೆ. ಪರಿಸರದ ಕುರಿತಾದ ಲೇಖನಗಳು ಮನಕ್ಕೆ ಆಹ್ಲಾದವನ್ನುಂಟುಮಾಡಿದರೆ, ಪ್ರಸಕ್ತ ವಿದ್ಯಮಾನಗಳನ್ನು ಕುರಿತಾದ ಲೇಖನಗಳು ದಿಗಿಲು ಹುಟ್ಟಿಸುತ್ತವೆ, ಮನವನ್ನು ಭಾರಗೊಳಿಸುತ್ತವೆ. ಒಂದು ಒಳ್ಳೆಯ ಹೊತ್ತಿಗೆಯನ್ನು ಅನುಭವಿಸಿ ಓದಿದ ಸಂತಸವಾಗುತ್ತದೆ. ಪ್ರಶಸ್ತಿಗಳು ಬಂದಿರುವುದಕ್ಕೆ ಹೆಮ್ಮೆಯೆನಿಸುತ್ತದೆ.

ನಾ ಸೆರೆಹಿಡಿದ ಕನ್ಯಾಸ್ತ್ರೀ

2022ರ ಕೊನೆಯಲ್ಲಿ ಪ್ರಕಟವಾದ ಈ ಸಂಕಲನದಲ್ಲಿ 27 ಪ್ರಬಂಧಗಳಿವೆ. "ನಮ್ಮೂರಿನ ಜನಸಾಮಾನ್ಯರ ರೀತಿಯೇ ನಮ್ಮ ಮನೆ, ಸುತ್ತಲಿನ ಮರ, ಗಿಡ, ಬಳ್ಳಿ, ಹಕ್ಕಿ, ಆಮೆ, ಬಾವಿ, ಹಕ್ಕಲು, ಹಾಡಿ ಎಲ್ಲದಕ್ಕೂ ಒಂದು ವ್ಯಕ್ತಿತ್ವ ಇದೆ ಎಂದೇ ನನ್ನ ಅನಿಸಿಕೆ" ಎಂದಿದ್ದಾರೆ ಹಾಲಾಡಿಯವರು. ಅಂತೆಯೇ ಇಲ್ಲಿ ಪ್ರಬಂಧದ ರೂಪದಲ್ಲಿ ಕಟ್ಟಿಕೊಟ್ಟಿರುವ ಆ ಹಳ್ಳಿಯ ಚಿತ್ರಗಳನ್ನು ನೋಡೋಣ.



ಸಂಕಲನದ ಮೊದಲ ಲೇಖನ "ಹಳ್ಳಿ ಶಾಲೆಯಲ್ಲಿ ಒಂದು ದಿನ". 1959ರಲ್ಲಿ ಆರಂಭವಾದ ಹುಯ್ಯಾರು ಶಾಲೆ ಅಥವಾ ಗೊರಾಜೆ ಶಾಲೆ ಉತ್ಸವ ಮೂರ್ತಿಯಂತೆ ಊರೆಲ್ಲಾ ಸಂಚರಿಸಿ ಸ್ವಂತ ಕಟ್ಟಡಕ್ಕೆ ಬಂದದ್ದು ೮೦ರ ದಶಕದಲ್ಲಿ. ಮನೆಯಿಂದ ಶಾಲೆಗೆ ಹೋಗುತ್ತಿದ್ದ ದಾರಿಯ ಕ್ರಮ ನೋಡಿ: ಗದ್ದೆಯ ಬದುವಿನ ಕಾಲ್ದಾರಿ – ಸಂಕ – ಹಕ್ಕಲು – ಹಾಡಿ – ಧರೆ – ತೋಡು – ಸಂಕ – ಗದ್ದೆ – ತೋಡು – ಸಂಕ – ಗುಮ್ಮಿ – ಸಣ್ಣ ತೋಟ – ಗುಡಿ – ಓಣಿ – ತೊಡಮೆ – ದಾಟಿದರೆ ಗುಡಿಸಲು ಶಾಲೆ. ಮಧ್ಯಾಹ್ನ ಅದೇ ದಾರಿಯಲ್ಲಿ ಮನೆಗೆ ಹೋಗಿ ಊಟ ಮಾಡಿಕೊಂಡು ಪುನಃ ಶಾಲೆಗೆ ಬರುವ ಕ್ರಮ. ಶಾಲೆಯ ಹಿಂಭಾಗದ ಗದ್ದೆಯಲ್ಲಿ ಕೊಯ್ಲು ಮುಗಿದಿದ್ದರೆ ಅದೇ ಆಟದ ಮೈದಾನ. ಅಬ್ಬಾ ಎನಿಸುವುದಿಲ್ಲವೇ?! ಶಾಲೆಗೆ ಹೋಗಲು ಇದ್ದದ್ದು ರಸ್ತೆಗಳಲ್ಲ, ಕಾಡಂಚಿನ ಜಾಡುಗಳು ಎನ್ನುತ್ತಾರೆ ಲೇಖಕರು "ಹಾಡಿ ಗುಡ್ಡಗಳ ನಡುವೆ ಮೂರು ದಾರಿಗಳು" ಪ್ರಬಂಧದಲ್ಲಿ. ಆ ಜಾಡಿನಲ್ಲಿ ಗದ್ದೆಯ ಮೂಲಕ ಸಾಗುತ್ತಾ ಭತ್ತವು ಬೆಳೆಯುತ್ತಿದ್ದ ಕ್ರಮ, ಸುತ್ತಲಿನ ಪರಿಸರ, ಇವೆಲ್ಲಾ ಅನುದಿನದಿನದ ಪಾಠ. ಈ ಮೂರೂ ದಾರಿಗಳ ಬೇರೆ ಬೇರೆ ಪರಿಸರ ಮತ್ತು ವೈಶಿಷ್ಟ್ಯಗಳನ್ನು ತೋರುತ್ತಿದ್ದ ವಿವರಗಳನ್ನು ನೀಡುತ್ತಾರೆ.

ವಿವಿಧ ಕಪ್ಪೆಗಳ ಬಗೆಬಗೆಯ ಸಂಗೀತ. ಹಾರಬಲ್ಲ ಮಲಬಾರ್ ಗ್ಲೈಡರ್ಸ್, ಮರದಿಂದ ಮರಕ್ಕೆ ಹಾರುವ ಓತಿ, ಮರಗಳಿಗೆ ಸೀರಿಯಲ್ ಲೈಟ್ ಹಾಕುವ ಮಿಣುಕು ಹುಳಗಳು, ಮನೆಯ ಸುತ್ತಮುತ್ತ ಕಾಣುವ ಹಾರುವ ಜೀವಿಗಳು ಇವುಗಳ ವಿವರಗಳನ್ನು "ನಮ್ಮ ಪರಿಸರದ ಹಿರಿಮೆ ಈ ಹಾರುವ ಜೀವಿಗಳು" ಪ್ರಬಂಧದಲ್ಲಿ ಕಟ್ಟಿಕೊಡುತ್ತಾರೆ. ಮಕ್ಕಳಲ್ಲಿ ಭಯ, ಭಕ್ತಿ, ಗೌರವ ಮೂಡಿಸಿದ್ದ, ಎಪ್ಪತ್ತರಿಂದ ಎಂಭತ್ತು ಅಡಿ ಎತ್ತರದ ದೊಡ್ಡ ಎಲೆಯ ಕಪ್ಪುಕಾಂಡದ ಬೃಹದಾಕಾರದ ಹಣೆಮರದ ವಿವರಣೆ "ಸಿಹಿಸಿಹಿ ನೀರು ತುಂಬಿಕೊಂಡ ಹಣೆಕಣ್ಣು" ಲೇಖನದಲ್ಲಿ ಬರುತ್ತದೆ. ತೆಂಗು, ಬಗಿನೆ ಮತ್ತು ತಾಳೆ ಗಿಡಗಳಿಂದ ಕಳ್ಳನ್ನು ಸಂಗ್ರಹಿಸುತ್ತಿದ್ದ ಮಾಹಿತಿ ಇಲ್ಲಿದೆ. ಇದರ ಎಲೆಗಳು ಒಂದು ಕಾಲದಲ್ಲಿ ಕಾವ್ಯವನ್ನು ಬರೆಯುವ ಹಾಳೆಗಳಾಗಿದ್ದವು. ಬೀಸಣಿಕೆ ಮತ್ತು ಕೊಡೆಗಳನ್ನು ತಯಾರಿಸುತ್ತಿದ್ದದ್ದೂ ಇತ್ತು. ಈಗ ಕೇವಲ ತಾಟಿನಿಂಗು ಹೆಸರಿನ ಹಣ್ಣಿನ ರೂಪದಲ್ಲಿ ಉಳಿದುಕೊಂಡಿದೆ.

ದಾಸವಾಳದಲ್ಲೇ ವಿಶಿಷ್ಟ ಪ್ರಭೇದವಾದ ಬಿಳಿದಾಸವಾಳದ ಉಪಯೋಗಗಳ ಬಗ್ಗೆ ಹೇಳುತ್ತದೆ, "ಹಸಿರಿನ ದಾಹ ತೀರಿಸುತ್ತಿದ್ದ ಬಿಳಿ ದಾಸವಾಳ" ಲೇಖನ. ಅದರ ಎಲೆಯನ್ನು ಇಡೀ ಗ್ರಾಮದವರು ಉಪಯೋಗಿಸಿ ಮಾಡುತ್ತಿದ್ದ ಸೆಕೆಹಿಟ್ಟು ಎನ್ನುವ ಖಾದ್ಯ, ತೋಡಿನಲ್ಲಿ ಹರಿಯುತ್ತಿದ್ದ ನೀರು ಕಡಿಮೆಯಾಗಿ ಗಿಡಗಳು ಒಣಗಿಹೋದ ವ್ಯಥೆಯ ಕತೆ ಪರಿಸರದಲ್ಲಾಗುತ್ತಿರುವ ಬದಲಾವಣೆಗೆ ನಿದರ್ಶನವಾಗಿದೆ. "ಮುಳ್ಳುಹಂದಿಯ ಮುಳ್ಳು ಎಷ್ಟು ಉದ್ದವಿರುತ್ತದೆ?" ಪ್ರಬಂಧದಲ್ಲಿ ಮುಳ್ಳುಹಂದಿ ಮತ್ತು ಚಿಪ್ಪುಹಂದಿಗಳು ಅವಸಾನದ ಅಂಚಿನಲ್ಲಿರುವುದಕ್ಕೆ ಅವು ವಾಸಿಸುತ್ತಿದ್ದ ಸ್ಥಳಗಳನ್ನು ಮನುಷ್ಯ ತನ್ನ ಉಪಯೋಗಕ್ಕೆ ಸೆಳೆದುಕೊಂಡಿರುವುದೇ ಕಾರಣ ಎನ್ನುತ್ತಾರೆ ಲೇಖಕರು. ಚಿಪ್ಪುಹಂದಿಯಂತೂ ಕಳ್ಳಸಾಗಾಣಿಕೆದಾರರಿಂದ ಅತಿಹೆಚ್ಚು ಬೇಡಿಕೆಯಲ್ಲಿರುವ ಪ್ರಾಣಿ ಎನ್ನುತ್ತಾ ಇಂತಹ ಪ್ರಾಣಿಗಳ ಜೀವನ ಸಂಕಷ್ಟದಲ್ಲಿರುವುದನ್ನು ಗುರುತಿಸುತ್ತಾರೆ.

ಅಂದು ಸಹಜವಾಗಿ ಪರಿಸರದಲ್ಲಿ ತೋಡು, ಗುಮ್ಮಿ, ಕೆರೆ, ಹೊಂಡ, ಬಗ್ಗುಬಾವಿ, ದೊಡ್ಡಬಾವಿ, ಸಣ್ಣ ಹೊಳೆ, ದೊಡ್ಡ ಹೊಳೆ, ಕಲ್ಯಾಣಿಯಂತಹವು ಎಷ್ಟಿದ್ದವೆಂದರೆ ಮನೆಯೊಂದಕ್ಕೆ ಒಂದಕ್ಕಿಂತ ಹೆಚ್ಚಿನ ಜಲ ಮೂಲಗಳಿರುತ್ತಿದ್ದವು ಎಂಬುದನ್ನು "ಮನೆಸುತ್ತಲೂ ಅವೆಷ್ಟು ಜಲಮೂಲಗಳು" ಲೇಖನದಲ್ಲಿ ಗುರುತಿಸುತ್ತಾರೆ. ಅಂತಹ ಜಲಮೂಲಗಳು ಪರಿಸರದ ನಾಶದಿಂದಾಗಿ, ಅಣೆಕಟ್ಟುಗಳಿಂದಾಗಿ ತಮ್ಮ ಒರತೆಯನ್ನು ಕಳೆದುಕೊಂಡಿವೆ ಎನ್ನುವ ಖೇದವನ್ನು ವ್ಯಕ್ತಪಡಿಸುತ್ತಾರೆ. "ನೆಲದಾಳದ ನಿಧಿಗೆ ಸರ್ಪನ ಕಾವಲು" ಪ್ರಬಂಧದಲ್ಲಿ ನಾಗರತಿ, ಮಂದರತಿ, ಚಾರುರತಿ, ದೇವರತಿ, ನೀಲರತಿ ಎನ್ನುವ ನಾಗಕನ್ನಿಕೆಯರ ಮಾಹಿತಿ ನೀಡುತ್ತಾರೆ ಲೇಖಕರು. ಸಹಜ ಸಂಚಾರದ ಹಾದಿಯಾದ ಹರನಗುಡ್ಡೆಯಲ್ಲಿ ಓಡಾಡುವಾಗ ಧನ್‌ಧನ್ ಎಂದು ಟೊಳ್ಳುನೆಲದ ಮೇಲೆ ನಡೆದ ಶಬ್ದ ಬರುತ್ತಿತ್ತಂತೆ. ಅದರಡಿಯಲ್ಲಿ ನಿಧಿಯಿದ್ದು ಸರ್ಪ ಕಾಯುತ್ತಿದೆ ಎನ್ನುವ ನಂಬಿಕೆಯೂ ಇತ್ತೆನ್ನುತ್ತಾರೆ. ಇಂತಹ ದಂತಕತೆಗಳು ಮಲೆನಾಡು ಮತ್ತು ಕರಾವಳಿಗಳಲ್ಲಿ ಸಾಮಾನ್ಯ.

ಬಂಜರು ಎಂದು ಕರೆಸಿಕೊಳ್ಳುವ 120 ಮೆಟ್ಟಿಲುಗಳಿರುವ, ಎರಡೂ ಬದಿಯಲ್ಲಿ ಮರಗಳಿರುವ ಹರನ ಗುಡ್ಡೆಗೆ ಇಕಾಲಜಿ ಸರಪಳಿಯಲ್ಲಿ, ಪರಿಸರದ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರವಿದೆ ಎನ್ನುತ್ತಾ ಹರನ ಗುಡ್ಡೆಯ ಸವಿವರವಾದ ವರ್ಣನೆಯನ್ನು ನೀಡುತ್ತಾರೆ, "ವರ್ಷಕ್ಕೆ ಮೂರು ಬಣ್ಣ ತಳೆವ ಹರನಗುಡ್ಡೆ" ಲೇಖನದಲ್ಲಿ. ಶ್ರಾವಣಕ್ಕೆ ಹಸಿರಾಗುವ, ದೀವಳಿಗೆಯಲ್ಲಿ ಬೂದುಬಣ್ಣಕ್ಕೆ ತಿರುಗುವ, ಚಳಿಗಾಲದಲ್ಲಿ ಬೆಳ್ಳಿಯ ಹಚ್ಚಡದಂತೆ ಕಾಣುವ, ಯುಗಾದಿಯಲ್ಲಿ ಕರಡ ಸುಟ್ಟು ಕಪ್ಪಗಾಗಿ ಮುಂದಿನ ಮಳೆಗಾಲಕ್ಕೆ ಗೊಬ್ಬರವಾಗುವ ಅದರ ವೈಶಿಷ್ಟ್ಯತೆಗಳನ್ನು ವಿವರಿಸಿದ್ದಾರೆ. ಹೆಬ್ಬಲಸು, ಚೇಂಪಿ, ಗರ್ಜನ, ಕಾಟುಮಾವು. ಗೋವೆಹಣ್ಣು ಮುಂತಾದವೆಲ್ಲಾ ಪ್ರಕೃತಿಯು ಧಾರಾಳವಾಗಿ ನೀಡುತ್ತಿದ್ದ ತಿನಿಸುಗಳು. ಇವುಗಳ ಸವಿಯನ್ನು ಉಣಬಡಿಸಿದ್ದಾರೆ "ಹಸಿರ ನಗು ಸೂಸುವ ಈ ಆತ್ಮೀಯ ಸ್ನೇಹಿತರು" ಲೇಖನದಲ್ಲಿ. ಪರೀಕ್ಷೆಯ ಓದಿಗಿಂತಲೂ ಪಕ್ಷಿವೀಕ್ಷಣೆಯ ಹವ್ಯಾಸವೇ ಜೋರಿತ್ತು ಎನ್ನುತ್ತಾರೆ. ನೆನಪುಗಳನ್ನು ಮುಂದುವರೆಸುತ್ತಾ ಮುಂದಿನ "ಪರಿಸರದ ಪಾಠಕ್ಕೆ ಇದೇ ಸೂಕ್ತ ತಾಣ" ಲೇಖನದಲ್ಲೂ ಹಕ್ಕಲಿನ ತುದಿಯಲ್ಲಿದ್ದ ಬಾಗಾಳು ಮರವೇ ಓದುವ ಮೇಜು, ಕುರ್ಚಿ. ಕೀಟಗಳನ್ನು, ಹುಳುಗಳನ್ನು ನೆಲದ ಮೇಲೆ, ಮರದ ಮೇಲೆ, ಎಲೆಗಳ ಕೆಳಗೆ ಗ್ರೂಪ್ ಹಂಟಿಂಗ್ ಅನುಸರಿಸಿ ಬೇಟೆಯಾಡುತ್ತಿದ್ದ ಹಲವು ಪ್ರಬೇಧದ ಹಕ್ಕಿಗಳು, ಮನೆಯ ಸುತ್ತಮುತ್ತಲು, ಶಾಲೆಗೆ ಹೋಗುವ ಹಾದಿ ಎಲ್ಲವೂ ಪರಿಸರದ ಪಾಠಶಾಲೆಗಳೇ ಎನ್ನುತ್ತಾರೆ.

"ಬೇಸಗೆಯಲ್ಲಿ ಬಾಯಿರುಚಿ ಹೆಚ್ಚಿಸುವ ಹಣ್ಣು!" ಲೇಖನದಲ್ಲಿ ಮನೆಯ ಸುತ್ತಮುತ್ತಲಿನಲ್ಲಿ ದೊರಕುತ್ತಿದ್ದ ಕಾಟುಮಾವಿನ ವೈವಿಧ್ಯಮಯ ರುಚಿಗಳು, ಹಣ್‌ಚಟ್ ಮಾಡುವ ವಿಧಾನಗಳನ್ನು ಪರಿಚಯಿಸುತ್ತಾರೆ ಇನ್ನೂ ಹಣ್‌ಚಟ್ ಸವಿಯುತ್ತಿರುವಾಗಲೇ ಮುಂದಿನ ಲೇಖನ "ಹೂವಿನಿಂದ ತಯಾರಿಸುವ ದೋಸೆ" ರುಚಿಪ್ರಿಯರ ಗಮನ ಸೆಳೆಯುತ್ತದೆ. ಗುಂಬಳದ ಗಂಡು ಹೂವಿನ ದೋಸೆ. ಹೀರೇಕಾಯಿ, ಬಾಳೇಕಾಯಿ, ಬದನೇಕಾಯಿ, ಮರಕೆಸುವಿನ ದೋಸೆಗಳು. ಹತ್ತು ಹಲವು ಹೆಸರಿನ ಸೊಪ್ಪುಗಳ ತಂಬುಳಿಗಳು, ಬಡವರ ಪಾಲಿನ ಕಾಮಧೇನುವಾದ ಹಲಸಿನ ಕಾಯಿಯಿಂದ ಮಾಡುವ ಹಲವು ಪಾಕ ವೈವಿಧ್ಯಗಳು, ಅವತಾರಗಳು, ಗೆಣಸಿನ ಖಾದ್ಯಗಳು– ಓದುತ್ತಿರುವಾಗಲೇ ಬಾಯಲ್ಲಿ ನೀರೂರಿಸುತ್ತವೆ.

"ಹತ್ತರಾವಧಿ ದಿನದ ನೆನಪುಗಳು" ಒಂದು ವಿಶಿಷ್ಠವಾದ ಮಾಹಿತಿ ನೀಡುವ ಲೇಖನ. ಯುಗಾದಿ ಕಳೆದ ಹತ್ತರಾವಧಿ ದಿನಗಳಲ್ಲಿ ಭೂಮಿಯಾಳದಿಂದ ತಂಪು ಕೂಡಿಬರುತ್ತದೆ ಎನ್ನುವ ಅಲ್ಲಿನ ನಂಬಿಕೆ, ಬಿರು ಬೇಸಿಗೆಯಲ್ಲಿ ಗದ್ದೆಯನ್ನು ಬಿತ್ತಿ ಸಸಿಮಾಡಿ, ಜೂನ್ ಹೊತ್ತಿಗೆ ಅವುಗಳನ್ನು ನೆಟ್ಟರೆ ಬೇಗನೆ ಕೊಯ್ಲಿಗೆ ಬರುತ್ತವೆ

ಎಂಬ ಅಲ್ಲಿನ ನಡಾವಳಿಯ ಬಗ್ಗೆ ಹೇಳಿದ್ದಾರೆ. "ಹಾಲಾಡಿಯಲ್ಲಿ ಕಂಡ ಅಪರೂಪದ ಸಸ್ಯ" ಮನೆ ಮುಂದಿನ ಕೈತೋಟದಲ್ಲಿ ಬೆಳೆದ, ಅಳಿವಿನಂಚಿನಲ್ಲಿರುವ ಸರ್ಪಗಂಧಿ ಸಸ್ಯದ ವಿವರಗಳನ್ನು ನೀಡುತ್ತದೆ. "ಬೇರುಸಹಿತ ಕೀಳಿಸಿಕೊಂಡ ಬಿಳಿ ಕಿಸ್ಕಾರ" ಲೇಖನದಲ್ಲಿ ಹಿಂದಿನ ಹಕ್ಕಲಿನಲ್ಲಿದ್ದ ಬಿಳಿ ಕಿಸ್ಕಾರದ ಗಿಡವನ್ನು ಅಪರಿಚಿತನೊಬ್ಬ ಬುಡಸಹಿತ ಕಿತ್ತುಕೊಂಡು ಹೋದ ಘಟನೆಯ ಹಿನ್ನೆಲೆಯಿಟ್ಟುಕೊಂಡು ಹಾಗೆಯೇ ನಾಶಗೊಳ್ಳುತ್ತಿರುವ ಹಲವು ಸಸ್ಯವೈವಿಧ್ಯಗಳ ಬಗ್ಗೆ ಲೇಖಕರು ಹೇಳಿದ್ದಾರೆ.

ಕುಟುಂಬದ ಆಸ್ತಿಯನ್ನು ಪಾಲು ಮಾಡುವಾಗ ಮನೆಯ ಮುಂದಿನ ತೋಟವೂ ಹಿಸ್ಸೆಯಾಯಿತು. ಅದರಲ್ಲಿದ್ದ ಎಲ್ಲಾ ಮರಗಳೂ ಪಾಲಾದವು. ಆದರೆ ಇದ್ದ ಒಂದು ದೂಪದ ಮರಕ್ಕೆ ಎರಡೂ ಕಡೆಯವರ ಬೇಡಿಕೆ! ಹಾಗಾಗಿ ಮುಕ್ಕಾಲು ಭಾಗ ಒಬ್ಬರಿಗೆ, ಕಾಲುಭಾಗ ಇನ್ನೊಬ್ಬರಿಗೆ ಎಂದು ಪಾಲಾದ ಕತೆಯನ್ನು "ಎರಡು ಕುಟುಂಬಗಳು ಹಂಚಿಕೊಂಡ ಜೀವಂತ ಮರ" ಹೇಳುತ್ತದೆ. ಅದಕ್ಕಿದ್ದ ವಾಣಿಜ್ಯಿಕ ಮೌಲ್ಯ, ತಯಾರಾಗುತ್ತಿದ್ದ ಎಣ್ಣೆಗಾಗಿ ಹೀಗಾಗಿದ್ದಿರಬಹುದು. ಮನೆಯ ಮುಂದಿನ ಅಡಿಕೆ ತೋಟದಲ್ಲಿದ್ದ ಕಾಟುಮಾವು, ಅಡಿಕೆ, ಮೆಣಸು, ಸೀಗೇಕಾಯಿ, ಅಮಟೇಕಾಯಿ, ರಂಜ, ಹಲಸು, ದೂಪ, ರಾಮಪತ್ರೆ, ನೇರಳೆ, ಕಾಟು ಮರಗಳು, ಹೆಬ್ಬಲಸು, ಇತ್ಯಾದಿ ಎಲ್ಲದರ ವಿವರಗಳೂ "ಮನೆಯ ಹತ್ತಿರವೇ ಕಾಡುಮರಗಳು" ಲೇಖನದಲ್ಲಿ ಸಿಗುತ್ತವೆ.

ಇತ್ತೀಚೆಗಿನ ಎರಡು ಮೂರು ದಶಕಗಳಲ್ಲಿ ಊರಿಗೆ ಬಂದು ಸೇರಿಕೊಂಡಿರುವ ಹೊಸ ಅತಿಥಿ ನವಿಲು. ಎಷ್ಟೇ ಸುಂದರವಾಗಿದ್ದರೂ, ಕಾಡುಹಂದಿ ಮತ್ತು ಮಂಗಗಳ ನಂತರ ಇದು ರೈತನಿಗೆ ಅತಿಹೆಚ್ಚು ಉಪದ್ರಕೊಡುವ ಜೀವಿ. ಕಾಂಗೋ ಮತ್ತು ಇಂಡೋನೇಷಿಯನ್ ಪ್ರಭೇದದ ನವಿಲುಗಳು ವಿನಾಶದ ಅಂಚಿಗೆ ತಲುಪಿವೆ. ಇಂಡಿಯನ್ ಪೀಫೌಲ್ ಈಗ ಹಲವು ದೇಶಗಳಲ್ಲಿ ಕಾಣುತ್ತಿವೆ ಎನ್ನುವ ವಿವರಗಳು "ಎಲ್ಲಿದ್ದೆ ಇಲ್ಲಿ ತನಕ ಎಲ್ಲಿಂದ ಬಂದ್ಯವ್ವ" ಲೇಖನದಲ್ಲಿದೆ. ಪಕ್ಷಿಗಳ ಬಗ್ಗೆ ವಿವಿಧ ಮಾಹಿತಿಯಿರುವ ಪುಸ್ತಕಗಳ ಬಗೆಗಿನ ಮಾಹಿತಿಯನ್ನು "ನಮ್ಮ ದೇಶದಲ್ಲಿರುವ ಹಕ್ಕಿ ಪ್ರಭೇದಗಳೆಷ್ಟು?" ಲೇಖನ ನೀಡುತ್ತದೆ. ಸಲೀಂ ಅಲಿಯವರ ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್, ದಿ ಹ್ಯಾಂಡ್‌ಬುಕ್ ಆಫ್ ಬರ್ಡ್ಸ್ ಆಫ್ ಇಂಡಿಯಾ ಎಂಡ್ ಪಾಕಿಸ್ತಾನ್ (ಸಲೀಂ ಅಲಿ, ದಿಲ್ಲಾನ್ ರಿಪ್ಲೆ) 10 ಸಂಪುಟ, 2060 ಹಕ್ಕಿಗಳ ವಿವರ. ಕೊಲ್ಕೊತ್ತಾದ ಜುವಲಾಜಿಕಲ್ ಸರ್ವೆಯವರು ಪ್ರಕಟಿಸಿರುವ ಬರ್ಡ್ಸ್ ಆಫ್ ಇಂಡಿಯಾ ಪುಸ್ತಕಗಳ ವಿವರಗಳು ಇಲ್ಲಿವೆ. ಭಾರತದ ಪ್ರಭೇದಗಳು: ಒಟ್ಟು 1332 1227 + 104 ಎಂದು ಹೇಳುತ್ತದೆ. ಅಂತರ್ಜಾಲದಲ್ಲಿ ಸಿಗುವ ದತ್ತಾಂಶ ಸಂಗ್ರಹ, ಸ್ಮಾರ್ಟ್ ಫೋನ್, ಯೂಟ್ಯೂಬ್, ಡಿಜಿಟಲ್ ಫೋಟೋಗ್ರಫಿ, ರೆಕಾರ್ಡ್ ಮಾಡುವ ಅವಕಾಶ ಇವು ಪಕ್ಷಿವೀಕ್ಷಣೆಯ ಹವ್ಯಾಸವನ್ನು ಸರಳಗೊಳಿಸಿದೆ ಎನ್ನುತ್ತಾರೆ. ಪೂರ್ಣಚಂದ್ರ ತೇಜಸ್ವಿಯವರ ಬಗೆಗಿನ ಲೇಖನ "ಶ್ರೇಷ್ಠ ಕತೆಗಾರನೊಬ್ಬ ಹಕ್ಕಿಯ ಹಿಂದೆ ಹೊರಟ ವಿಸ್ಮಯ". ಶೃಂಗೇರಿ ಬಳಿಯ ಬೆಂಕಿಗಾಹುತಿಯಾದ ಕಾಡಿನಲ್ಲಿ ಸುತ್ತಾಡಿ, ಬೆಂಕಿಗೆ ನರಳಿದ ಸಸ್ಯ ಮತ್ತು ಪ್ರಾಣಿ ಸಂಕುಲಗಳ ನೋವನ್ನು "ಸತ್ತ ಮರಗಳ ಹಾಡು"ವಿನಲ್ಲಿ ಅಕ್ಷರ ರೂಪದಲ್ಲಿ ಪೂಚಂತೇ ಮೂಡಿಸಿದ ಪರಿ ಅನನ್ಯ.. ಮನದ ಹಾಡನ್ನು ಆಲಿಸಿ ಮನಸ್ಸು ಬಯಸುವ ಕೆಲಸವನ್ನು ಮಾತ್ರವೇ ಮಾಡಿದ ಭಾವಜೀವಿಯವರು. ಮಿಲೇನಿಯಂ ಸರಣಿ, ಹಲವು ಅನುವಾದಗಳು, ಲಂಕೇಶ್ ಪತ್ರಿಕೆಯ "ಅದ್ಭುತ ಜಗತ್ತು" ಅಂಕಣ ಇವೆಲ್ಲವನ್ನೂ ನೋಡುವಾಗ "ಪ್ರಕೃತಿ, ಪರಿಸರವೆಂದರೆ ತೇಜಸ್ವಿ; ತೇಜಸ್ವಿಯೆಂದರೆ ಪ್ರಕೃತಿ, ಪರಿಸರ" ಅನ್ನಿಸುವುದಲ್ಲವೇ?


ಬೀದಿಗಳಲ್ಲಿ, ಗಲ್ಲಿಗಳಲ್ಲಿ, ಮನೆಯ ಒಳಹೊರಗೆ, ಅಂಗಳದಲ್ಲಿ, ಗದ್ದೆ ತೋಟಗಳಲ್ಲಿ, ಎಲ್ಲೆಂದರಲ್ಲಿ; ಬ್ಯಾಟ್ ಸಿಗದಿದ್ದರೆ ತೆಂಗಿನ ಹೆಡೆಮಟ್ಟೆ, ವಿಕೆಟ್‌ಗಳಿಗೆ ಸೌದೆ ತುಂಡು, ಬಟ್ಟೆಯ ಉಂಡೆಯನ್ನೇ ಬಾಲ್ ಮಾಡಿಕೊಂಡು

ಕ್ರಿಕೆಟ್ ಆಡುತ್ತಿರುವ ದೇಶ ನಮ್ಮದು. ಟೆನಿಸ್ ಬಾಲ್, ಲೆದರ್ ಬಾಲ್, ಕಾರ್ಕ್ ಬಾಲ್ ಕ್ರಿಕೆಟ್ಟುಗಳು, ಫ್ರೆಂಡ್ಲಿ ಮ್ಯಾಚುಗಳು – ಇವೆಲ್ಲವುಗಳ ಸೊಗಸಾದ ವಿವರಣೆ "ಕ್ರಿಕೆಟ್ ಹುಚ್ಚು ಹತ್ತಿದರೆ ಊಟ ತಿಂಡಿಯೂ ಬೇಡ" ಲೇಖನದಲ್ಲಿದೆ. "ಪುಸ್ತಕದ ನಂಟು ಮನದ ಕರದಂಟು" ಲೇಖನದಲ್ಲಿ ಲೇಖಕರಿಗೆ ಪುಸ್ತಕದ ರುಚಿ ಹಚ್ಚಿಸಿದ ಸಚಿತ್ರ ಶಾಲಾ ನಿಘಂಟು, ಕನ್ನಡ ರತ್ನ ಕೋಶ, ಹಳೆಯ ಪೇಪರ್ ಕೊಟ್ಟು ಜೀರ್ಣಾವಸ್ಥೆಯಲ್ಲಿದ್ದ ನಿಘಂಟನ್ನು ಕೊಂಡ ಪ್ರಸಂಗ, ಕಾಲೇಜಿನ ಲೈಬ್ರರಿ ಹಾಗೂ ಸಾರ್ವಜನಿಕ ಲೈಬ್ರರಿ. ಲಾರಾ ಇಂಗಲ್ಸ್‌ನ ವೈಲ್ಡರ್ ಸರಣಿಯ ಏಳು ಪುಸ್ತಕಗಳ ಎಸ್. ಅನಂತನಾರಾಯಣ ಅವರ ಅನುವಾದ. 1934ರಲ್ಲಿ ಪ್ರಕಟವಾಗಿದ್ದ ಎಂಟಾಣೆ ಬೆಲೆಯ ಕಾರಂತರ "ಚಿತ್ರಮಯ ದಕ್ಷಿಣಕನ್ನಡ" ಇವುಗಳ ಆಸಕ್ತಿದಾಯಕ ಮಾಹಿತಿಗಳಿವೆ.

"ಗಂಟಿ ಕಾಲಡಿ ಗೊಬ್ಬರದ ರಸ" ಎನ್ನುವ ಪ್ರಬಂಧದಲ್ಲಿ ಬರುವ ವಿಷಯ ಈ ಹಿಂದೆಯೂ ಬಂದಿದೆ. ಇತ್ತೀಚೆಗೆ ಈ ಲೇಖಕರಿಂದ ರಚಿತವಾದ ಕಾದಂಬರಿ "ಅಬ್ಬೆ". ಅದರ ಹಿನ್ನೆಲೆಯಲ್ಲಿ "'ಅಬ್ಬೆ'ಜೇಡ ನಿಮಗೆ ಗೊತ್ತೆ?" ಪ್ರಬಂಧ ಮುಖ್ಯವಾಗುತ್ತದೆ. ಜಗತ್ತಿನಲ್ಲಿ 50000ಕ್ಕೂ ಹೆಚ್ಚು ಪ್ರಭೇದದ ಜೇಡಗಳಿವೆ. ನಮ್ಮ ದೇಶದಲ್ಲಿ 1923 ಪ್ರಭೇದದ ಜೇಡಗಳಿವೆ. ಇಂಡಿಯನ್ ಆರ್ನಮೆಂಟಲ್ ಟರಂಟುಲಾ 8 ಇಂಚು ಉದ್ದದ ಜೇಡ ಸ್ವಲ್ಪಮಟ್ಟಿಗೆ ವಿಷಕಾರಿ. ಬಯಲು ಸೀಮೆಯ ಹೊಲದಲ್ಲಿ ಕಾಣಸಿಗುವ ದೊಡ್ಡ ಗಾತ್ರದ ಮೈತುಂಬಾ ರೋಮಹೊಂದಿದ ಅಬ್ಬೆ ಜೇಡವು ಕಚ್ಚಿದರೆ ಮನುಷ್ಯ ಮೃತನಾಗಬಹುದು ಎಂದು ಅಲ್ಲಿನ ಗ್ರಾಮೀಣ ಜನರ ಅಭಿಪ್ರಾಯ ಎನ್ನುತ್ತಾರೆ ಲೇಖಕರು. "ಕಪ್ಪೆಕೊಯ್ಯುವ ಪಠ್ಯಕ್ರಮ" ಲೇಖನ ತೋಡಿನ ನೀರಿನಲ್ಲಿ ಬಟ್ರಾಚೋಸ್ಪರ್ಮಮ್ ಪಾಚಿಯನ್ನು ಗುರುತಿಸಿ ಕಾಲೇಜಿಗೆ ಕೊಂಡಯ್ದದ್ದು. ಪಿ.ಯು.ಸಿ.ಯಲ್ಲಿನ ಕಪ್ಪೆಯ ಡಿಸೆಕ್ಷನ್ ಪ್ರಕರಣದ ಕುರಿತು ಹೇಳುತ್ತದೆ.

ಈ ಸಂಕಲನದ ಒಂದೆರಡು ಲೇಖನಗಳನ್ನು ಬಿಟ್ಟರೆ ಮಿಕ್ಕವೆಲ್ಲಾ ಪರಿಸರ ಸಂಬಂಧಿ ಲೇಖನಗಳೇ. ಇದರಲ್ಲಿನ ಕೆಲವು ಪ್ರಸಂಗಗಳು ಇನ್ನಿತರ ಸಂಕಲನಗಳಲ್ಲೂ ಬಂದಿದ್ದರೂ, ಅದನ್ನು ಪುನರಾವರ್ತನೆ ಎನ್ನಲಾಗದು. ಬೇರೆ ಬೇರೆ ವಿಷಯಗಳನ್ನು ಹೇಳುವಾಗ ಈ ಪ್ರಸಂಗಗಳ ಕೊಂಡಿಯಿರುವುದರಿಂದ ಆ ಲೇಖನದ ದೃಷ್ಟಿಯಿಂದಷ್ಟೇ ಆ ವಿಷಯಗಳನ್ನು ನೋಡಬೇಕಾಗಿದೆ. ಹಿಂದಿನ ಕೆಲವು ಸಂಕಲನಗಳಲ್ಲಿ ಪ್ರಕಟವಾದ ಲೇಖನಗಳೂ ಇಲ್ಲಿವೆ.

ಶ್ರೀ ಶಶಿಧರ ಹಾಲಾಡಿಯವರ ಕಾದಂಬರಿಗಳು



'ಕಾಲಕೋಶ'ದಲ್ಲೊಂದು ಯಾನ

ಶಶಿಧರ ಹಾಲಾಡಿಯವರು ಬರೆದ 'ಕಾಲಕೋಶ' ಕಾದಂಬರಿ 27ನೆಯ ಏಪ್ರಿಲ್ 2021ರಂದು ಬಿಡುಗಡೆಯಾಯಿತು. ಇದನ್ನು ಬಿಡುಗಡೆ ಮಾಡಿದ ಪತ್ರಕರ್ತ, ಲೇಖಕ ಜೋಗಿಯವರು ಇದರಲ್ಲಿನ ವಲಸೆಯ ಕಥನ, ಇಂದಿನ ದಿನಗಳಲ್ಲೂ ಎದುರಾಗುತ್ತಿರುವ ವಲಸೆಯ ತಲ್ಲಣಗಳಿಗೆ ಕನೆಕ್ಟ್ ಆಗುತ್ತದೆ ಎಂದು ಇಲ್ಲಿನ ಕತೆಯ ಸಾರ್ವತ್ರಿಕತೆಯನ್ನು ಗುರುತಿಸಿದರು. ಕಾದಂಬರಿ ಓದಿದಾಗ ಈ ಅಂಶವು ಪ್ರತಿಯೊಬ್ಬ ಓದುಗನ ಅನುಭವಕ್ಕೂ ಬರುವಂತದೇ. ಪುಸ್ತಕದ ಬಗ್ಗೆ ಮಾತನಾಡಿದ ಪತ್ರಕರ್ತ ಹರೀಶ್ ಕೇರ ಅವರು ಇಲ್ಲಿನ ಮೂರು ಕುಟುಂಬಗಳ ವಲಸೆ, ಸ್ವಾತಂತ್ರ್ಯ ದೊರೆತಾಗ ನಮ್ಮ ದೇಶದ ಭಾಗದಲ್ಲಿ ನಡೆದ ಹಿಂಸೆ, ಮನುಷ್ಯನಲ್ಲಿರುವ ಕ್ರೌರ್ಯ ಇತ್ಯಾದಿ ವಿವರಗಳು ಕಾದಂಬರಿಗೆ ಅರ್ಥ ಕಟ್ಟಿಕೊಟ್ಟಿವೆ ಎಂದರು.

ಪುಸ್ತಕದ ಮುನ್ನುಡಿಯಲ್ಲಿ ಶ್ರೀ ವಿಶ್ವೇಶ್ವರ ಭಟ್ಟರು "ಈ ಕಾದಂಬರಿ ಅಪರೂಪದ ಕಥಾಹಂದರವನ್ನು ಹೊಂದಿದೆ. ಈ ವಿಷಯವನ್ನು ಕೈಗೆತ್ತಿಕೊಂಡು ಬರೆದವರು ವಿರಳ. 1947ರಲ್ಲಿ ದೇಶ ವಿಭಜನೆಯಾದಾಗ, ಪಾಕಿಸ್ತಾನದಲ್ಲಿದ್ದ ಲಕ್ಷಾಂತರ ಸಿಖ್ ಜನಾಂಗದ ಜನರು ದೆಹಲಿಗೆ ಓಡಿಬಂದರು. ಕಷ್ಟವೋ, ಸುಖವೋ ನಿರಾಶ್ರಿತರಾಗಿ ಬಂದು ದೆಹಲಿ ಸೇರಿದ ಆ ಶ್ರಮಜೀವಿ ಜನಾಂಗ ತಮ್ಮ ಪಾಡಿಗೆ ತಾವು ಬದುಕನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಆದರೆ 1984ರಲ್ಲಿ ಅದೇ ಸಿಖ್ ಜನಾಂಗದ ಮೇಲೆ ದೆಹಲಿಯಲ್ಲಿ ಮತ್ತು ದೇಶದ ಇತರ ಪ್ರದೇಶಗಳಲ್ಲಿ ಭೀಕರ ಆಕ್ರಮಣವಾಯಿತು. ಈ ಹತ್ಯಾಕಾಂಡದ ಹಿನ್ನೆಲೆಯನ್ನು ತಮ್ಮ ಕಾದಂಬರಿಯಲ್ಲಿ ಬಳಸಿಕೊಂಡಿರುವ ಶಶಿಧರ ಹಾಲಾಡಿಯವರ ಈ ಬರಹ ಸಾಹಸವನ್ನು ಮೆಚ್ಚಿಕೊಳ್ಳಲೇಬೇಕು ಎಂದಿದ್ದಾರೆ". ಮುಂದುವರೆದು, 'ದೆಹಲಿಯಲ್ಲಿ ನಡೆದ 1984ರ ಗಲಭೆ, 1947-48ರ ಸಮಯದಲ್ಲಿ ದೇಶ ವಿಭಜನೆಯ ದಳ್ಳುರಿಯಲ್ಲಿ ನಡೆದ ಹತ್ಯಾಕಾಂಡ, 1948ರಲ್ಲಿ ಮಹಾತ್ಮಾ ಗಾಂಧಿಯವರ ಕೊಲೆಯಾದಾಗ ಮುಂಬಯಿಯಲ್ಲಿ ನಡೆದ ಜನಾಂಗೀಯ ಗಲಭೆ ಮೊದಲಾದ ವಿವರಗಳನ್ನು ಇಲ್ಲಿನ ಕತೆಯಲ್ಲಿ ತರಲು ನಡೆಸಿರುವ ಪ್ರಯತ್ನ ಮೆಚ್ಚುಗೆಯಾಯಿತು. ಕರ್ನಾಟಕದ ಗಡಿ ಪ್ರದೇಶದಲ್ಲಿ ನಡೆದ ಸಣ್ಣ ಪ್ರಮಾಣದ ಒಂದು ಹಿಂಸಾಕೃತ್ಯಕ್ಕೆ ಬಲಿಯಾದವರ ಕತೆಯೂ ಈ ಕಾದಂಬರಿಯಲ್ಲಿ ಪ್ರಾಸ್ತಾವಿಕವಾಗಿ ಬರುತ್ತದೆ. ನಮ್ಮ ದೇಶದ ಒಟ್ಟೂ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಹಣಿಕಿ ಹಾಕಿದ ಈ ರೀತಿಯ ಹಿಂಸಾಕಾಂಡಕ್ಕೆ ಕಾರಣ ಎನಿಸಿದವರು ಭಾರತದ ನಾಗರೀಕರು ಎಂಬ ಸತ್ಯವನ್ನು ಈ ಕಾದಂಬರಿ ಹೇಳಲು ಪ್ರಯತ್ನಿಸುತ್ತಿದೆ. ವಿಭಿನ್ನ ಎನಿಸುವ ಕಥಾವಸ್ತುವನ್ನು ಆಯ್ದುಕೊಂಡ ಶಶಿಧರ ಹಾಲಾಡಿಯವರು ಐತಿಹಾಸಿಕ ಅಂಶಗಳನ್ನು ಒಳಗೊಂಡ ಒಂದು ಉತ್ತಮ ಕಾದಂಬರಿಯನ್ನು ರಚಿಸಿದ್ದಾರೆ' ಎನ್ನುತ್ತಾ, ಒಟ್ಟು ಕಥಾಹಂದರವನ್ನು ಕಟ್ಟಿಕೊಟ್ಟಿದ್ದಾರೆ.

ತಮ್ಮ ಲೇಖಕರ ಮಾತಿನಲ್ಲಿ ಶ್ರೀ ಶಶಿಧರ ಹಾಲಾಡಿಯವರು ಲೇಖಕರ ಮಾತಿನಲ್ಲಿ "1947ರಿಂದ 1984ರ ಕಾಲಘಟ್ಟದಲ್ಲಿ ನಡೆಯುವಂತೆ ಚಿತ್ರಿತಗೊಂಡಿರುವ ಇಲ್ಲಿನ ಕಥನವು ಮುಖ್ಯವಾಗಿ ಮನುಷ್ಯನ ಮನದಾಳದಲ್ಲಿ ಹುದುಗಿರುವ ಕ್ರೌರ್ಯವು ಪ್ರಕಟಗೊಂಡಾಗ, ಅದಕ್ಕೆ ಸಿಲುಕಿ, ನಲುಗಿ, ನರಳುವ ಅಮಾಯಕ ಮನುಷ್ಯರ ನೋವನ್ನು ಬಿಂಬಿಸುತ್ತದೆ. ಕರ್ನಾಟಕದ ಯುವಕನೋರ್ವ ದೆಹಲಿಯಲ್ಲಿ ವೃತ್ತಿ ಸಂಬಂಧಿತವಾಗಿ ವಾಸಿಸುವಾಗ ಮುಖಾಮುಖಿಯಾದ ಒಂದು ಸಿಖ್ ಕುಟುಂಬ ಮತ್ತು ಮಹಾರಾಷ್ಟ್ರದ ಒಂದು ಕುಟುಂಬದ ಮೂಲಕ ಬೆಳೆದುಕೊಳ್ಳುತ್ತಾ ಹೋಗುವ ಈ ಕಥನದಲ್ಲಿ, ದೇಶ ವಿಭಜನೆಯ ದಳ್ಳುರಿಯ ಸನ್ನಿವೇಶ ಪ್ರಾಸಂಗಿಕವಾಗಿ ಬರುತ್ತದೆ. ನಮ್ಮ ದೇಶವನ್ನು ಬ್ರಿಟಿಷರು ಯಾಂತ್ರಿಕವಾಗಿ, ಸ್ವಾರ್ಥದ ಆಸೆಗಾಗಿ, ತುಸು ಕುತಂತ್ರದಿಂದಲೂ ಎರಡು ಹೋಳಾಗಿ ಧರ್ಮದ ಆಧಾರದ ಮೇಲೆ ವಿಭಜಿಸಿದಾಗ ಎದ್ದ ಭೀಕರ ಬೆಂಕಿಯ ಜ್ವಾಲೆಗೆ ತಪತಪನೆ ಸುಟ್ಟು ಕರಕಲಾದ ಲಕ್ಷಾಂತರ ಜೀವಗಳ ನೋವು ನನ್ನನ್ನು ಕಾಡಿದ್ದಂತೂ ನಿಜ. ಆ ಸನ್ನಿವೇಶದ ಎಳೆಗಳು ಸಹ ಈ ಕಾದಂಬರಿಯಲ್ಲಿ ಬಂದಿವೆ" ಎಂದು ಕಾದಂಬರಿಯ ಹಿನ್ನೆಲೆಯನ್ನೂ, ಉದ್ದೇಶವನ್ನೂ ಹೇಳಿದ್ದಾರೆ.

ಈ ಕಾದಂಬರಿಯ ಬಗ್ಗೆ ಅಲ್ಲಲ್ಲಿ ಇಂತಹ ತುಣುಕುಗಳನ್ನು ಓದುತ್ತಿರುವಾಗಲೇ ಈ ಪುಸ್ತಕವನ್ನು ಓದುವ ಕುತೂಹಲ ಗರಿಗೆದರಿತ್ತು. ಅಂತೂ ಪುಸ್ತಕ ಕೈಸೇರಿದ ಮೇಲೆ ಕೈಗೆ ತೆಗೆದುಕೊಂಡಿದ್ದಷ್ಟೇ ಗೊತ್ತು. ಪೂರ್ತಿಯಾಗಿ ಓದಿ ಮುಗಿಸುವ ತನಕ ಪುಸ್ತಕವನ್ನು ಕೆಳಗಿಡಲು ಸಾಧ್ಯವಾಗಲೇ ಇಲ್ಲ. ಇತ್ತೀಚಿನ ದಿನಗಳಲ್ಲಿ ನಾನು ಓದಿದ ಒಂದು ಮೌಲಿಕವಾದ ಕೃತಿ ಇದು. ಇದರ ಓದಿನ ಯಾನದ ಅನುಭವಗಳನ್ನು ಇಲ್ಲಿ ಹಂಚಿಕೊಂಡಿದ್ದೇನೆ. ಇಲ್ಲಿನ ವಸ್ತುವಿನ ವಿಭಿನ್ನತೆಯಷ್ಟೇ ಅಲ್ಲದೆ ನಿರೂಪಣೆಯೂ ಸರಳವಾಗಿದ್ದು ತನ್ನ ಪ್ರಾಸಾದಿಕ ಗುಣದಿಂದ ಓದುಗನನ್ನು ಹಿಡಿದಿಡುತ್ತದೆ.

ಅಸಲಿಗೆ "ಕಾಲಕೋಶ" ಎಂದರೇನು? ಅದು ತಳವಿಲ್ಲದ ಅಥವಾ ತಳವನ್ನು ಕಂಡುಕೊಳ್ಳಲು ಸಾಧ್ಯವಾಗದ ಒಂದು ಭತ್ತದ ಪಣತದಂತಹುದು. ಅದರಲ್ಲಿ ಯಾವಯಾವುದೋ ಕಾಲದ ಘಟನೆಗಳು, ಸ್ಥಿತ್ಯಂತರಗಳು ಒಂದು ನೆನಪಿನ ದಾಖಲೆಯಾಗಿ ನೆಲೆಗೊಂಡಿರುತ್ತವೆ. ಅದರಲ್ಲಿ ನಮ್ಮ ಚಿಂತನೆಯ ಪಾತಾಳಗರಡಿಯನ್ನು ಬಳಸಿ ಗತ ಇತಿಹಾಸದ ಎಳೆಗಳನ್ನು ಗುರುತಿಸಬಹುದು. ವರ್ತಮಾನಕ್ಕೆ ದಾರಿದೀಪವಾಗಿಸಿಕೊಳ್ಳಬಹುದು. ವೀರಪ್ಪನ್‌ನಿಂದಾದ ಅಮಾಯಕರ ಮೇಲಿನ ದೌರ್ಜನ್ಯ, ದೇಶ ವಿಭಜನೆ, ಮಹಾತ್ಮಾ ಗಾಂಧೀಜಿ ಮತ್ತು ಇಂದಿರಾ ಗಾಂಧಿಯವರ ಹತ್ಯೆಗಳು ದೇಶದಲ್ಲಿ ಸೃಷ್ಟಿಸಿದ ತಲ್ಲಣಗಳು, ಅವು ಅಮಾಯಕರ ಜೀವನದಲ್ಲಿ ಸರಿಪಡಿಸಲು ಸಾಧ್ಯವೇ ಆಗದಂತಹ ದುರಂತಗಳನ್ನು ಲೇಖಕರು ಕಾಲಕೋಶದಿಂದ ಸೆಳೆದುಕೊಂಡು ಅಂತಹ ಯಾವುದೇ ಹತಾಶ ಸ್ಥಿತಿಯನ್ನು ಅನುಭವಿಸಿಲ್ಲದ ನಮ್ಮಲ್ಲಿ ಮುಸುಕಿಕೊಂಡಿರುವ ಅವಜ್ಞೆಯ ಪರದೆಯನ್ನು ಸರಿಸಿ ಸವಾಲೆಸೆಯುತ್ತಾರೆ.

ಇಂದಿರಾಗಾಂಧಿಯವರ ಕಾಲದಲ್ಲಿ 1972ರ ಸ್ವಾತಂತ್ರ್ಯ ದಿನದಂದು ನವದೆಹಲಿಯ ಭೂಗರ್ಭದಲ್ಲಿ ಕಬ್ಬಿಣದ ಕೋಶದಲ್ಲಿ ಹುದುಗಿಸಿದ ಕಾಲಕೋಶದಲ್ಲಿ ಸಂಪೂರ್ಣ ಭಾರತದ ಇತಿಹಾಸವನ್ನು ವಸ್ತುನಿಷ್ಠವಾಗಿ ದಾಖಲಿಸಲಾಗಿದೆಯೇ ಎನ್ನುವ ಪ್ರಶ್ನೆ ನಮ್ಮ ಮುಂದಿದೆ. ಎಷ್ಟೋ ಶತಮಾನಗಳ ನಂತರ ಅಂದಿನ ಜನಾಂಗ ಅದನ್ನು ಓದುವ ಸಂದರ್ಭ ಬಂದರೆ ಅವರಿಗೆ ನೈಜ ಇತಿಹಾಸವನ್ನು ಅದು ತಿಳಿಸುವುದೇ? ಇಂತಹ ಕಾಲಕೋಶವು ಯಾವುದೇ ಪಕ್ಷಕ್ಕೆ ಸೇರದೆ, ನಮ್ಮ ನೆಲದ ಪ್ರಜ್ಞೆಯನ್ನು ಹೊಂದಿದವರು ಸಾಕ್ಷೀಪ್ರಜ್ಞೆಯಿಂದ ರಚಿಸಬೇಕಾದದ್ದಲ್ಲವೇ?

ಅತಿ ಪುರಾತನವಾದ ನಮ್ಮ ದೇಶದ ನೈಜ ಇತಿಹಾಸವು ಎಲ್ಲೂ ಸ್ಪಷ್ಟವಾಗಿ ದಾಖಲಾಗಿಲ್ಲ. ಕೆಲವು ಶಾಸನಗಳು, ಪ್ರವಾಸಿಗರು ಬರೆದ ಗ್ರಂಥಗಳು, ಹಲವು ಕವಿಗಳ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ಸಂದರ್ಭಗಳು, ಹಲವು ಯುದ್ಧಗಳ ಆಧಾರದಲ್ಲಿ ಅವರವರ ದೃಷ್ಟಿಕೋನದಲ್ಲಿ ಬರೆದ ಇತಿಹಾಸವಾಗಿದೆ. ಅಂದು ಇಂದಿನಂತೆ ದಾಖಲಿಸುವ ವಿಧಾನವೇ ಇರಲಿಲ್ಲವೆನ್ನುವುದು ಹಾಗೂ ಎಂದಿನಿಂದಲೋ ಯಾವು ಯಾವುದೋ ಕಾರಣಗಳಿಗಾಗಿ ವಲಸೆಗಳಾಗಿರುವುದಂತೂ ನಿಜ. ಅಂದಿನ ವಲಸೆಗಳಿಗೆ ಕಾರಣಗಳೇನು, ವಲಸಿಗರು ಅನುಭವಿಸಿದ ವ್ಯಥೆಗಳ ಕತೆಗಳೇನು ಎಂಬುದು ಎಲ್ಲೂ ದಾಖಲಾಗಿಲ್ಲ. ಇದನ್ನೇಕೆ ಇಲ್ಲಿ ಹೇಳುತ್ತಿದ್ದೇನೆಂದರೆ ಇದುವರೆಗೂ ಕೃಷ್ಣದೇವರಾಯನ ಕಾಲವನ್ನು ಸುವರ್ಣಯುಗವೆಂದೇ ನಮ್ಮ ಇತಿಹಾಸಗಳು ಬಿಂಬಿಸಿವೆ. ಆದರೆ ಇತ್ತೀಚೆಗೆ ಬಂದ ವಸುಧೇಂದ್ರರ 'ತೇಜೋ ತುಂಗಭದ್ರಾ' ಅಂದಿನ ಜನಸಾಮಾನ್ಯರ ಜನಜೀವನವನ್ನು ಚಿತ್ರಿಸಿರುವುದನ್ನು ನೋಡಿದಾಗ, "ಇದನ್ನು ಸುವರ್ಣಯುಗವೆಂದು ನಂಬಿದ್ದೆವೇ?" ಎನ್ನಿಸುತ್ತದೆ. ಕೃಷ್ಣಮೂರ್ತಿ ಹನೂರರ ಟಿಪ್ಪೂ ಸುಲ್ತಾನನ ಕಾಲದ ಜನಜೀವನವನ್ನು ಜನಪದರ, ಅವರ ಹಾಡುಗಳ ಬೆಂಬತ್ತಿ ಚಿತ್ರಿಸಿರುವ "ಅಜ್ಞಾತನೊಬ್ಬನ ಆತ್ಮಚರಿತ್ರೆ" ಮನವನ್ನು ಹಿಂಡಿಬಿಡುತ್ತದೆ. ಈ ಹಿನ್ನೆಲೆಯಲ್ಲಿ ಶಶಿಧರ ಹಾಲಾಡಿಯವರ ಕಾಲಕೋಶ ನಿಜವಾದ ಒಂದು ಕಾಲಕೋಶದ ಉದ್ದೇಶವನ್ನು ಪೂರೈಸುತ್ತದೆ ಎಂದೇ ಹೇಳಬಹುದು.

ಕಾದಂಬರಿಯ ನಿರೂಪಣೆಯ ಕಾಲ 1984ನೆಯ ಇಸವಿ. ಕಾದಂಬರಿಯ ವಿನ್ಯಾಸ – ಒಬ್ಬ ಬ್ಯಾಂಕ್ ನೌಕರ ಇನ್ನೂ ಪರಿವೀಕ್ಷಣಾ ಅವಧಿಯಲ್ಲಿರುವಾಗಲೇ ಮೂರು ವಾರಗಳ ರಜೆಯನ್ನು ತೆಗೆದುಕೊಂಡ ಕಾರಣದಿಂದ ದೂರದ ದೆಹಲಿಗೆ ವರ್ಗವಾಗಿ ಹೋಗಬೇಕಾಗುತ್ತದೆ. ಅಲ್ಲಿ ಮನೆಯನ್ನು ಹುಡುಕುತ್ತಿರುವಾಗಲೇ ಸಹೋದ್ಯೋಗಿ ಆಪ್ಟೆಯವರು ಸಾಕಷ್ಟು ದೂರದ ತಮ್ಮ ಮನೆಯ ಸನಿಹದ ಕೋಣೆಯೊಂದನ್ನು ಹುಡುಕಿಕೊಟ್ಟರೂ ದೂರದ ಕಾರಣದಿಂದ ಅಲ್ಲಿಗೆ ಹೋಗಲು ಒಪ್ಪುವುದಿಲ್ಲ. ಅದೇ ಬ್ಯಾಂಕಿನ ಗ್ರಾಹಕನಾದ

ಅಮರ್ ಸಿಂಗ್ ತನ್ನ ಮನೆಯ ಮೇಲಿನ ಕೋಣೆಯನ್ನು ಬಾಡಿಗೆಗೆ ತೋರುವಾಗ ಸ್ವಲ್ಪ ಜಿಜ್ಞಾಸೆಯಿಂದಲೇ ಒಪ್ಪಿಕೊಳ್ಳುತ್ತಾನೆ. ಇಬ್ಬರೂ ಅವನಿಗೆ ಬಹು ಬೇಗ ಆತ್ಮೀಯರಾಗುತ್ತಾರೆ.

ಅಮರ್ ಸಿಂಗ್ ಕುಟುಂಬ ಮತ್ತು ಆಪ್ಟೆಯವರ ಕುಟುಂಬದ ಜೊತೆಗಿನ ಮಾತುಕತೆಗಳ ಮೂಲಕ ಕತೆಯನ್ನು ನಿರೂಪಿಸುತ್ತಾ ಹೋಗುವ ನಿರೂಪಕ ಎಲ್ಲೂ ತನ್ನ ಹೆಸರನ್ನು ಹೇಳುವುದಿಲ್ಲ. ತಾನು ನಿರ್ಲಿಪ್ತನಾಗಿದ್ದು ಬೇರೆಯವರಿಂದ ಕತೆಯನ್ನು ಹೇಳಿಸುವ ಈ ತಂತ್ರ ಸೊಗಸಾಗಿದೆ. ಎಲ್ಲೂ ಅವನು 'ಜಡ್ಜ್‌ಮೆಂಟಲ್' ಆಗುವುದಿಲ್ಲ ಎನ್ನುವುದು ಕಾದಂಬರಿಯ ಉತ್ತಮ ಅಂಶ. ಕಾಲಕೋಶ ಮುಖ್ಯವಾಗಿ ಗುರುತಿಸ ಹೊರಟಿರುವುದು ಹಲವು ಸಾಮಾಜಿಕ, ರಾಜಕೀಯ ವಿಪ್ಲವಗಳಿಂದ ಜನರು ತಮ್ಮ ಮೂಲ ಬೇರುಗಳಿದ್ದ ಸ್ಥಳಗಳಿಂದ ಗುಳೆಯೆತ್ತಿ, ಬೇರೆ ದಾರಿಯಿಲ್ಲದೆ, ಕ್ಷೇಮವೇನೋ ಎನಿಸಬಹುದಾದ ಇನ್ನೊಂದು ಜಾಗಕ್ಕೆ ವಲಸೆ ಹೋಗುವಾಗಿನ ಸ್ಥಿತಿಗತಿಗಳು, ಅವರು ಎದುರಿಸುವ ಮಾನಸಿಕ, ಆರ್ಥಿಕ ಮತ್ತು ದೈಹಿಕ ನೋವುಗಳು ಹಾಗೂ ಮುಂದಿನ ಅವರ ಜೀವನದುದ್ದಕ್ಕೂ ಉಳಿದೇಬಿಡುವ ಹಪಾಹಪಿ.

ಕಾದಂಬರಿಯಲ್ಲಿ ಒಟ್ಟು ಮೂರು ವಲಸೆಗಳ ಚಿತ್ರಣ ಬರುತ್ತದೆ. ಕಾಡುಗಳ್ಳ ವೀರಪ್ಪನ್‌ನಂತಹವನಿಂದಾಗಿ ಕಾದಂಬರಿಯ ನಿರೂಪಕನ ಕುಟುಂಬದ ಹಿರಿಯ ವ್ಯಕ್ತಿ ಸಾವಿಗೀಡಾಗುತ್ತಾನೆ. ತಾತನ ಕಾಲದಿಂದಲೂ ಗೌಡಹಳ್ಳಿಯಲ್ಲಿ ಕೃಷಿಯಲ್ಲಿ ತೊಡಗಿಕೊಂಡಿದ್ದ ಕುಟುಂಬ, ಬೆಲೆಬಾಳುವ ಆಸ್ತಿಯನ್ನು ಮೂರುಕಾಸಿಗೆಂಬಂತೆ ಮಾರಿ ಬೆಂಗಳೂರಿಗೆ ವಲಸೆ ಬರುವ ಅನಿವಾರ್ಯ ಸಂದರ್ಭವೊದಗುತ್ತದೆ. ಕುಟುಂಬವೆಲ್ಲಾ ಸ್ಥಳಾಂತರವಾಗಿ ಬಂದ ತಕ್ಷಣವೇ ಕಥಾನಾಯಕನ ವರ್ಗವಾಗುವುದರಿಂದ ಆ ಕುಟುಂಬವೂ ವಲಸೆಯ ಕುದಿಯನ್ನು ಅನುಭವಿಸಬೇಕಾಗುತ್ತದೆ. ಜೊತೆಗೆ ಕಥಾನಾಯಕನೂ ಕುಟುಂಬದಿಂದ ಬೇರಾಗಿ ವಲಸೆ ಹೋದಂತೆಯೇ ಆಗುತ್ತದೆ. ಅಂತೆಯೇ ದೇಶ ವಿಭಜನೆಯಿಂದಾಗಿ ಲಾಹೋರಿನಿಂದ ದೆಹಲಿಗೆ ಬಲವಂತವಾಗಿ, ಕ್ರೌರ್ಯದಿಂದ ದಬ್ಬಲ್ಪಟ್ಟ ಸಿಖ್ ಜನಾಂಗದ ದಾರುಣ ಚಿತ್ರಣ ಅಮರ್ ಸಿಂಗ್ ಮೂಲಕ ಅನಾವರಣಗೊಳ್ಳುತ್ತದೆ. ಹಾಗೆಯೇ ಕುಟುಂಬದ ಹೆಸರಿನಿಂದಾಗಿ ಅಕ್ಕಪಕ್ಕದ ಊರಿನವರಿಂದ ದೌರ್ಜನ್ಯಕ್ಕೊಳಗಾಗಿ ಸೋನ್‌ವಾಡೆಯಿಂದ ದೆಹಲಿಗೆ ಬಂದು ಅನಿವಾರ್ಯವಾಗಿ ಕುಟುಂಬದ ಹೆಸರನ್ನು ಬದಲಿಸಿಕೊಂಡು ಬದುಕಬೇಕಾಗಿ ಬಂದ ಪರಿಸ್ಥಿತಿ ಆಪ್ಟೆಯವರಿಂದ ನಿರೂಪಿತವಾಗುತ್ತದೆ. ಈ ಮೂರೂ ಘಟನೆಗಳಲ್ಲೂ ಆ ಕುಟುಂಬದವರ ಪಾತ್ರವೇನೂ ಇರುವುದಿಲ್ಲ. ಅವರೆಲ್ಲರೂ ತಮ್ಮ ನೆಲವನ್ನು, ಪರಿಸರವನ್ನು ಅತ್ಯಂತ ಪ್ರೀತಿಯಿಂದ ಕಂಡವರು. ಅಲ್ಲಿಂದ ಬೇರೆಲ್ಲಿಯಾದರೂ ಹೋಗಿ ನೆಲೆಸುವ ವಿಚಾರವನ್ನು ಕನಸುಮನಸಿನಲ್ಲೂ ಕಂಡವರಲ್ಲ. ಅಂಥವರು ಬೇರೆಯದೇ ಪ್ರದೇಶಕ್ಕೆ ಬಂದು ಅನಿವಾರ್ಯವಾಗಿ 'ನಿಮ್ಮೊಡನಿದ್ದೂ ನಿಮ್ಮಂತಾಗದೆ ' ಎನ್ನುವಂತೆ ಒಂದು ಅಭದ್ರತೆಯ ಭಾವದಿಂದ ನರಳುತ್ತಲೇ ಬದುಕು ದೂಡಬೇಕಾದ ಸ್ಥಿತಿಯಲ್ಲಿರುವವರು.

ಅದರಲ್ಲೂ ಲಾಹೋರಿನಿಂದ ದೆಹಲಿಯತ್ತ ಓಡಿಬಂದ ಅಮರ್ ಸಿಂಗ್ ಸ್ಥಿತಿ ಶೋಚನೀಯವಾದುದು. ತಾವಿರುವ ಜಾಗ ಭಾರತವಾದರೂ, ಪಾಕಿಸ್ತಾನವೇ ಆದರೂ, ಲಾಹೋರಿನ ನೆಲ ನಮ್ಮದು, ಸಿಖ್ ಜನಾಂಗಕ್ಕೆ ಎರಡೂ ಮತೀಯರ ಬಗ್ಗೆ ಯಾವ ಭಿನ್ನತೆಯೂ ಇಲ್ಲವೆಂದು ನಂಬಿ, ವ್ಯಾಪಾರ ವಹಿವಾಟುಗಳನ್ನಿಟ್ಟುಕೊಂಡು ತಲೆತಲಾಂತರದಿಂದ ಲಾಹೋರಿನಲ್ಲಿ ಬದುಕುತ್ತಿದ್ದವರು. ನಿರ್ಗತಿಕರಂತೆ ಅವರನ್ನು ಅಲ್ಲಿಂದ ಹೆದರಿಸಿ, ಬೆದರಿಸಿ ಬಲವಂತವಾಗಿ ಓಡಿಸಿ, ಹವೇಲಿಯಲ್ಲಿ ಬದುಕುತ್ತಿದ್ದವರನ್ನು ದೆಹಲಿಯ ತ್ರಿಲೋಕ್‌ಪುರಿಯಲ್ಲಿನ ಸುಟ್ಟ ಬಾಗಿಲಿನ ಮನೆಗೆ ಸಿರಿಸಂಪತ್ತುಗಳೊಂದಿಗೆ ಮಗನನ್ನೂ ಕಳೆದುಕೊಂಡು ಬಂದು ಸೇರಿಸಿದ ಪರಿಸ್ಥಿತಿ ಎಂಥವರ ಹೃದಯವನ್ನೂ ದ್ರವಿಸುವಂತಹದು. ಮೈಲುಗಳಷ್ಟು ದೂರದ ವಲಸಿಗರ ಗುಂಪು ಪಾಕಿಸ್ತಾನದಿಂದ ಭಾರತದೆಡೆಗೆ ಬರುವಾಗ ದಾರಿಯಲ್ಲೇ ಕೆಲವರು ದಾಳಿಯಿಂದ, ಹಸಿವಿನಿಂದ ಪ್ರಾಣ ಕಳೆದುಕೊಳ್ಳುವುದು, ಹೆಣ್ಣುಮಕ್ಕಳ

ಅಪಹರಣವಾಗುವುದು, ಹಾಹಾಕಾರಗಳು, ಕಡೆಗೂ ಗಮ್ಯವನ್ನು ತಲುಪಿದಾಗ ದುಃಖದಲ್ಲಿಯೂ ಪ್ರಾಣವನ್ನು ಉಳಿಸಿಕೊಂಡ ಮನಃಸ್ಥಿತಿಯ ಚಿತ್ರಣ ಎಲ್ಲಿಯೂ ಅತಿರಂಜಕತೆಯಿಂದ ಕೂಡದೆ ವಸ್ತುನಿಷ್ಠವಾಗಿ ಹೇಳಿದರೂ ಆ ಮನಕಲಕಿಬಿಡುವ ಭಾವವನ್ನು ಓದುಗನಿಗೆ ದಾಟಿಸುವಲ್ಲಿ ಸಶಕ್ತವಾಗಿವೆ.

ಮುಂದೆಯೂ 'ಆಪರೇಶನ್ ಬ್ಲೂ ಸ್ಟಾರ್'ನ ಮಾರಣ ಹೋಮ, ಇಂದಿರಾ ಗಾಂಧಿಯ ಹತ್ಯೆ; ಹೀಗೆ ಸೇಡು, ಪ್ರತಿ ಸೇಡು ಎರಡರಲ್ಲಿಯೂ ಸಿಖ್ ಜನಾಂಗದವರೇ ಬಲಿಪಶುವಾಗಿದ್ದು ಚರಿತ್ರೆಯ ಒಂದು ದುರಂತ ಅಧ್ಯಾಯ. ಆ ಸಂದರ್ಭದಲ್ಲಿ ಮತ್ತೆ ಸಿಖ್ಖರು ಹಲ್ಲೆಗೊಳಗಾಗಿ, ಎಷ್ಟೋ ಜನರು ಮರಣವಪ್ಪಿದಾಗ ಅಮರ್ ಸಿಂಗ್ ಹೇಳುವ "ಲಾಹೋರಿನಿಂದ ಬರುವಾಗ ನಮಗೆ ಭಾರತವಿತ್ತು. ಈಗ ಎಲ್ಲಿಗೆ ಹೋಗುವುದು? ನಮಗೆ ನಮ್ಮ ದೇಶವೇ ಇಲ್ಲ" ಎನ್ನುವ ಮಾತು ಸಿಖ್ಖರ ಅತಂತ್ರ, ಅಸಹಾಯಕ ಸ್ಥಿತಿಯನ್ನು ತೋರುವ ಮರ್ಮಭೇದಕ ನುಡಿಯಾಗಿದೆ. ಭಾರತವಾಗಲೀ, ಪಾಕಿಸ್ತಾನವಾಗಲೀ ಅವರಿಗೆ ಮಾತೃಭೂಮಿಯ ಅಸ್ಮಿತೆಯನ್ನು ನೀಡಲಿಲ್ಲವೇ ಎಂದು ಓದುಗನು ಕೇಳಿಕೊಳ್ಳುವಂತಾಗುತ್ತದೆ. ಮುಂದೆ ಇಂದಿರಾ ಗಾಂಧಿಯ ಹತ್ಯೆಯಾದಾಗ ಅದನ್ನೇ ನೆಪವಾಗಿಸಿಕೊಂಡು ರಾಜಕೀಯ ಧುರೀಣರು, ದೆಹಲಿಯ ಮೂಲ ನಿವಾಸಿಗಳು ಸಿಖ್ಖರ ಮೇಲೆ ಮೃಗೀಯವಾಗಿ ತೀರಿಸಿಕೊಂಡ ಸೇಡಿನ ಬಗೆ 'ಇವರು ನಮ್ಮ ಜನರೇ?', 'ಇದು ನಮ್ಮ ಸಂಸ್ಕೃತಿಯೇ?' ಎಂದು ನಮ್ಮ ಪ್ರಜ್ಞೆಯನ್ನು ಪ್ರಶ್ನಿಸುತ್ತದೆ.


ಯಾವುದೇ ಸಂಬಂಧವಿಲ್ಲದಿದ್ದರೂ 'ಗೋಡ್ಸೆ' ಎನ್ನುವ ಕುಟುಂಬದ ಹೆಸರಿನಿಂದಾಗಿಯೇ ಮಹಾತ್ಮಾ ಗಾಂಧಿಯವರ ಹತ್ಯೆಯ ನಂತರ ಅಲ್ಲಿ ನಡೆಯುವ ಗಲಭೆ, ದೊಂಬಿ, ಚಿತ್ರಹಿಂಸೆಗಳಿಂದ ಆಪ್ಟೆ ಕುಟುಂಬದವರು ಸೋನ್‌ವಾಡೆಯನ್ನು ಬಿಟ್ಟು ಹೆಸರನ್ನು ಬದಲಾಯಿಸಿಕೊಂಡು ದೆಹಲಿಗೆ ಓಡಿಬರುವ ಪರಿಸ್ಥಿತಿ ಎದುರಾಗುತ್ತದೆ. ಹಾಗೆ ಬರುವಾಗ ಅಣ್ಣನನ್ನು ಕಳೆದುಕೊಳ್ಳುವ ಕಮಲಾ ಮೂವತ್ತು ವರ್ಷಗಳ ನಂತರವೂ ಎದುರು ಕಂಡವರಲ್ಲೆಲ್ಲಾ ಅಣ್ಣನ ಚಹರೆಯನ್ನು ಅರಸುವುದು; ಅಂತೆಯೇ ಮಗನನ್ನು ಕಳೆದುಕೊಂಡ ರಜನಿ ಸಿಂಗ್ ಕಂಡ ಕಂಡ ಅಪರಿಚಿತರಲ್ಲಿ ಮಗನನ್ನು ಹುಡುಕುವುದು, ಕಡೆಗೆ ಒಬ್ಬ ಪೋಲೀಸ್ ಯುವಕನಲ್ಲಿ ತನ್ನ ಮಗನನ್ನು ಕಂಡುಕೊಂಡು ಸಂತಸ ಪಡುವುದು ತಮ್ಮ ಮೂಲದ ಸಂಬಂಧಗಳು ಮರವೆಯಾಗದೆ ಉಳಿದೇಬಿಡುವ ರೂಪಕಚಿತ್ರವಾಗಿ ಕಾಣುತ್ತದೆ.

ವಲಸೆಗಳ ಹಿನ್ನೆಲೆಯಲ್ಲಿ ಮನುಷ್ಯನ ದುರಾಸೆ, ಮತೀಯ ದ್ವೇಷ, ಪ್ರೀತಿ, ವಿಶ್ವಾಸ, ದ್ರೋಹ, ರಾಜಕೀಯ, ಎಲ್ಲವನ್ನೂ ಅತ್ಯಂತ ಸಹಜವಾಗಿ ಈ ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಅಂತೆಯೇ ಬ್ಯಾಂಕಿನ ಸಹೋದ್ಯೋಗಿಗಳು, ಅವರ ನಿರ್ಲಿಪ್ತ ವರ್ತನೆ, ಬ್ಯಾಂಕಿನ ದಿನಚರಿ, ವಾಸವಾಗಿದ್ದ ತ್ರಿಲೋಕ್‌ಪುರಿಯ ಅಮರ್ ಸಿಂಗ್ ಮನೆಯಿದ್ದ ಸಿಖ್ ವಲಸಿಗರ ಬಡಾವಣೆಯ ವಾತಾವರಣ, ಆಪ್ಟೆಯವರ ಮನೆಯ ಪರಿಸರ ಎಲ್ಲವೂ ಕಾದಂಬರಿಯಲ್ಲಿ ಹಾಸುಹೊಕ್ಕಾಗಿ ಸಾಗಿವೆ. ಇಂತಹ ಸಂಘರ್ಷಗಳ ನಡುವೆಯೇ ಅತ್ಯಂತ ಸಹಜವಾಗಿ ನಿರೂಪಕನ ಮತ್ತು ಚಂದ್ರಿಕಾಳ ನಡುವೆ ಪ್ರೇಮಾಂಕುರವಾಗುವ ಘಟನೆಗಳೂ ನವಿರಾಗಿ ಸಾಗುತ್ತವೆ. ಬೇಸಿಗೆಯ ನಂತರದ ಮೊದಲ ಮಳೆಯಲ್ಲಿ ನೆನೆಯುತ್ತಾ ಅವಳೊಂದಿಗೆ ಹಾಡುತ್ತಾ ನೃತ್ಯಕ್ಕೆ ಹೆಜ್ಜೆಹಾಕುವ ದೃಶ್ಯ ಓದುಗನ ಮನದಲ್ಲಿ ಒಂದು ಹಿತವಾದ ಭಾವವನ್ನು ಮೂಡಿಸುತ್ತದೆ.

ಕಡೆಯಲ್ಲೊಬ್ಬ ಕಾಲಜ್ಞಾನಿ ಇಂಥ ವಿಪ್ಲವಗಳು ಇಲ್ಲಿಗೇ ಮುಗಿಯಲಿಲ್ಲ ಎನ್ನುತ್ತಾ ಮುಂದೆ ಗುಜರಾತಿನಲ್ಲಿ ನಡೆಯುವ ಗೋದ್ರಾ ಹತ್ಯಾಕಾಂಡ, ಅಯೋಧ್ಯೆಯಲ್ಲಿ ನಡೆಯುವ ರಾಮ ಮಂದಿರ ಘರ್ಷಣೆ ಹಾಗೂ

ಮುಂದೆ ನಡೆಯಬಹುದಾದ ಎಷ್ಟೆಷ್ಟೋ ಸಂಗತಿಗಳ ಬಗ್ಗೆ ಮುಂಗಾಣ್ಕೆಯನ್ನು ಹೇಳುತ್ತಾ ಹೋಗುವುದು ಇಂಥ ಸ್ಥಿತ್ಯಂತರಗಳು ಆಗಾಗ ನಡೆಯುವಂತದ್ದೇ ಎನ್ನುವ ಅಭಿಪ್ರಾಯವನ್ನು ಹೇಳಿದರೆ ನಿರೂಪಕ ಇಂದಿನ ಬಗ್ಗೆ ಮಾತ್ರಾ ಯೋಚಿಸಿ ಅದನ್ನು ಪ್ರಿಯತಮೆಯಲ್ಲಿ ಹಂಚಿಕೊಳ್ಳುವುದು ಒಂದು ಸಕಾರಾತ್ಮಕ ಧೋರಣೆಯಾಗಿ ಕಾಣುತ್ತದೆ. ಕತೆಯನ್ನು ಎಲ್ಲಿಯೂ ಅನಾವಶ್ಯಕವಾಗಿ ಎಳೆದಂತೆ ತೋರುವುದಿಲ್ಲ.

ತಮ್ಮ ಮೊದಲ ಕಾದಂಬರಿಯಲ್ಲೇ ಭರವಸೆ ಹುಟ್ಟಿಸಿರುವ ಶ್ರೀ ಶಶಿಧರ ಹಾಲಾಡಿಯವರಿಂದ ಓದುಗರ ನಿರೀಕ್ಷೆ ಹೆಚ್ಚಾಗಿದೆ. ಇಂತಹ ಹಲವು ನೂತನ ಪ್ರಯೋಗಗಳು ಅವರಿಂದ ಬರಲಿ. 'ಕಾದಂಬರಿ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ' ಎನ್ನುವುದು ಈವರೆಗೆ ನಾನು ಕೇಳಿರುವ ಹಲವರ ಅಭಿಪ್ರಾಯ; "ಆದರೆ ಪ್ರತಿಯೊಬ್ಬ ಸಹೃದಯನೂ ಓದಲೇಬೇಕಾದ ಕಾದಂಬರಿ" ಎನ್ನುವುದು ನನ್ನ ಅಭಿಪ್ರಾಯ. ಇಂತಹ ಒಂದು ಒಳ್ಳೆಯ ಕಾದಂಬರಿಯನ್ನು ಕನ್ನಡದ ಓದುಗರಿಗೆ ಕೊಟ್ಟ ಶಶಿಧರ ಹಾಲಾಯವರಿಗೆ ಹೃತ್ಪೂರ್ವಕ ಅಭಿನಂದನೆಗಳು ಮತ್ತು ಧನ್ಯವಾದಗಳು.



"ಅಬ್ಬೆ" ಎನ್ನುವ ಪರಿಸರದ ಕತೆ

ಶಶಿಧರ ಹಾಲಾಡಿಯವರ ಎರಡು ಮುಖ್ಯ ಆಸಕ್ತಿಗಳೆಂದರೆ ಪ್ರಚಲಿತ ವಿದ್ಯಮಾನಗಳು ಹಾಗೂ ಪರಿಸರ. ಮೊದಲ ಕಾದಂಬರಿಗೆ ಒಂದು ಮಟ್ಟಿಗೆ ಐತಿಹಾಸಿಕವಾದರೂ, ಪ್ರಚಲಿತ ವಿದ್ಯಮಾನವೆನ್ನಬಹುದಾದ ವಲಸೆಯ ವಸ್ತುವನ್ನು ಆರಿಸಿಕೊಂಡಿದ್ದರೆ, ಎರಡನೆಯ ಕಾದಂಬರಿ ಅವರ ನೆಚ್ಚಿನ ಪರಿಸರದ ಆವರಣದಲ್ಲಿದೆ. ಕಾದಂಬರಿಯ ಅರಿಕೆಯಲ್ಲಿ "ತುಸು ಆತ್ಮಕಥಾನಕ ಸ್ವರೂಪದ ಕಥನವೊಂದನ್ನು ಬರೆಯುವ ಒತ್ತಡ ಮನಸ್ಸಿನಲ್ಲಿ ಮೂಡಿಬಂದು ಇನ್ನು ತಡಮಾಡಲಾಗದು ಎಂಬ ಸ್ಥಿತಿಯನ್ನು ನಿರ್ಮಿಸಿದ್ದರಿಂದ ಈ ಕಾದಂಬರಿ ರೂಪುಗೊಂಡಿದೆ. ಇಲ್ಲಿನ ನಿರೂಪಣೆಯು ಉತ್ತಮ ಪುರುಷದಲ್ಲಿದ್ದರೂ, ಇಲ್ಲಿನ ಕಥಾಹಂದರ ಸಂಪೂರ್ಣ ಕಾಲ್ಪನಿಕ." ಎನ್ನುವ ಡಿಸ್‌ಕ್ಲೇಮರ್ ನೀಡಿದ್ದಾರೆ.

"ಅಬ್ಬೆ" 2022ರ ಕೊನೆಯಲ್ಲಿ ಬಿಡುಗಡೆಯಾದ ಶ್ರೀಯುತ ಶಶಿಧರ ಹಾಲಾಡಿಯವರ ಎರಡನೆಯ ಕಾದಂಬರಿ. ಕಾದಂಬರಿಯ ಹೆಸರನ್ನು ನೋಡಿದ ತಕ್ಷಣ ಇದೊಂದು ತಾಯಿಯ ಬಗೆಗಿನ ಸಾಂಸಾರಿಕ ಕತೆಯಿರಬಹುದು ಎನ್ನುವ ಕಲ್ಪನೆ ಬರುತ್ತದೆ. ಆದರೆ ಈ ಕಾದಂಬರಿಯ 'ಅಬ್ಬೆ' ಯಾರೂ ನೋಡಿಲ್ಲದ, ಆದರೆ ಇದ್ದೇ ಇದೆ ಎಂದು ಜನರು ನಂಬುವ ಒಂದು ಪ್ರಕಾರದ ಜೇಡದ ದಂತಕತೆ. ಅದೆಷ್ಟು ವಿಷಮಯವೆಂದರೆ "ಅಬ್ಬೆ ಕಚ್ಚಿದರೆ ಹೆಬ್ಬಾಗಿಲಿಗೆ ಬರುವಷ್ಟು ಸಮಯವಿಲ್ಲ" ಎನ್ನುವಷ್ಟು. ಈ ಮಾತು ಕಾದಂಬರಿಯುದ್ದಕ್ಕೂ ಅಲ್ಲಲ್ಲಿ ಬರುತ್ತದೆ. ಆದರೆ ಯಾವುದೇ ವ್ಯಕ್ತಿಯನ್ನು ಕಚ್ಚಿದ ಜೇಡವನ್ನು ಯಾರೂ ಕಂಡಿಲ್ಲ. ಸತ್ತ ಜಾಗದಲ್ಲಿ ಹರಿದಾಡುತ್ತಿದ್ದ ಯಾವುದೋ ಜೇಡವನ್ನು ಕಂಡು ಚಚ್ಚಿ ಕೊಂದಿದ್ದಾರೆ. ಹಾಗಾಗಿ ಜೇಡನ ಬಗ್ಗೆ ಒಬ್ಬೊಬ್ಬರದು ಒಂದೊಂದು ರೀತಿಯ ವರ್ಣನೆ. ಕಾಡು, ಹೊಲ, ತೋಟಗಳಲ್ಲಿ ಆಕಸ್ಮಿಕ ಸಾವಾದಾಗ 'ಅಬ್ಬೆ ಕಚ್ಚಿ ಸತ್ತರು' ಎನ್ನುವುದು ಒಂದು ನಿರ್ಧಾರಿತ ತೀರ್ಮಾನವಷ್ಟೇ.

ಇಡೀ ಕತೆ ಕಲ್ಕೆರೆ ಎನ್ನುವ ಅರಸೀಕೆರೆ ತಾಲ್ಲೂಕಿನ ಒಂದು ಪುಟ್ಟ ಕಾಲ್ಪನಿಕ ಊರಿನಲ್ಲಿ ನಡೆಯುತ್ತದೆ. ಮೂರ್ನಾಲ್ಕು ಬೀದಿ, ಒಂದು ಕೆರೆ, ಒಂದಷ್ಟು ತೆಂಗಿನ ತೋಟಗಳು, ಒಂದೆರಡು ಹೋಟೆಲ್, ಬ್ಯಾಂಕು, ಸಣ್ಣಪುಟ್ಟ ಅಂಗಡಿಗಳು, ಸ್ಕೂಲು, ಆಸ್ಪತ್ರೆ ಒಂದಷ್ಟು ನಾಡ ಹೆಂಚಿನ, ಮಂಗಳೂರು ಹೆಂಚಿನ ಮನೆಗಳು, ಹೀಗೆ ಒಂದು ಚಿಕ್ಕ ವ್ಯವಸ್ಥೆಯ ಮತ್ತು ಕಾಡಿನ ಮರಗಳ, ವನ್ಯಪ್ರಾಣಿಗಳ ಕಳ್ಳ ಮಾರಾಟ, ಸರ್ಕಾರಕ್ಕೆ ದಗಾ ಹಾಕುವ ವ್ಯವಹಾರಗಳು, ನಿಧಿಯ ಹುಡುಕಾಟ, ಇಸ್ಪೀಟು, ಕುಡಿತ ಎಲ್ಲವೂ ನಡೆಯುವ, ಎಲ್ಲೂ ಕಾಣಬಹುದಾದ ಸಣ್ಣ ಊರದು.

ಕಥಾ ನಾಯಕ ಶಿವರಾಮ ಬ್ಯಾಂಕಿನಲ್ಲಿ ಕೆಲಸ ಸಿಕ್ಕಾಗ, ಮೊದಲ ಶಾಖೆಯಾಗಿ ದಕ್ಷಿಣ ಕನ್ನಡದ ಕುಂದಾಪುರದಿಂದ ಬಯಲು ಸೀಮೆಯ ಕಲ್ಕೆರೆಗೆ ಬರುತ್ತಾನೆ. ಹಾಗೆ ಬಂದ ದಿನದಿಂದ ಪೋರ್ಟ್‌ಬ್ಲೇರಿಗೆ ವರ್ಗವಾಗಿ ಹೋಗುವ ತನಕ ಅಲ್ಲಿ ಅವನು ಕಳೆಯುವ ನಾಲ್ಕು ತಿಂಗಳ ಅನುಭವದ ಕತೆ ಇದು. ಕಾದಂಬರಿಯಲ್ಲಿ ಬರುವ ಮುಕುಂದೂರು ಸ್ವಾಮಿಗಳು ಮತ್ತು ಬೆಳಗೆರೆ ಕೃಷ್ಣಶಾಸ್ತ್ರಿಗಳ ಸನ್ನಿವೇಶ ಹಾಗೂ ಬ್ಯಾಂಕಿನಲ್ಲಿ ನಡೆಯುವ ಪೂಜಾರಿ ಸಾಲಮೇಳದ ಘಟನೆಗಳಿಂದ ಇದು ೯೦ರ ದಶಕದ ಕಾಲಮಾನದಲ್ಲಿ ನಡೆದಿರುವ ಕತೆ ಎಂದುಕೊಳ್ಳಬಹುದು.

ಕರಾವಳಿಯ, ಮಲೆನಾಡಿನ ವ್ಯಕ್ತಿ ಬಯಲು ಸೀಮೆಗೆ ಬರುವುದು, ವಿಜ್ಞಾನವನ್ನು ಓದಿದವನು ಬ್ಯಾಂಕಿನ ಕೆಲಸಕ್ಕೆ ಸೇರುವುದು, ಈ ರೀತಿಯ ಎರಡು ಭಿನ್ನ ಪರಿಸ್ಥಿತಿಗೆ ಶಿವರಾಮ ಒಗ್ಗಿಕೊಳ್ಳಬೇಕಾಗುತ್ತದೆ. ಕೆಲವು ಶ್ರೀಮಂತರನ್ನು, ವಂಚಕರನ್ನು ಹೊರತುಪಡಿಸಿದರೆ ಮುಗ್ಧ ಅನಕ್ಷರಸ್ಥ ಹಾಗೂ ಬಡವರಿಂದ ತುಂಬಿರುವ ಊರು ಕಲ್ಕೆರೆ. ಹಲವು ಜೀವವೈವಿಧ್ಯಗಳಿರುವ ಗರುಡನಗಿರಿ ಹಾಗೂ ಹಿರೇಕಲ್ಲುಗುಡ್ಡ ಎನ್ನುವ ಎರಡು ಬೆಟ್ಟಗಳು ಸನಿಹದಲ್ಲೇ ಇದ್ದು, ಪರಿಸರ ಪ್ರೇಮಿಯಾದ ಶಿವರಾಮ ಸಹಜವಾಗಿಯೇ ಆ ಬೆಟ್ಟಗಳ ಬಗೆಗೆ ಆಕರ್ಷಿತನಾಗುತ್ತಾನೆ.

ಕಲ್ಕೆರೆಗೆ ಹೋದ ದಿನವೇ ಶಿವರಾಮ ನೋಡುವ ಕೆಂಚಪ್ಪನ ಕೈಯಲ್ಲಿದ್ದ ಪೆಂಗೋಲಿನ್ (ಚಿಪ್ಪುಹಂದಿ) ಈ ಪರಿಸರದ ಕತೆಯ ಆರಂಭವನ್ನು ಮಾಡುತ್ತದೆ. ಬೇಕಿದ್ದೋ, ಬೇಡದೆಯೋ ಅದನ್ನು ಹಿಂಬಾಲಿಸುವಂತಾಗಿ ಅಲ್ಲಿ ನಡೆಯುತ್ತಿದ್ದ ಕಾಡುಪ್ರಾಣಿಗಳ ಕಳ್ಳಸಾಗಾಣಿಕೆಯ ಜಾಲ ತಿಳಿದುಬರುತ್ತದೆ. ದೇವಸ್ಥಾನ, ಜೀವ ವೈವಿಧ್ಯತೆ, ಆಶ್ರಮ, ಪಾಳುಬಿದ್ದ ಬಂಗಲೆ ಇರುವ ಹಿರೇಕಲ್ಲುಗುಡ್ಡ, ಚಿಪ್ಪುಹಂದಿ, ಹಾವುಗಳು ಇಂತಹ ವನ್ಯಪ್ರಾಣಿಗಳನ್ನು ಹಣಕ್ಕಾಗಿ ಹಿಡಿದು ಮಾರುವ ಅಮಾಯಕನೋ, ಕುಟಿಲಿಯೋ ನಿರ್ಧರಿಸಲಾಗದ ಕೆಂಚಪ್ಪನ ಕಾರ್ಯಸ್ಥಾನವೂ, ವಾಸಸ್ಥಾನವೂ ಹೌದು. ಅವನು ಗರುಡನಗಿರಿ ಬೆಟ್ಟದಲ್ಲಿ ಸಿಗುವುದು. ಅಲ್ಲಿ ಅವನ ಗುಡಿಸಿಲಿನೊಳಗೆ ಕಂಡುಬರುವ ಗೋಣಿಚೀಲದಲ್ಲಿ ಇರಬಹುದಾದ ಯಾವುದೋ ವನ್ಯಪ್ರಾಣಿ, ಫೋಟೋ ತೆಗೆಸಿಕೊಳ್ಳಲು ಒಪ್ಪದೇ ಅವನು ಓಡಿಹೋಗುವುದು ಇವೆಲ್ಲವೂ ಅವನ ಚಟುವಟಿಕೆಗಳಿಗೆ ಪುರಾವೆಯಾಗಿ ಒದಗುತ್ತವೆ.

ಕಲ್ಕೆರೆಯಲ್ಲಿ ನಿತ್ಯ ನಡೆಯುವ ಕುಡಿತದ, ಇಸ್ಪೀಟಿನ ಚಟಕ್ಕೆ ಬಲಿಯಾಗದೆ, ಅಲ್ಲಿನ ಹುಡುಗರ ಜೊತೆಗೆ ಕ್ರಿಕೆಟ್ ಆಡಿಕೊಂಡು, ಅವರಿಂದ ಮತ್ತು ಇನ್ನಿತರ ಕೆಲವು ಹಳ್ಳಿಗರಿಂದ ಹಾಗೂ ಬ್ಯಾಂಕಿನ ಹಂಗಾಮಿ ಪ್ಯೂನ್ ಭಾಸ್ಕರನಿಂದ ಸುತ್ತಮುತ್ತಲಿನ ಆಗುಹೋಗುಗಳ ಬಗ್ಗೆ ತಿಳಿಯುತ್ತಿರುತ್ತಾನೆ. ಊರಿಗೆ ಹೊಸತಾಗಿ ಬಂದ ಕಾಲೇಜಿನ ಪ್ರಿನ್ಸಿಪಾಲ್ ಪರಿಸರ ಪ್ರೇಮಿ ಕಲ್ಲೂರಾಯರು, ಮನೆ ಓನರ್ ಶಾಂತಪ್ಪ ಹಾಗೂ ಪಟೇಲ್

ನರಸಿಂಹಯ್ಯನವರು ಎಲ್ಲರೊಂದಿಗೂ ಹಲವು ವಿಷಯಗಳನ್ನು ಚರ್ಚಿಸುತ್ತಾ ತನ್ನದೇ ವಲಯವನ್ನು ಸೃಷ್ಠಿಸಿಕೊಳ್ಳುತ್ತಾನೆ. ಸಿನಿಕ ಮನೋಭಾವದ ಮ್ಯಾನೇಜರೊಬ್ಬರನ್ನು ಬಿಟ್ಟರೆ ಬ್ಯಾಂಕಿನ ಮಿಕ್ಕೆಲ್ಲರೊಂದಿಗೂ ಸ್ನೇಹದಿಂದ ಇರುತ್ತಾನಾದರೂ, ಯಾರನ್ನೂ ತನ್ನ ಒಳಪರಿಧಿಯಲ್ಲಿ ಬಿಟ್ಟುಕೊಳ್ಳುವ ವ್ಯಕ್ತಿತ್ವ ಅವನದಲ್ಲ. ಹಲವು ಬಾರಿ ಬ್ಯಾಂಕಿನಲ್ಲಿ ನಡೆಯುವ ರಾಜಕೀಯದ ಒಳಸುಳಿಗಳಿಗೆ ಸಿಲುಕಿಕೊಳ್ಳುತ್ತಾನೆ. "ಯಾರು ಹಿತವರು" ಎಂದು ಅರಿವಾಗದೆ ತೊಳಲಾಡುತ್ತಾನೆ.

ಕತೆ ಎರಡು ಆಯಾಮಗಳಲ್ಲಿ ಸಾಗುತ್ತದೆ. ಒಂದು ಬ್ಯಾಂಕಿನಲ್ಲಿನ ಶಿವರಾಮ, ಮತ್ತೊಂದು ಪರಿಸರ ಪ್ರೇಮಿ ಶಿವರಾಮ. ಬ್ಯಾಂಕಿನ ಮ್ಯಾನೇಜರ್ ಮೊಸರಲ್ಲಿ ಕಲ್ಲು ಹುಡುಕುವ, 'ತಾನು ಕಳ್ಳ; ಪರರನ್ನು ನಂಬ' ಎನ್ನುವಂತಹ ಸಿನಿಕ ವ್ಯಕ್ತಿತ್ವದವನು. 'ನೀನಿನ್ನೂ ಪ್ರೊಬೇಷನರಿ, ನಿನ್ನ ಕನ್‌ಫರ್‌ಮೇಷನ್ ನನ್ನ ಕೈಲಿದೆ' ಎನ್ನುತ್ತಾ ಹಲವು ಇಕ್ಕಟ್ಟಿನ ಸಂದರ್ಭಗಳನ್ನು ಸೃಷ್ಟಿಸಿ, ಬೇಕೆಂದೇ ಅವನನ್ನು ಸಿಲುಕಿಸಲು ಯತ್ನಿಸುತ್ತಾ ಶಿವರಾಮನ ಮನಃಶ್ಯಾಂತಿಯೊಂದಿಗೆ ಶಿಕಾರಿಯಾಡುವ ಸ್ಯಾಡಿಸ್ಟ್ ಮನೋಭಾವದವನು. ಮಿಕ್ಕವರೊಂದಿಗೆ, ದಿನನಿತ್ಯದ ಅವರ ಪಾನಗೋಷ್ಠಿಯಲ್ಲಿ, ಇಸ್ಪೀಟ್ ಆಟದಲ್ಲಿ ಭಾಗಿಯಾಗದಿದ್ದರೂ, ಶಿವರಾಮನ ಸಂಬಂಧ ಯಾವುದೇ ವಿರೋಧವಿಲ್ಲದೇ ಸೌಹಾರ್ದವಾಗಿಯೇ ಸಾಗುತ್ತಿರುತ್ತದೆ. ಪೂಜಾರಿ ಸಾಲಮೇಳದ ಸಂದರ್ಭದಲ್ಲಿ ಹಳ್ಳಿಯಲ್ಲಿ ಮತ್ತು ಬ್ಯಾಂಕಿನಲ್ಲಿ ನಡೆಯುವ ರಾಜಕೀಯ ಕುತಂತ್ರಗಳ ಅನಾವರಣವಾಗುತ್ತದೆ.

ಪ್ರೊವೇಷನರಿ ಅಸ್ತ್ರವನ್ನಿಟ್ಟುಕೊಂಡು ಸದಾ ಹೆದರಿಸುವ, ಭಾಸ್ಕರನಿಂದ ಕೆಲಸ ತೆಗೆಯುವ ಮ್ಯಾನೇಜರ್, ಸಾಲ ಕೊಡಿಸುವ ಬ್ರೋಕರ್ ಬಾಬಣ್ಣ, ಕ್ಯಾಶಿಯರ್ ಮತ್ತು ಮ್ಯಾನೇಜರ್ ನಡುವಿನ ಜಗಳದಲ್ಲಿ ನಲಗುವ ಶಿವರಾಮ– ಇವರ ವ್ಯಕ್ತಿತ್ವಗಳನ್ನು ಬಹಳ ಸರಳ, ಸಹಜ ಎನ್ನುವಂತೆ ಕಾದಂಬರಿಯಲ್ಲಿ ಹೆಣೆಯಲಾಗಿದೆ. ಗರುಡನಗಿರಿ ಹಾಗೂ ಹಿರೇಕಲ್ಲು ಗುಡ್ಡದ ಚಾರಣದ ಸನ್ನಿವೇಶಗಳು ಸುಂದರವಾಗಿ ಸೃಷ್ಟಿಯಾಗಿವೆ. ಪ್ರಕೃತಿಯ ವರ್ಣನೆ ಸೊಗಸಾಗಿದೆ. ಎಲ್ಲೂ ತೀರಾ ಅಲಂಕಾರಿಕ ವರ್ಣನೆಗಳಿಲ್ಲದೆ ಒಬ್ಬ ಸಾಮಾನ್ಯ ಓದುಗನಿಗೆ ದಕ್ಕುವಂತಹ ಅನುಭವಗಳಾಗಿ ನಿಲ್ಲುತ್ತವೆ. ಪುತ್ರಜಾಜಿ ಮರ, ಬ್ರಿಟಿಷರ ಬಂಗಲೆ, ಕರಡಿಯ ದರ್ಶನ, ಕೆಂಚಪ್ಪನ ಗುಡಿಸಲು, ಮುಕುಂದೂರು ಸ್ವಾಮಿಗಳು ಮತ್ತು ಬೆಳಗೆರೆ ಕೃಷ್ಣಶಾಸ್ತ್ರಿಗಳು (ಇವರ ಹೆಸರನ್ನು ಕಾದಂಬರಿಯಲ್ಲಿ ಹೇಳದಿದ್ದರೂ ಸಾಂದರ್ಭಿಕವಾಗಿ ಅವು ಅರ್ಥವಾಗುತ್ತದೆ) ಇವರು ಚಾರಣದ ಸಮಯದಲ್ಲಿ ಸಿಗುವುದು, ದೂರದಿಂದ ಕಾಣುವ ಅವರ ಆಶ್ರಮ ಎಲ್ಲವೂ ಪೂರಕ ವಿಷಯಗಳಾಗಿ ಕಾದಂಬರಿಯಲ್ಲಿ ಬೆರೆತುಹೋಗಿ ಓದುಗರಿಗೆ ಇದು ಕಾಲ್ಪನಿಕವೆನಿಸದೆ ನೈಜ ಘಟನೆಯೆನಿಸುವಂತಿದೆ. ಹುಡುಗರೊಂದಿಗೆ ಹೋದ ಚಾರಣಕ್ಕೂ, ಕಲ್ಲೂರಾಯರೊಂದಿಗೆ ನಡೆಸಿದ ಚಾರಣಕ್ಕೂ ಇರುವ ವ್ಯತ್ಯಾಸ ಗಮನ ಸೆಳೆಯುತ್ತದೆ. ಸುಮ್ಮನೆ ಕುತೂಹಲದಿಂದ ಹೋಗುವ ಚಾರಣಕ್ಕೂ, ಒಬ್ಬ ಪರಿಸರ ವಿಜ್ಞಾನಿಯೊಂದಿಗೆ ಹೋದಾಗ ಗಮನಿಸುವ ಅಂಶಗಳಲ್ಲಿರುವ ಭಿನ್ನತೆ ಸ್ಪಷ್ಟವಾಗುತ್ತದೆ. ಫೋಟೋ ತೆಗೆಯುವ, ಅದನ್ನು ಪ್ರಿಂಟ್ ಹಾಕಿಸುತ್ತಿದ್ದ ಅಂದಿನ ವಿಧಾನವು ಒಂದು ನಾಸ್ಟಾಲ್ಜಿಕ್ ನೆನಪಾಗಿ ಬರುತ್ತದೆ.

ಕತೆಗೆ ಪೂರಕವಾಗಿ ಬರುವ ಹಲವು ಪಾತ್ರಗಳಲ್ಲಿ ಭಾಸ್ಕರ, ಕೆಂಚಪ್ಪ, ಪ್ರೊ. ಕಲ್ಲೂರಾಯ ಇವರ ಪಾತ್ರಪೋಷಣೆ ಸೊಗಸಾಗಿದೆ. ವಿದ್ಯಾಭ್ಯಾಸ ವಂಚಿತನಾಗಿ ಎಂದೋ ಒಂದು ದಿನ ಸಿಗಬಹುದಾದ ಖಾಯಂ ಉದ್ಯೋಗದ ನಿರೀಕ್ಷೆಯಲ್ಲಿ ಎಲ್ಲರಿಗೂ ಎಲ್ಲ ರೀತಿಯ ಸೇವೆಗಳನ್ನೂ ಮಾಡಿಕೊಂಡಿರುವ ಅಮಾಯಕ ಭಾಸ್ಕರ, ಪೆಂಗೋಲಿನ್ನಂತಹ ವಿಶಿಷ್ಟ ವನ್ಯಪ್ರಾಣಿಗಳನ್ನು ಕಾಡಿನಲ್ಲಿ ಹಿಡಿದು ಅವನ್ನು ಗುಟ್ಟಾಗಿ ಮಾರುವ ಕೆಂಚಪ್ಪ, ಅದರೊಟ್ಟಿಗೇ ಕಲ್ಲೂರಾಯನಂತಹ ವಿಜ್ಞಾನಿಗಳಿಗೆ ಎಲೆಗಳ ಮಾದರಿಗಳನ್ನೂ ತಂದುಕೊಡುವ

ಸಹಾಯಕನೂ ಆಗುತ್ತಾನೆ. ಅವನಿಗೆ ಅವೆರಡರ ನಡುವಿನ ವ್ಯತ್ಯಾಸ ತಿಳಿಯದು. ಅಂತೆಯೇ ಕಾಲೇಜಿನ ಪ್ರಿನ್ಸಿಪಾಲನಾಗಿಯೂ ಸಾಕಷ್ಟು ಮೂಲಸೌಕರ್ಯಗಳಿಲ್ಲದೆ ಒದ್ದಾಡುವ, ಪರಿಸರದ ಪ್ರತಿಯೊಂದು ಜೀವಿಯ ಬಗ್ಗೆಯೂ ಅಪಾರ ಕಾಳಜಿಯಿರುವ ಪರಿಸರ ಪ್ರೇಮಿ ಕಲ್ಲೂರಾಯ –ಇವರೆಲ್ಲಾ ಕಾದಂಬರಿ ಓದಿ ಮುಗಿಸಿದ ನಂತರವೂ ಮನದಲ್ಲಿ ಉಳಿದುಹೋಗುತ್ತಾರೆ. ಕಾದಂಬರಿಯಲ್ಲಿ ಬಹಳ ಪಾತ್ರಗಳಿಲ್ಲ; ನಾಯಕಿಯಂತೂ ಇಲ್ಲವೇ ಇಲ್ಲ. ಕತೆಗೆ ಪೂರಕವಾಗಿರುವಷ್ಟು ಪಾತ್ರಗಳನ್ನು ಮಾತ್ರಾ ಸೃಷ್ಟಿಸಿಕೊಂಡು ಅವುಗಳನ್ನು ಅವಶ್ಯಕತೆಯಿರುವಷ್ಟು ಮಾತ್ರ ಬೆಳೆಸಿದ್ದಾರೆ ಕಾದಂಬರಿಕಾರರು.

ಇಡೀ ಕಾದಂಬರಿಯಲ್ಲಿ ಮುಖ್ಯ ಪಾತ್ರ ವಹಿಸುವುದು ಪರಿಸರವೇ. ಆನೆಗೆರೆ ಕೆರೆಯಲ್ಲಿ ಆಹಾರವನ್ನು ಹುಡುಕುವ ಫ್ಲೆಮಿಂಗೋಗಳು, ಮರ ಕತ್ತರಿಸಿ ಗೂಡು ಸಮೇತ ಕೆಳಗೆ ಬಿದ್ದಾಗ ಅಳುವ ಕೊಕ್ಕರೆಗಳು, ಕೆಂಚಪ್ಪನ ಗುಡಿಸಲಲ್ಲಿ ಗೋಣಿಯಲ್ಲಿ ಬಂಧಿತವಾಗಿರುವ ಪ್ರಾಣಿಗಳು, ಜನರು ಬಡಿದು ಕೊಂದ ಹಾವುಗಳು, ಚೇಳುಗಳು, ಜೇಡಗಳು ಎಲ್ಲವೂ ಕಾದಂಬರಿಯ ಪಾತ್ರಗಳೇ ಆಗಿವೆ. ಸೃಷ್ಟಿಯಲ್ಲಿ ಯಾವ ಜೀವಿಯೂ ನಗಣ್ಯವಲ್ಲ. ಎಲ್ಲವಕ್ಕೂ ಅದರದರದ್ದೇ ಪಾತ್ರವಿದೆ. ಸೃಷ್ಟಿಯ ಸಮತೋಲನವನ್ನು ಕಾಪಾಡಲು ಆಯಾ ಪರಿಸರದಲ್ಲಿ ಯಾವ ಯಾವ ಜೀವ ವೈವಿಧ್ಯ, ಸಸ್ಯ ವೈವಿಧ್ಯಗಳಿವೆಯೋ ಅವುಗಳ ನಾಶವಾಗಬಾರದು. ಒಂದು ಕೊಂಡಿ ಕಳಚಿದರೂ ಅದು ಪರಿಸರದ ಅಸಮತೋಲನಕ್ಕೆ ಕಾರಣವಾಗುತ್ತದೆ ಎನ್ನುವುದು ಇಡೀ ಕಾದಂಬರಿಯ ಆಶಯ. ಅರಣ್ಯವನ್ನು ಪುನಃ ಬೆಳೆಸಲು ಬೇರೇನೂ ಮಾಡಬೇಕಿಲ್ಲ; ತಾನಾಗಿಯೇ ಹುಟ್ಟುತ್ತಿರುವ ಗಿಡಗಳನ್ನು ಮೇಕೆಗಳಿಂದ ಮೇಯಿಸದೆ ಹಾಗೇ ಬಿಟ್ಟರೆ ಪ್ರಕೃತಿ ಮರುಸೃಷ್ಟಿ ಮಾಡಿಕೊಳ್ಳುತ್ತದೆ ಎನ್ನುವ ನಿಸರ್ಗದ ಅದ್ಭುತ ಶಕ್ತಿಯ ಸಂದೇಶ ಕಾದಂಬರಿಯಲ್ಲಿದೆ.

ಶಶಿಧರ ಹಾಲಾಡಿಯವರ ಬರೆಹಗಳನ್ನು ಓದುತ್ತಿರುವವರಿಗೆ ಅವರ ಪರಿಸರದ ಕಾಳಜಿ, ನಿಸರ್ಗ ಪ್ರೇಮ ಸುಪರಿಚಿತವೇ. ಕರಾವಳಿಯ ಮಲೆನಾಡಿನ ಪರಿಸರದಿಂದ ಬಂದವರಾದರೂ, ಬಯಲುಸೀಮೆಯ ಆವರಣದಲ್ಲೂ ಅವರು ಅದೇ ಕುತೂಹಲ, ಆಪ್ತತೆ, ಆಸಕ್ತಿ ತೋರಿದ್ದಾರೆ. ಕತೆಯ ಕಡೆಯಲ್ಲಿ ಗರುಡನಗಿರಿ ರಕ್ಷಿತಾರಣ್ಯ ಶಿವರಾಮನ ಪ್ರಯತ್ನದ ಫಲವಾಗಿ ನಿಜವಾದ ರಕ್ಷಿತಾರಣ್ಯವಾಗಿ ಮತ್ತೆ ಜೀವಪಡೆಯುವ ಸನ್ನಿವೇಶ ಒಂದು ಆಶಾದಾಯಕ, ಸಕಾರಾತ್ಮಕ ಬೆಳವಣಿಗೆಯಾಗಿ ಕಾಣುತ್ತದೆ. ಅಂತೆಯೇ ಕಾದಂಬರಿಯ ಕಡೆಯಲ್ಲಿ ಕಥಾನಾಯಕ ಅಂಡಮಾನ್‌ಗೆ ಹೋಗುವ ಸಂದರ್ಭ ಬಂದಾಗಲೂ ಶಿವರಾಮ ಅದನ್ನು ಶಿಕ್ಷೆಯೆಂದುಕೊಳ್ಳದೆ, ಅಲ್ಲಿನ ಪರಿಸರವನ್ನು ಅಧ್ಯಯನ ಮಾಡುವ ಅವಕಾಶವೆಂದುಕೊಳ್ಳುವುದು ಇದಕ್ಕೆ ನಿದರ್ಶನವಾಗಿದೆ.

ಬೆನ್ನುಡಿಯನ್ನು ಬರೆದಿರುವ ಬೆಳಗೋಡು ರಮೇಶ್ ಭಟ್ಟರು ಈ 'ಅಬ್ಬೆ' ಕಾದಂಬರಿಯನ್ನು ನೋಡುವ ರೀತಿ ವಿಭಿನ್ನವಾಗಿದೆ. 'ಕಟ್ಟುಕಥೆಯ ವ್ಯಾಪ್ತಿಯಿಂದ ಒಟ್ಟು ಕಥೆಯನ್ನು ಹೊರಗಿಡುವ ಎರಡು ಆಯಾಮಗಳನ್ನು ಇಲ್ಲಿನ ಕಥಾಶಿಲ್ಪದಿಂದ ಪ್ರತ್ಯೇಕಿಸಿ ಗುರುತಿಸಿದಾಗ ಶಶಿಧರ ಹಾಲಾಡಿ ಅವರ ಕಥನ ಕಲೆಯ ವೈವಿಧ್ಯ ಮತ್ತು ವೈಶಿಷ್ಟ್ಯ ಮನದಟ್ಟಾಗುತ್ತದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪೂಚಂತೇ ಅವರ 'ಕರ್ವಾಲೋ' ಕಾದಂಬರಿಯನ್ನು ಇದು ಬಹುಮಟ್ಟಿಗೆ ಹೋಲುತ್ತದೆ ಎನ್ನುವುದು ಕೆಲವರ ಅಭಿಪ್ರಾಯ. ಯಾರನ್ನೂ, ಯಾರೊಂದಿಗೂ ಹೋಲಿಸಲೇಬಾರದು ಎನ್ನುವುದು ನನ್ನ ಸ್ವಂತ ಅಭಿಪ್ರಾಯ. ಅವರವರ ಕಾಣ್ಕೆಯಂತೆ, ಮನೋಧರ್ಮದಂತೆ ಅವರವರ ಬರಹವಿರುತ್ತದೆ. ಆದರೆ ಇಲ್ಲಿ ಹಲವು ವಿಮರ್ಶಕರು

ಕರ್ವಾಲೋದೊಂದಿಗೆ ಅಬ್ಬೆಯನ್ನು ಹೋಲಿಸುವ ಪ್ರಯತ್ನ ಮಾಡಿರುವಾಗ ಈ ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತದೆ. ಅದರಲ್ಲಿ ಬರುವ ಮಂದಣ್ಣನಂತಹ ಭಾಸ್ಕರ, ವಿಜ್ಞಾನಿ ಕರ್ವಾಲೋನಂತಹ ಪ್ರೊಫೆಸರ್ ಕಲ್ಲೂರಾಯ, ಹಾರುವ ಓತಿಯಂತಹ ಅಬ್ಬೆ, ಜೈವಿಕ ಮಾದರಿಗಳನ್ನು ತಂದುಕೊಡುವ ಹಾವು ಹಿಡಿಯುವ ಯೆಂಕ್ಟನಂತಹ ಕೆಂಚಪ್ಪ, ಇವರೆಲ್ಲರ ಹಿಂದಿನ ಎರಡೂ ಕಾದಂಬರಿಗಳ ಕಥಾನಾಯಕರು– ಈ ಅಂಶಗಳು ಮಾತ್ರಾ ಅಬ್ಬೆಯನ್ನು ಕರ್ವಾಲೋ ಸಮೀಪಕ್ಕೆ ತಂದಿದೆ. ಇನ್ನೂ ಕೆಲವರಿಗೆ ಈ ಬರಹ ಖ್ಯಾತ ಸಸ್ಯಶಾಸ್ತ್ರಜ್ಞ ಬಿ ಜಿ ಎಲ್ ಸ್ವಾಮಿಯವರನ್ನು ನೆನಪಿಸಿದೆ. ನನಗೆ ಹಲವೆಡೆ ಶಿವರಾಮ ಕಾರಂತರ ನೆನಪು ಬಂದದ್ದೂ ಇದೆ. ಆದರೆ ಪ್ರತಿಯೊಬ್ಬರೂ ವಸ್ತುವನ್ನು ಕಾಣುವ ದೃಷ್ಟಿಯಲ್ಲಿ ವ್ಯತ್ಯಾಸವಿದೆ. ಪೂಚಂತೇಯವರು ಪರಿಸರದೊಂದಿಗೇ ಪೂರ್ತಿ ಜೀವನವನ್ನು ಸವೆಸಿ ಅದರೊಂದಿಗೇ ಬದುಕು ಕಟ್ಟಿಕೊಂಡವರು. ಬಿ ಜಿ ಎಲ್ ಸ್ವಾಮಿಯವರು ಅಧ್ಯಯನಶೀಲತೆಯಿಂದ ಪರಿಸರವನ್ನು ಗಮನಿಸಿದವರು. ಕಾರಂತರೂ ಒಬ್ಬ ಮಹತ್ವದ ಪರಿಸರವಾದಿಯಾಗಿದ್ದು ತಮ್ಮ ಹಲವು ಕಾದಂಬರಿಗಳಲ್ಲಿ ಪರಿಸರದ ಕುರಿತಾಗಿ ಬರೆದವರು. ಆದರೆ ಶಶಿಧರ ಹಾಲಾಡಿಯವರು ನಿಸರ್ಗದೊಂದಿಗೆ ಬೆಳೆದರೂ, ಬೆರೆತರೂ, ಪರಿಸರದೊಂದಿಗಿನ ಪ್ರೀತಿಯನ್ನು ಉಳಿಸಿಕೊಂಡೇ ಬಂದಿದ್ದರೂ, ಅದೇ ಅವರ ಬದುಕಲ್ಲ; ಬದುಕು ಕಟ್ಟಿಕೊಂಡದ್ದು ವ್ಯಾವಹಾರಿಕ ಜಗತ್ತಿನೊಂದಿಗೆ. ಹಾಗಾಗಿ ಒಬ್ಬೊಬ್ಬರೂ ಪರಿಸರವನ್ನು ನೋಡುವ ದೃಷ್ಟಿ ಬೇರೆ ಬೇರೆಯೇ ಎಂದು ನನಗನಿಸುತ್ತದೆ. ಪೂಚಂತೇಯವರ ಸಾಹಿತ್ಯದಲ್ಲಿ ಹಾಸ್ಯ ಸಹಜವಾಗಿ ಬೆರೆತುಹೋಗಿರುತ್ತದೆ. ಅಂತೆಯೇ ಬಿ ಜಿ ಎಲ್ ಸ್ವಾಮಿಯವರದರಲ್ಲೂ ಸಹಾ. ಆದರೆ ಹಾಲಾಡಿಯವರು ಮತ್ತು ಕಾರಂತರ ಸಾಹಿತ್ಯದಲ್ಲಿ ಹಾಸ್ಯಕ್ಕೆ ಅಷ್ಟಾಗಿ ಮಹತ್ವ ಕಾಣುವುದಿಲ್ಲ. ಇವರಿಬ್ಬರ ಗಮನಿಕೆಯ ರೀತಿಯೇ ಬೇರೆ; ಅವರಿಬ್ಬರೂ ಒಂದು ಸಾಕ್ಷೀಭಾವದಿಂದ ಗಮನಿಸುತ್ತಾರೆ ಎಂದು ನನಗನ್ನಿಸುತ್ತದೆ.

ಒಂದು ಡಾಕ್ಯುಮೆಂಟರಿಯ ಮಾದರಿಯಲ್ಲಿ ನೀರಸವಾಗಬಹುದಾಗಿದ್ದ ಕಾದಂಬರಿ, ಹಾಲಾಡಿಯವರ ಲೇಖನಿಯಲ್ಲಿ ಸುಂದರವಾದ ರೂಪತಾಳಿ, ಸರಾಗವಾಗಿ ಓದಿಸಿಕೊಳ್ಳುತ್ತದೆ. ವಸ್ತುವಿನ ಆಯ್ಕೆಯಲ್ಲಿ ಪೂಚಂತೇಯವರಂತೆ ಇವರೂ ಪರಿಸರವನ್ನೇ ಆಯ್ದುಕೊಂಡಿದ್ದರೂ, ನಿರೂಪಣೆಯ ವಿಧಾನ ವಿಭಿನ್ನವಾಗಿದೆ. ಸಾವಧಾನದಿಂದ ಪದಗಳನ್ನು ಹೆಕ್ಕಿ ಮಾಡಿದ ಸಮಾಧಾನದ ಸಹಜ ನಿರೂಪಣೆಯಾಗಿದೆ. ಇಡೀ ಕಾದಂಬರಿಯಲ್ಲಿ ಶಿವರಾಮ ಎಲ್ಲಿಯೂ ತನ್ನ ಅಪ್ಪ, ಅಮ್ಮ, ಕುಟುಂಬದವರನ್ನು ನೆನಪಿಸಿಕೊಳ್ಳದೇ ಇರುವುದು ನನಗೆ ಅಚ್ಚರಿಯೆನಿಸಿತು. "ಅಬ್ಬೆ" ನಿಜವಾಗಿ ಇದೆಯೋ, ಇಲ್ಲವೋ ತಿಳಿಯದು. ಮನುಷ್ಯನ ಪ್ರಾಣ ತೆಗೆಯುವಷ್ಟು ವಿಷಪೂರಿತವೋ ಅಲ್ಲವೋ ತಿಳಿಯದು. ಅದನ್ನು ಕಂಡವರಿಲ್ಲ; ಹಾಗೆಂದು ಅದು ಇಲ್ಲವೇ ಇಲ್ಲವೆಂದೂ ಹೇಳುವಂತಿಲ್ಲ. ಒಟ್ಟಿನಲ್ಲಿ ಒಂದು ನಿಗೂಢ ಲೋಕವನ್ನು ತೆರೆದಿಡುತ್ತಾ ಒಂದು ಒಳ್ಳೆಯ ಕಾದಂಬರಿಯನ್ನು ಓದಿದ ಅನುಭವ ನೀಡಿ ಮನಸ್ಸಿನಲ್ಲಿ ಉಳಿದುಹೋಗುತ್ತದೆ, 'ಅಬ್ಬೆ'.

***